بِسْمِ اللّٰہِ الرَّحْمٰنِ الرَّحِیْمِ نَحْمَدُہٗ وَنُصَلِّی عَلٰی رَسُوْلِہِ الْکَرِیْمِ وَعَلٰی عَبْدِہِ الْمَسِیْحِ الْمَوْعُوْدِ

وَلَقَدْ نَصَرَكُمُ اللّٰهُ بِبَدْرٍ وَّاَنْتُمْ اَذِلَّةٌ


ವರ್ಷ: 03

ಸಂಚಿಕೆ: 30

# ಕನ್ನಡ ಬದರ್ ವಾರ ಪತ್ರಿಕೆ

WEEKLY BADAR QADIAN KANNADA

ವಾರ್ಷಿಕ ಶುಲ್ಕ ರೂ.600/–

ಸಂಪಾದಕರು: ತಾರಿಖ್ ಅಹ್ಮದ್ ಇದ್ರೀಸ್.

28 ಜುಲೈ 2022, 28 ವಫಾ 1401 ಹಿಜರಿ ಶಮ್‌ಸಿ,
28 ಧಿಲ್ ಹಜ್ಜ 1443 ಹಿಜರಿ ಖಮರಿ.


## ಅಹ್ಮದಿಯಾ ವಾರ್ತೆ

ಅಲ್‌ಹಮ್ದುಲಿಲ್ಲಾಹ್! ಹುಝೂರ್ ಅನ್ವರ್ ಅಯ್ಯದಹುಲ್ಲಾಹುತಆಲ ಬಿನಸ್ರಿಹಿಲ್ ಅಝೀಝ್‌ರವರು ಆರೋಗ್ಯವಾಗಿದ್ದಾರೆ. ಹುಝೂರ್ ರವರ ಯೋಗಕ್ಷೇಮಕ್ಕಾಗಿ, ಶುಭಕಾರ್ಯಗಳಲ್ಲಿ ಯಶಸ್ಸುಗಳಿಸಲಿಕ್ಕಾಗಿ ದುಆ ಮಾಡುತ್ತಾ ಇರಿ, ಅಲ್ಲಾಹನು ಹುಝೂರ್ ರವರನ್ನು ಪ್ರತಿಕ್ಷಣ ಸಂರಕ್ಷಿಸಲಿ– **ಆಮೀನ್**

اَللّٰھُمَّ اَیِّدْ اِمَامَنَا بِرُوْحِ الْقُدُسِ
وَبَارِکْ لَنَا فِیْ عُمُرِہٖ وَاَمْرِہٖ

## ಅಲ್ಲಾಹನ ಉಪದೇಶ

وَذَرِ الَّذِيْنَ اتَّخَذُوْا دِيْنَهُمْ لَعِبًا
وَّلَهْوًا وَّغَرَّتْهُمُ الْحَيٰوةُ الدُّنْيَا

**(ಅಲ್ ಅನ್‌ಆಮ್ : 71)**

**ಅಂದರೆ: ತಮ್ಮ ಧರ್ಮವನ್ನು ಆಟ ಮತ್ತು ವಿನೋದವನ್ನಾಗಿ ಮಾಡಿದವರನ್ನೂ ಐಹಿಕ ಜೀವನಕ್ಕೆ ಮೋಸ ಹೋದವರನ್ನೂ ನೀನು ಬಿಟ್ಟು ಬಿಡು.**

## ಪ್ರವಾದಿ ಮುಹಮ್ಮದ್(ಸ)ರವರ ಉಪದೇಶ

### ಮನೆಯ ಆಹಾರ ಮತ್ತು ಪತಿಯ ದುಡಿಮೆಯಿಂದ ಪತ್ನಿಯು ಅಲ್ಲಾಹನ ಮಾರ್ಗದಲ್ಲಿ ಖರ್ಚು ಮಾಡಬೇಕು.

(2055) ಹ಼ರ್ಝ್‌ರತ್ ಆಯಿಷಾ(ರ) ವರದಿ ಮಾಡುತ್ತಾರೆ. ನಬಿ(ಸ) ನುಡಿದರು. ಸ್ತ್ರೀಯು ತನ್ನ ಮನೆಯ ಆಹಾರದಿಂದ ಅಲ್ಲಾಹನ ಮಾರ್ಗದಲ್ಲಿ ವ್ಯರ್ಥಗೊಳ್ಳದ ರೀತಿಯಲ್ಲಿ ಖರ್ಚು ಮಾಡಿದರೆ ಅವಳಿಗೆ ಅದರ ಪುಣ್ಯ ದೊರೆಯುವುದು, ಅವಳು ಖರ್ಚು ಮಾಡಿದ ಕಾರಣ ಅವಳ ಪತಿಗೂ ಸಹ, ಏಕೆಂದರೆ ಅದು ಅವನ ದುಡಿಮೆಯಾಗಿದೆ. ಅವರಿಬ್ಬರ ಪುಣ್ಯ ಕಡಿಮೆ ಆಗದು.

(2056) ಹಝ್‌ರತ್ ಅಬೂ ಹುರೈರ(ರ) ವರದಿ ಮಾಡುತ್ತಾರೆ. ನಬಿ(ಸ) ಹೇಳಿದರು. ಸ್ತ್ರೀಯೊಬ್ಬಳು ತನ್ನ ಪತಿಯ ದುಡಿಮೆಯಿಂದ ಅವನ ಅನುಮತಿಯಿಲ್ಲದೆ ಖರ್ಚು ಮಾಡಿದರೆ (ಆ ಪುರುಷನಿಗೂ) ಸಹ ಅದರ ಅರ್ಧ ಪುಣ್ಯ ಲಭಿಸುವುದು.

**(ಸಹೀಹ್ ಬುಖಾರಿ, ಸಂಪುಟ–4, ಕಿತಾಬುಲ್ ಬುಯೂ, ಖಾದಿಯಾನ್ 2008)**

**ಒಬ್ಬ ಧರ್ಮನಿಷ್ಠ ವ್ಯಕ್ತಿಯು ಗುಡಿಸಲಿನಲ್ಲಿದ್ದೂ ನಿಜವಾದ ಸಮೃದ್ಧಿಯನ್ನು ಕಂಡುಕೊಳ್ಳಬಹುದು, ಲೌಕಿಕ ಮತ್ತು ದುರಾಸೆಯ ವ್ಯಕ್ತಿಗೆ ಉತ್ತಮವಾದ ಕೋಟೆಯಲ್ಲಿಯೂ ಸಹ ನೆಮ್ಮದಿ ಕಂಡುಕೊಳ್ಳಲು ಸಾಧ್ಯವಿಲ್ಲ, ಎಷ್ಟು ಹೆಚ್ಚಾಗಿ ಲೌಕಿಕತೆಯನ್ನು ಪಡೆಯುತ್ತೀರೋ, ಅಷ್ಟೇ ಅಂಧಾಕಾರಗಳು ಮುಂದೆ ಬರುತ್ತವೆ, ಆದ್ದರಿಂದ ನಿಜವಾದ ಸೌಕರ್ಯ ಮತ್ತು ಸಂತೋಷವು ಲೌಕಿಕಕ್ಕೆ ಸೇರಿಲ್ಲ ಎಂಬುದನ್ನು ನೆನಪಿಡಿ.**

**ಸಯ್ಯದುನಾ ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಅಧ್ಯಾಪನೆಗಳು**

ಮನುಷ್ಯನಿಗೆ ಈ ಜಗತ್ತಿನಲ್ಲಿ ಏನು ಬೇಕು ಎಂದು ಯೋಚಿಸಿ? ಈ ಜಗತ್ತಿನಲ್ಲಿ ಮನುಷ್ಯನ ದೊಡ್ಡ ಆಸೆ ಸಂತೋಷ ಮತ್ತು ವಿಶ್ರಾಂತಿ ಪಡೆಯುವುದು, ಅದಕ್ಕಾಗಿ ಅಲ್ಲಾಹನು ಒಂದೇ ಒಂದು ಮಾರ್ಗವನ್ನು ನಿಗದಿಪಡಿಸಿದ್ದಾನೆ ಅದು ತಖ್ವದ ಮಾರ್ಗವಾಗಿದೆ ಮತ್ತು ಬೇರೆ ಪದಗಳಲ್ಲಿ ಅದನ್ನು ಪವಿತ್ರ ಖುರ್‌ಆನ್‌ನ ಮಾರ್ಗ ಎಂದು ಹೇಳಲಾಗುತ್ತದೆ ಅಥವಾ ಅದರ ಹೆಸರು ಸಿರಾತೆ ಮುಸ್ತಖೀಮ್ ನೇರವಾದ ಮಾರ್ಗ ಎಂದು ಹೆಸರಿಸಲಾಗಿದೆ.

ಧರ್ಮನಿಷೇಧಿಗಳು ಸಂಪತ್ತು ಮತ್ತು ಆಸ್ತಿಯನ್ನು ಹೊಂದಿದ್ದಾರೆ ಮತ್ತು ಅವರು ತಮ್ಮ ಐಷಾರಾಮಗಳಲ್ಲಿ ಸಂತೋಷವನ್ನು ಹೊಂದಿದ್ದಾರೆ ಎಂದು ಯಾರೂ ಹೇಳಬಾರದು. ನಾನು ನಿಮಗೆ ಸತ್ಯವನ್ನು ಹೇಳುತ್ತೇನೆ, ಅವರು ಪ್ರಪಂಚದ ದೃಷ್ಟಿಯಲ್ಲಿ ಸಂತೋಷವಾಗಿ ಕಾಣುತ್ತಾರೆ, ಮತ್ತು ಲೌಕಿಕ ಹಾಗೂ ಬಾಹ್ಯ ಆರಾಧಕರ ದೃಷ್ಟಿಯಲ್ಲಿ ಸಂತೋಷವಾಗಿ ಕಾಣುತ್ತಾರೆ, ಆದರೆ ವಾಸ್ತವದಲ್ಲಿ ಅವರು ಅಸೂಯೆ ಮತ್ತು ದುಃಖದಿಂದ ಬಳಲುತ್ತಿರುತ್ತಾರೆ, ನೀವು ಅವರ ನೋಟವನ್ನು ನೋಡಿದ್ದೀರಿ, ಆದರೆ ನಾನು ಇಂತಹ ಜನರ ಹೃದಯವನ್ನು ನೋಡುತ್ತೇನೆ ಅವರು ಒಂದು ಸಾರ ಮತ್ತು ಸಲಾಸಿಲ್ ಮತ್ತು ಅಗ್‌ಲಾಲ್‌ನಲ್ಲಿ (ಅವರು ಬಲೆಯಲ್ಲಿ) ಬಂಧಿಸಲ್ಪಟ್ಟಿದ್ದಾರೆ. ಪವಿತ್ರ ಖುರ್‌ಆನ್‌ನಲ್ಲಿ ಅಲ್ಲಾಹನು ನುಡಿಯುತ್ತಾನೆ **ಇನ್ನಾ ಆಅ್‌ತದ್‌ನಾ ಲಿಲ್‌ಕಾಫಿರೀನ ಸಲಾಸಿಲ ವ ಅಗ್‌ಲಾಲ ವ್ವ ಸಈರ** (ಅದ್ದಹರ್:5) "ನಾವು ಅವಿಶ್ವಾಸಿಗಳಿಗೆ ಸಂಕೋಲಗಳನ್ನೂ ಕೊರಳ ಪಟ್ಟಿಗಳನ್ನೂ ಸಿದ್ಧಪಡಿಸಿಟ್ಟಿದ್ದೇವೆ" ಅವರು ಒಳಿತಿನ ಕಡೆಗೆ ಬರುವುದೇ ಇಲ್ಲ. ಮತ್ತು ಎಂತಹ ಸಂಕೋಲಗಳಿದ್ದಾವೆ ಎಂದರೆ ಆ ಸಂಕೋಲಗಳ ಕಾರಣದಿಂದಾಗಿ ಅವರು ಪ್ರಾಣಿಗಳು ಮತ್ತು ಮೃಗಗಳಿಗಿಂತಲೂ ಕೆಟ್ಟವರಾಗುತ್ತಾರೆ. ಅವರ ಕಣ್ಣುಗಳು ಯಾವಾಗಲೂ ಪ್ರಪಂಚದ ಮೇಲೆ ಕೇಂದ್ರೀಕೃತವಾಗಿರುತ್ತವೆ ಮತ್ತು ಅವರು ಭೂಮಿಗೆ ಬಾಗಿರುತ್ತಾರೆ. ಮತ್ತು ಅವರ ಅಂತರಾಳದಲ್ಲಿ ಅಸೂಯೆ ಮತ್ತು ದುಃಖ ಇರುತ್ತದೆ. ಅವರ ಸಂಪತ್ತು ಕಡಿಮೆಯಾದರೆ ಅಥವಾ ಯೋಜನೆ ಸಫಲವಾಗದೇ ಹೋದರೆ ಉರಿದು ಸುಟ್ಟುಬಿಡುತ್ತಾರೆ. ಕೆಲವೊಮ್ಮೆ ಭ್ರಾಂತರಾಗುತ್ತಾರೆ ಮತ್ತು ಹುಚ್ಚರಾಗುತ್ತಾರೆ ಅಥವಾ ನ್ಯಾಯಾಲಯಗಳಲ್ಲಿ ಅಲೆದಾಡುತ್ತಿರುತ್ತಾರೆ. ಇದು ನೈಜ ಮಾತಾಗಿದೆ ಅಂದರೆ ಅಧರ್ಮೀಯರು ಸಈರ್‌ನಿಂದ (ಕೊರಳಿನ ಸಂಕೋಲಗಳಿಂದ) ಖಾಲಿಯಾಗಿರುತ್ತಾರೆ. ಆದ್ದರಿಂದ ಅವನಿಗೆ ಶಾಂತಿ ಮತ್ತು ನೆಮ್ಮದಿ ಲಭಿಸುವುದಿಲ್ಲ. ಇದು ಸಾಂತ್ವನ ಮತ್ತು ನೆಮ್ಮದಿಯ ಅಗತ್ಯ ಫಲಿತಾಂಶವಾಗಿದೆ. ಓರ್ವ ಕುಡುಕನು ಒಂದು ಲೋಟ ಮದ್ಯವನ್ನು ಕುಡಿದು ಹೆಚ್ಚಿನದನ್ನು ಕೇಳುತ್ತಾನೆ ಮತ್ತು ಅವನಲ್ಲಿ ಉರಿಯುವ ಸಂವೇದನೆ ಉಳಿಯುತ್ತದೆ. ಹೀಗೆಯೇ ಲೌಕಿಕ ವ್ಯಕ್ತಿಯೂ ಸಅಈರ್‌ನಲ್ಲಿರುತ್ತಾನೆ. ಅವನ ಬೆಂಕಿಯನ್ನು ಕ್ಷಣವೂ ನಂದಿಸಲು ಸಾಧ್ಯವಿಲ್ಲ. ನೈಜವಾದ ಶ್ರೇಯಸ್ಸು ಓರ್ವ ಮುತ್ತಖಿಗೆ ಮಾತ್ರ ಇದೆ ಅದಕ್ಕಾಗಿ ಅಲ್ಲಾಹನು ಅವನಿಗೆ ಎರಡು ಸ್ವರ್ಗಗಳ ವಾಗ್ದಾನ ಮಾಡಿದ್ದಾನೆ.

ಒಬ್ಬ ಧರ್ಮನಿಷ್ಠ ವ್ಯಕ್ತಿಯು ಗುಡಿಸಲಿನಲ್ಲಿ ನಿಜವಾದ ಸಮೃದ್ಧಿಯನ್ನು ಕಂಡುಕೊಳ್ಳಬಹುದು, ಲೌಕಿಕ ವ್ಯಕ್ತಿಯ ದುರಾಸೆಯು ಉತ್ತಮವಾದ ಕೋಟೆಯಲ್ಲಿಯೂ ಸಹ ಕಂಡುಕೊಳ್ಳಲು ಸಾಧ್ಯವಿಲ್ಲ, ಎಷ್ಟು ಹೆಚ್ಚಾಗಿ ಲೋಕವನ್ನು ಪಡೆಯುತ್ತೀರಿ, ಅಷ್ಟೇ ಅಂಧಾಕಾರಗಳು ಮುಂದೆ ಬರುತ್ತವೆ, ಆದ್ದರಿಂದ ನಿಜವಾದ ಸೌಕರ್ಯ ಮತ್ತು ಸಂತೋಷವು ಲೌಕಿಕಕ್ಕೆ ಸೇರಿಲ್ಲ ಎಂಬುದನ್ನು ನೆನಪಿಡಿ. ಸಂಪತ್ತಿನ ಸಮೃದ್ಧತೆಯು ಹಾಗೂ ಉತ್ತಮ ಉತ್ತಮ ಬಟ್ಟೆಗಳನ್ನು ಧರಿಸುವುದು ಮತ್ತು ಉತ್ತಮವಾದ ಆಹಾರಗಳನ್ನು ತಿನ್ನುವುದರಿಂದ ಸಂತೋಷ ಪಡೆಯುವುದು ಎಂದು ಯೋಚಿಸಬೇಡಿ, ಖಂಡಿತವಾಗಿಯೂ ಇಲ್ಲ, ಬದಲಿಗೆ ಅದು ಧರ್ಮನಿಷ್ಠೆಯ ಮೇಲೆ ಆಧರಿತವಾಗಿರುತ್ತದೆ.

**(ಮಲ್‌ಫೂಝಾತ್, ಸಂಪುಟ–1, ಪುಟ–380, 2018 ಖಾದಿಯಾನ್ ಪ್ರಕಟಿತ)**

### ದಿವ್ಯದೂತರು (ಮಲಾಯಿಕ)

ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ನುಡಿಯುತ್ತಾರೆ: "ಒಬ್ಬ ಮಹತ್ವಶಾಲಿ ವ್ಯಕ್ತಿ ದೇವನ ಪ್ರಾತಿನಿಧ್ಯದ ಉಡುಗೆಯಿಂದ ಭೂಷಿತರಾಗಿ (ದೇವನ ಖಲೀಫರಾಗಿ) ಮತ್ತು ದೇವವಾಣಿಯಿಂದ ಅನುಗ್ರಹೀತರಾಗಿ ಭೂಮಿಗೆ ಇಳಿಯುವಾಗ ದಿವ್ಯದೂತರ ಮತ್ತು ಪವಿತ್ರಾತ್ಮದ ಅವತರಣ ಅಥವಾ ಭೂಮಿಗೆ ಇಳಿಯುವಿಕೆ ಉಂಟಾಗುತ್ತದೆ.ಪವಿತ್ರಾತ್ಮ ವಿಶಿಷ್ಟವಾಗಿ ದೇವನ ಪ್ರತಿನಿಧಿಗೆ ಲಭಿಸುತ್ತದೆ."

***(ಫತ್‌ಹೆ ಇಸ್ಲಾಮ್; ರೂಹಾನೀ ಖಝಾಇನ್ ಸಂಪುಟ 3, ಪುಟ 12)***

لَآ اِلٰہَ اِلَّا اللّٰہُ مُحَمَّدٌ رَّسُوْلُ اللّٰہِ

## ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಬಹುಮಾನದ ಪಂಥಾಹ್ವಾನ

**ಹರ್ ಮುಖಾಲಿಫ್ ಕೊ ಮುಖಾಬಿಲ್ ಪೆ ಬುಲಾಯ ಹಮ್ ನೇ**

ಎಲ್ಲಾ ವಿರೋಧಿಯರನ್ನು ಪ್ರತಿವಾದಿಸಲು ಆಹ್ವಾನಿಸಿದೆವು ನಾವು.

اِنَّ السُّمُوْمَ لَشَرُّ مَا فِی الْعَالَمِ ۞ شَرَّ السُّمُوْمِ عَدَاوَۃُ الصُّلَحَاءِ

## ಪೀರ್ ಮೆಹರ್ ಅಲಿ ಶಾಹ್ ಅವರಿಗೆ ಸೂರಃ ಫಾತಿಹಾದ ತಫ್ಸೀರ್ (ವ್ಯಾಖ್ಯಾನ) ಬರೆಯಲು ವೈಭವಯುತ ಪಂಥಾಹ್ವಾನ, ವಿಜಯಿಯಾದ ಪಕ್ಷದಲ್ಲಿ ಐದು ನೂರು ರೂಪಾಯಿಗಳ ನಗದು ಬಹುಮಾನದ ವಾಗ್ದಾನ.

ಸಯ್ಯದ್‌ನಾ ಹಝ್‌ರತ್ ಮಸೀಹ್ ಮೌಊದ್(ಅ) ರವರ ಈ ವೈಭವಯುತ ಪಂಥಾಹ್ವಾನ ನಾವು ಅವರ ಗ್ರಂಥ "ಅರ್‌ಬಯೀನ್ ನಂಬರ್ 4 ರೂಹಾನಿ ಖಝಾಇನ್ ಸಂಪುಟ 17 ರಿಂದ ಪ್ರಸ್ತುತಪಡಿಸುತ್ತಿರುವೆವು.

ಈ ಹಿಂದೆಯೇ ನಾವು ಹೇಳಿ ಆಗಿದೆ. ಪೀರ್ ಮೆಹರ್ ಅಲಿ ಶಾ ಗೋಲಡವಿ ಸಯ್ಯದ್‌ನಾ ಹಝ್‌ರತ್ ಮಸೀಹ್ ಮೌಊದ್(ಅ) ಅವರ ಕಡು ವೈರಿಗಳಾಗಿದ್ದರು ಮತ್ತು ಅವರಿಂದ ಸ್ಥಾಪಿಸಲ್ಪಟ್ಟ ದೈವಿಕ ಸಂಘಟನೆಯನ್ನು ನಿರ್ನಾಮಗೊಳಿಸಲು ಅಣಿಯಾಗಿದ್ದರು. ಮತ್ತು ಅವರಿಗೆ ಖುರ್‌ಆನ್‌ನ ಜ್ಞಾನ ಹಾಗೂ ಆಧ್ಯಾತ್ಮಿಕ ಜ್ಞಾನವಿರುವ ದಾವೆಯಿತ್ತು. ಸಯ್ಯದ್‌ನಾ ಹಝ್‌ರತ್ ಮಸೀಹ್ ಮೌಊದ್(ಅ) ಸತ್ಯ ಅಸತ್ಯವನ್ನು ಬಯಲು ಮಾಡಲು ಮತ್ತು ಸಾರ್ವಜನಿಕರನ್ನು ಗೊಂದಲದಿಂದ ಪಾರು ಮಾಡಲು ಪೀರ್ ಸಾಹೇಬರಿಗೆ ಪವಿತ್ರ ಖುರ್‌ಆನ್‌ನ ವ್ಯಾಖ್ಯಾನ (ತಫ್ಸೀರ್) ಬರೆಯಲು ಆಹ್ವಾನಿಸಿದ್ದರು. ಪೀರ್ ಸಾಹಿಬ್ ತನ್ನ ಶಿಷ್ಯಂದಿರೆಡೆಯಲ್ಲಿ ಅವಮಾನದಿಂದ ಪಾರಾಗಲು ಒಂದು ನೆಪ ಒಡ್ಡಿ ಪರ್ಯಾಯ ಮಾರ್ಗ ಹಿಡಿದರು. ವಾಸ್ತವದಲ್ಲಿ ಹಝ್‌ರತ್ ಮಸೀಹ್ ಮೌಊದ್(ಅ) ಪವಿತ್ರ ಖುರ್‌ಆನ್‌ನ ತಫ್ಸೀರ್ ತಮ್ಮ ಎದುರಿನಲ್ಲಿ ಬರೆಯಲು ಲಾಹೋರ್ ಸ್ಥಳವನ್ನು ಆಯ್ಕೆ ಮಾಡಿಕೊಂಡಿದ್ದರು. ಪೀರ್ ಮೆಹರ್ ಅಲಿ ಶಾ ಮೌನವಹಿಸಿ ಲಾಹೋರ್ ತಲುಪಿ ಒಂದು ಜಾಹೀರಾತು ಪ್ರಕಟಪಡಿಸಿದರು. ನನಗೆ ಮಿರ್ಝಾ ಸಾಹೇಬರೊಂದಿಗೆ ಚರ್ಚೆ ಮಂಜೂರು ಆಗಿದೆ. ಆದರೆ ಶರತ್ತೇನೆಂದರೆ ಮೊದಲು ಅವರು ತನ್ನ ದಾವೆ ಮಸೀಹ್ ಅಥವಾ ಮೆಹದಿ ಕುರಿತು ನನ್ನೊಡನೆ ಚರ್ಚಿಸಲಿ, ಚರ್ಚೆ ಆದ ನಂತರ ಮೌಲ್ವಿ ಮುಹಮ್ಮದ್ ಹುಸೇನ್ ಬಟಾಲ್ವಿ ಸಾಕ್ಷ್ಯ ನೀಡಿದರೆ–ಮಿರ್ಝಾ ಸೋತರೆ ಅವರು ನನ್ನ ಬೈಅತ್ ಮಾಡಬೇಕು. ಅನಂತರ ನಾನು ಅವರೊಂದಿಗೆ ಪವಿತ್ರ ಖುರ್‌ಆನ್‌ನ ತಫ್ಸೀರ್ (ವ್ಯಾಖ್ಯಾನ ಬರೆಯಲು ಒಪ್ಪುವೆನು. ಅದಾದ ನಂತರ ಅವರ ಚೇಲಾಗಳು ಲಾಹೋರಿನಲ್ಲಿ ತುಂಬಾ ಗೊಂದಲವೆಬ್ಬಿಸಿದರು. ನಮ್ಮ ಪೀರ್ ಸಾಹಿಬರಂತೂ ಎದುರಾಳಿಯಾಗಿ ವಾದಿಸಲು ಲಾಹೋರ್ ತಲುಪಿ ಆಗಿದೆ. ಆದರೆ ಮಿರ್ಝಾ ಸಾಹೇಬ್ ತಲುಪಲಿಲ್ಲ. ಮತ್ತು ಅವರು ಸೋತಿದ್ದಾರೆ. ಪೀರ್ ಸಾಹೇಬರ ಚೆಲಾಗಳು ಆದಷ್ಟು ಮಟ್ಟಿಗೆ ಸಯ್ಯದ್‌ನಾ ಹಝ್‌ರತ್ ಮಸೀಹ್ ಮೌಊದ್(ಅ) ರವರ ಪವಿತ್ರ ವ್ಯಕ್ತಿತ್ವದ ಮೇಲೆ ಅಶ್ಲೀಲ ಭಾಷೆಯ ಉಪಯೋಗ ಮಾಡಿದರು. ಅವರ ಹತ್ಯೆಯ ಫತ್ವ ಸಹ ಹೊರಡಿಸಿದರು. ಆ ಕುರಿತು ಹಿಂದಿನ ಸಂಚಿಕೆಯಲ್ಲಿ ನಾವು ಸಯ್ಯದ್‌ನಾ ಹಝ್‌ರತ್ ಮಸೀಹ್ ಮೌಊದ್(ಅ) ರವರ ಕೆಲವು ಅಧ್ಯಾಪನೆಗಳನ್ನು ಪ್ರಸ್ತುತಪಡಿಸಿದ್ದೆವು. ಇನ್ನೂ ಅವರ ಕೆಲವು ಅಧ್ಯಾಪನೆಗಳು ನಾವು ಈ ಕೆಳಗೆ ಪ್ರಸ್ತುತಪಡಿಸಿದ್ದೆವು.

### ಪೀರ್ ಮೆಹರ್ ಅಲಿ ಶಾ ಸಾಹಿಬ್ ಅವರ ಗಮನವನ್ನು ಸೆಳೆಯಲು ಕೊನೆಯ ಅಸ್ತ್ರ

ಮೇಲ್ಕಾಣಿಸಿದ ಶೀರ್ಷಿಕೆಯನ್ವಯ ಸಯ್ಯದ್‌ನಾ ಹಝ್‌ರತ್ ಮಸೀಹ್ ಮೌಊದ್(ಅ) ಮೇಲ್ಕಾಣಿಸಿದ ಶೀರ್ಷಿಕೆಯನ್ವಯ ಸಯ್ಯದ್‌ನಾ ಹಝ್‌ರತ್ ಮಸೀಹ್ ಮೌಊದ್(ಅ) ತನ್ನ 28 ಆಗಸ್ಟ್ 1900ರ ಜಾಹಿರಾತು ನಂಬ್ರ 233 ರಲ್ಲಿ ಬರೆದರು.

ಪ್ರೇಕ್ಷಕರಿಗೆ ಸರಿಯಾಗಿ ನೆನಪಿರಬಹುದು. ನಾನು ಪ್ರಸಕ್ತ ಉಂಟಾದ ಗೊಂದಲವನ್ನು ದೂರ ಮಾಡಲು ಪೀರ್ ಮೆಹರ್ ಅಲಿ ಶಾ ಸಾಹಿಬರ ಸೇವೆಯಲ್ಲಿ ಈ ಸಲಹೆಯನ್ನು ಮಂಡಿಸಿದ್ದೆ. ನಾವಿಬ್ಬರು ಲಾಟರಿ ಮೂಲಕ ಒಂದು ಖುರ್‌ಆನ್‌ನ ಅಧ್ಯಾಯವನ್ನು ಆಯ್ದುಕೊಂಡು ಅರಬಿ ವಾಕ್ಚಾತಾರ್ಯ ಪ್ರದರ್ಶಿಸುತ್ತ ಅಂತಹದೊಂದು ತಫ್ಸೀರ್ (ವ್ಯಾಖ್ಯಾನ ಬರೆಯಬೇಕು. ಅದು ಖುರ್‌ಆನ್‌ನ ಜ್ಞಾನ ಮತ್ತು ಸಾಕ್ಷ್ಯಗಳು ಹಾಗೂ ಆಧ್ಯಾತ್ಮಿಕ ಜ್ಞಾನ ಒಳಗೊಂಡಿರಬೇಕು. ಮತ್ತೆ ಯಾರಾದರು ಮೂರು ಮೌಲ್ವಿ ಸಾಹೇಬರುಗಳಿಂದ ಅದರ ವಿವರ ಮೊದಲೇ ಜಾಹಿರಾತಿನಲ್ಲಿ ನಮೂದಿಸಿರುತ್ತೇವೆ. ಪ್ರಮಾಣವಹಿಸಿ ಆ ಎರಡೂ ತಫ್ಸೀರುಗಳಲ್ಲಿ ಯಾವುದೇ ಒಂದನ್ನು ಎತ್ತಿಹಿಡಿಯಬೇಕು. ಅದರ ಅರಬಿ ವಾಕ್ಚಾತುರ್ಯ ಅತ್ಯಂತ ಉತ್ತಮ ಮತ್ತು ಅದರ ಆಧ್ಯಾತ್ಮಿಕ ಜ್ಞಾನ ಅತ್ಯಂತ ಉನ್ನತ ಮಟ್ಟದ್ದಾಗಿರಬೇಕು. ಅಂದಹಾಗೆ ಪೀರ್ ಸಾಹಿಬರ ಅರಬಿಯನ್ನು ಆದ್ಯತೆ ಕೊಡುವುದಾದರೆ ನಾನು ತಿಳಿದುಕೊಳ್ಳುವೆನು. ಅಲ್ಲಾಹನು ನನ್ನ ಜೊತೆಗೆ ಇಲ್ಲ. ಆಗ ಅವರ ವಿಜಯವನ್ನು ನಾನು ಒಪ್ಪಿಕೊಳ್ಳುವೆನು. ತನ್ನನ್ನು ಸುಳ್ಳುಗಾರನೆಂದು ಭಾವಿಸಿಕೊಳ್ಳುವೆನು. ಹೀಗೆ ಪ್ರಗತಿಯಲ್ಲಿರುವ ಈ ಆತಂಕ ದೂರವಾಗುವುದು. ಒಂದು ವೇಳೆ ನಾನು ವಿಜಯಿಯಾದರೆ ನನ್ನ ದಾವೆ ಒಪ್ಪಿಕೊಳ್ಳಬೇಕಾಗುತ್ತದೆ. ಈಗ ಓದುಗರು ಸ್ವಯಂ ಯೋಚಿಸಿಕೊಳ್ಳಬಹುದು. ಹೀಗೆ ಸರಳ ರೀತಿಯಲ್ಲಿ ತೀರ್ಮಾನಕ್ಕೆ ಬರಬಹುದಾಗಿದೆ. ಅದು ಪೀರ್ ಸಾಹಿಬರಿಗೂ ಲಾಭಕಾರಿಯಾಗಿತ್ತು.

### ಪೀರ್ ಸಾಹಿಬ್ ಚಾಲಾಕಿ ಮತ್ತು ಅಸಂಬದ್ಧ ಶರತ್ತುಗಳನ್ನು ಒಡ್ಡಿ ಸ್ಪರ್ಧೆಯಿಂದ ಪಲಾಯನ ಮಾಡಿದರು.

ಸಯ್ಯದ್‌ನಾ ಹಝ್‌ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ.

ಆದರೆ ಪೀರ್ ಸಾಹಿಬ್ ಈ ಆಹ್ವಾನವನ್ನು ಸ್ವೀಕರಿಸಲಿಲ್ಲ. ಅದರ ಉತ್ತರವಾಗಿ ಈ ಜಾಹೀರಾತು ಕಳುಹಿಸಿದರು. ಮೊದಲು ಖುರ್‌ಆನ್ ಹದೀಸಿನ ತತ್ವಗಳನ್ವಯ ಚರ್ಚೆ ಆಗಬೇಕು. ಮತ್ತು ಚರ್ಚೆಯ ತೀರ್ಪುಗಾರರು ಮೌಲ್ವಿ ಮುಹಮ್ಮದ್ ಹುಸೇನ್ ಸಾಹಿಬ್ ಮತ್ತು ಅವರ ಸಂಗಡಿಗರಿರಬೇಕು. ಅವರು ಪ್ರಮಾಣ ಮಾಡಿ ಹೇಳಿದರೆ ಈ ಚರ್ಚೆಯಲ್ಲಿ ಪೀರ್ ಮೆಹರ್ ಅಲಿ ಶಾ ಸಾಹಿಬ್ ವಿಜಯಿಯಾಗಿದ್ದಾರೆ ಎಂದಾದರೆ ನಾನು ಅವರ ಬೈಅತ್ ಮಾಡುವೆನು. ಮತ್ತೆ ಅವರ ಎದುರಿನಲ್ಲಿ ತಫ್ಸೀರ್ ಸಹ ಬರೆಯುವೆನು. ಈಗ ನೋಡಿ ಅದರ ಉತ್ತರವಾಗಿ ಎಂತಹ ಕುತಂತ್ರವನ್ನು ಬಳಸುತ್ತಾರೆ ಎಂದರೆ ಬಾಯಿಮಾತಿಗೆ ಎಲ್ಲಾ ಶರತ್ತುಗಳು ಒಪ್ಪಿದ್ದೇನೆ ಎನ್ನುತ್ತಾರೆ. ಆದರೆ ತಫ್ಸೀರ್ ಬರೆಯುವ ಕಾರ್ಯಕ್ಕೆ ಕುತಂತ್ರ ಬಳಸಿ ಅದನ್ನು ತಳ್ಳಿ ಹಾಕಿ ಬಾಯಿಮಾತಿನ ಚರ್ಚೆಗೆ ಸೀಮಿತಗೊಳಿಸಿದ್ದಾರೆ. ಜೊತೆಯಲ್ಲಿ ಬೈಅತ್ ಮಾಡುವ ಶರತ್ತು ಒಡ್ಡಿದ್ದಾರೆ. ಎಷ್ಟು ಒತ್ತು ನೀಡಿದರೂ ಅವರ ಬಾಯಿಯಿಂದ ಇಲ್ಲಿಯ ತನಕ ಮಾತು ಹೊರ ಬರಲಿಲ್ಲ. ಹೌದು ನನಗೆ ಹೆಚ್ಚು ಏನೂ ಹೇಳದೇ ಯಾವ ಶರತ್ತು ಇಲ್ಲದೇ ನಿಮ್ಮ ಎದುರಿನಲ್ಲಿ ಅರಬಿ ಭಾಷೆಯಲ್ಲಿ ತಫ್ಸೀರ್ ಬರೆಯಲು ಒಪ್ಪುತ್ತೇನೆ. ಅಲ್ಲದೇ ಅವರ ಚೇಲಾಗಳು ಲಾಹೋರಿನ ಗಲ್ಲಿ ಗಲ್ಲಿಗಳಲ್ಲಿ ಬೊಬ್ಬೆ ಹೊಡೆಯುತ್ತಿದ್ದಾರೆ. ಪೀರ್ ಸಾಹಿಬ್ ಶರತ್ತುಗಳನ್ನು ಒಪ್ಪಿಕೊಂಡಿದ್ದರು. ಮಿರ್ಝಾ ಅವರಿಂದ ಹೆದರಿ ಪಲಾಯನ ಮಾಡಿದ್ದಾರೆ. ಇದು ಎಷ್ಟು ವಿಚಿತ್ರ ಕಾಲವಾಗಿದೆ. ಹುಸಿ ಸುಳ್ಳನ್ನು ಎದುರಿನಲ್ಲಿಯೇ ಆಡುತ್ತಿದ್ದಾರೆ. ಅವರು ಬರೆದಿರುವ ಯಾವ ಯಾವ ಜಾಹೀರಾತು ಇದೆ. ನಾನು ಯಾವ ಹೆಚ್ಚಿನ ಶರತ್ತು ಹಾಕುವುದಿಲ್ಲ. ನನಗೆ ತಮ್ಮ ಎದುರಿನಲ್ಲಿ ಅರಬಿ ಸಾಹಿತ್ಯದೊಂದಿಗೆ ತಫ್ಸೀರ್ ಬರೆಯಲು ನಿರ್ದರಿಸಲಾಗಿದೆ ಮತ್ತು ಅದರ ಮೇಲೆಯೇ ಉಭಯತ್ರರರ ಸತ್ಯ ಅಸತ್ಯದ ನಿರ್ಣಯವಾಗುವುದು ಅದರ ಜೊತೆಗೆ ಯಾವ ಹೆಚ್ಚಿನ ಶರತ್ತು ವಿಧಿಸಲಾಗುವುದಿಲ್ಲ. ಹೌದು ಬಾಯಿಂದ ಹೇಳುತ್ತಾರೆ. ಶರತ್ತುಗಳು ಮಂಜೂರಾಗಿದೆ ಎಂದು. ಆದರೆ ಅದರ ಜೊತೆಯಲ್ಲಿಯೇ ಈ ನ್ಯಾಯ ತೀರ್ಪು ಹೇಳುತ್ತಾರೆ. ಮೊದಲು ಖುರ್‌ಆನ್ ಹಾಗೂ ಹದೀಸಿನ ನೆಲೆಯಲ್ಲಿ ಚರ್ಚೆ ಆಗುವುದು ಎಂದು ಮತ್ತು ಸೋತರೆ ಅದೇ ಸಮಯಕ್ಕೆ ಬೈಅತ್ ಮಾಡಬೇಕು. ವಿಷಾದದ ಸಂಗತಿ ಯಾರೂ ಪೀರ್ ಸಾಹಿಬರ ಈ ಕುತಂತ್ರದ ಬಗ್ಗೆ ಯೋಚಿಸುವುದಿಲ್ಲ. ಸೋಲಿನ ಸ್ಥಿತಿಯಲ್ಲಿ ಕೇವಲ ಮೌಲ್ವಿ ಮುಹಮ್ಮದ್ ಹುಸೇನ್ ಅವರ ಆಣೆಯಿಂದ ನನಗೆ ಬೈಅತ್ ಮಾಡುವ ಆದೇಶ ನೀಡಲಾಗುವುದು, ಅದರ ಪ್ರತಿಯಾಗಿ ನನ್ನ ಯಾವ ಮಾತು ಸಹ ಆಲಿಸುವುದಿಲ್ಲ ಎಂದ ಮೇಲೆ ತಫ್ಸೀರ್ ಬರೆಯಲು ಅವಕಾಶವಾದರೂ ಹೇಗೆ ಸಿಗುವುದು? ಹಾಗೆ ನನಗೆ ಕೇವಲ ಮೌಲ್ವಿ ಮುಹಮ್ಮದ್ ಹುಸೇನ್ ಸಾಹಿಬರ ಕೆಲ ಮಾತಿನ ಅಣತಿಯಂತೆ ಬೈಅತ್ ಮಾಡಬೇಕಾದೀತು. ಅದು ಪೀರ್ ಸಾಹಿಬರ ಯಾವ ವಿಶ್ವಾಸಗಳಿವೆಯೋ ಅದೇ ಸತ್ಯವಾಗಿದೆ. ಅದು ಪೀರ್ ಸಾಹಿಬ್ ಅವರೇ ಪ್ರತಿವಾದಿಗಳು ಮತ್ತು ಅವರೇ ತೀರ್ಪುಗಾರರು ಆದಂತಾಯಿತು. ಏಕೆಂದರೆ ಹಝ್‌ರತ್ ಮಸೀಹ್ ಮಹದಿಯ ಕುರಿತು ಮೌಲ್ವಿ ಮುಹಮ್ಮದ್ ಹುಸೇನ್ ಸಾಹಿಬರ ವಿಶ್ವಾಸಗಳು ಪೀರ್ ಸಾಹಿಬ್‌ರ ವಿಶ್ವಾಸಗಳಂತೆಯೇ ಇವೆ. ಹಾಗಿರುವಾಗ ಸ್ಪಷ್ಟವಾಗುವುದೇನೆಂದರೆ ಮುಹಮ್ಮದ್ ಹುಸೇನ್ ಸಾಹಿಬ್ ಮತ್ತು ಪೀರ್ ಸಾಹಿಬ್ ಒಂದೇ ವ್ಯಕ್ತಿ ಎಂದಾದರು. ಎರಡು ಬಿನ್ನ ವ್ಯಕ್ತಿಯಾಗಿ ಉಳಿದಿಲ್ಲ ಅಂದ ಮೇಲೆ ತೀರ್ಪು ಏನಾದೀತು. ಅದೇ ಕಷ್ಟಗಳನ್ನು ಭಾವಿಸಿ ಮತ್ತು ಅದೇ ಕಾರಣಗಳಿಂದ ನಾನು ಚರ್ಚೆಯಿಂದ ದೂರವಾಗಿದ್ದು ಆ

*(ಪುಟ 09 ರಲ್ಲಿ ಮುಂದುವರಿಸಲಾಗಿದೆ)*

# ಖುತ್‌ಬ ಜುಮುಅ

**ಹಝ್ರತ್ ಅಲಾ(ರ) ಹೇಳಿದರು: ಎಲೈ ಜನರೇ ಹೆದರಬೇಡಿರಿ. ನೀವು ಮುಸ್ಲಿಮರಲ್ಲವೇ? ನೀವು ಅಲ್ಲಾಹನ ಮಾರ್ಗದಲ್ಲಿ ಯುದ್ಧ ಮಾಡಲು ಬಂದಿರುವಿರಿ ಅಲ್ಲವೇ? ನೀವು ಅಲ್ಲಾಹನ ಸಹಾಯಕರಲ್ಲವೇ? ನಿಮಗೆ ಸುವಾರ್ತೆ. ಏಕೆಂದರೆ ಅಲ್ಲಾಹನು ಅಂತಹ ಜನರನ್ನು ಈ ಸ್ಥಿತಿಯಲ್ಲಿ ಬಿಟ್ಟು ಹೋಗಲಾರನು.**

**ರಸೂಲುಲ್ಲಾಹ್(ಸ) ರವರ ಪ್ರೀಯ ಬದರಿ ಹಾಗೂ ನಿಷ್ಠಾವಂತ ಸಹಾಬಿ ಖಲೀಫ ರಾಶಿದ್, ಸಿದ್ದೀಖೆ ಅಕ್ಬರ್ ಹಝ್ರತ್ ಅಬೂಬಕರ್ ಸಿದ್ದೀಖ್(ರ)ರವರ ಪವಿತ್ರ ಜೀವನ ಚರಿತ್ರೆಯ ಪ್ರಸ್ತಾವನೆ**

ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **24-06-2022** ರಂದು ನೀಡಿದ **ಖುತ್‌ಬ ಜುಮುಅ**

أَشْهَدُ أَنْ لَّا إِلٰهَ إِلَّا اللّٰهُ وَحْدَهٗ لَا شَرِيْكَ لَهٗ وَأَشْهَدُ أَنَّ مُحَمَّدًا عَبْدُهٗ وَرَسُوْلُهٗ

أَمَّا بَعْدُ فَأَعُوْذُ بِاللّٰهِ مِنَ الشَّيْطٰنِ الرَّجِيْمِ - بِسْمِ اللّٰهِ الرَّحْمٰنِ الرَّحِيْمِ

اَلْحَمْدُ لِلّٰهِ رَبِّ الْعَالَمِيْنَ ۔ اَلرَّحْمٰنِ الرَّحِيْمِ ۔ مٰلِكِ يَوْمِ الدِّيْنِ ۔

اِيَّاكَ نَعْبُدُ وَاِيَّاكَ نَسْتَعِيْنُ ۔ اِهْدِنَا الصِّرَاطَ الْمُسْتَقِيْمَ ۔

صِرَاطَ الَّذِيْنَ اَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ ۔

ಹಝ್ರತ್ ಅಬೂಬಕರ್(ರ)ರ ಕಾಲದ ದಂಗೆಗಾರರ ವಿರುದ್ಧ ಕಾರ್ಯಾಚರಣೆಗಳ ಪ್ರಸ್ತಾಪ ನಡೆಯುತ್ತಿತ್ತು.

ದಂಗೆಗಾರರ ವಿರುದ್ಧ ನಡೆಸಲಾದ ಏಳನೇ ಕಾರ್ಯಾಚರಣೆಯ ಬಗ್ಗೆ ಲಭಿಸುವ ವಿವರದ ಪ್ರಕಾರ ಈ ಕಾರ್ಯಾಚರಣೆಯು ಹಝ್ರತ್ ಖಾಲಿದ್ ಬಿನ್ ಸಈದ್ ಬಿನ್ ಆಸ್‌ರ ಮೂಲಕ ನಡೆಯಿತು. ಅವರನ್ನು ಧರ್ಮತ್ಯಾಗಿಗಳ ವಿರುದ್ಧ ಕಳುಹಿಸಲಾಗಿತ್ತು. ಹಝ್ರತ್ ಅಬೂಬಕರ್(ರ) ಹಝ್ರತ್ ಖಾಲಿದ್ ಬಿನ್ ಆಸ್‌ರಿಗಾಗಿ ಧ್ವಜವನ್ನು ಕಟ್ಟಿದರು ಮತ್ತು ಸಿರಿಯದ ಗಡಿಪ್ರದೇಶವಾದ ಹಮ್ತೈನಿನ ಕಡೆಗೆ ಕಳುಹಿಸಿದರು. (ತಾರೀಖ್ ಅತ್ತಬರಿ, ಸಂಪುಟ-2, ಪುಟ-257, ದಾರುಲ್ ಕುತುಬ್ ಇಲ್ಮಿಯ ಬೈರೂತ್ ಲೆಬನಾನ್ 2012)

ಹಝ್ರತ್ ಖಾಲಿದ್ ಬಿನ್ ಸಈದ್ ಬಿನ್ ಆಸ್(ರ)ರ ಪರಿಚಯ ಹೀಗಿದೆ: ಅವರ ಹೆಸರು ಖಾಲಿದ್ ಮತ್ತು ಉಪನಾಮ ಅಬೂಸಈದ್ ಎಂದಾಗಿತ್ತು. ಅವರ ತಂದೆಯ ಹೆಸರು ಸಈದ್ ಬಿನ್ ಆಸ್ ಬಿನ್ ಉಮಯ್ಯ ಮತ್ತು ತಾಯಿಯ ಹೆಸರು ಲಬೀನ ಬಿನ್ತ್ ಹಬ್ಬಾಬ್ ಎಂದಾಗಿತ್ತು. ಅವರು ಉಮ್ಮೇ ಖಾಲಿದ್ ಎಂಬ ಹೆಸರಿನಿಂದ ಪ್ರಸಿದ್ಧರಾಗಿದ್ದರು. (ಅಸದುಲ್‌ಗಾಬ, ಸಂಪುಟ-2, ಪುಟ-124, ದಅರುಲ್ ಕುತುಬ್ ಇಲ್ಮಿಯ ಬೈರೂತ್ 2008) (ಅಲ್‌ಮುಸ್ತದ್ರಿಕ್ ಅಲಸ್ಸಹೀಹೈನಿಲ್ಹಾಕಿಮ್, ಭಾಗ-5, ಪುಟ-1896, ಹದೀಸ್-5081, ನಝಾರ್ ಮುಸ್ತಫಾ ಅಲ್‌ಬಾಝಿ, ಅರ್ರಿಯಾಝ್ 2000)

ಹಝ್ರತ್ ಖಾಲಿದ್(ರ) ಬಹಳ ಆರಂಭ ಕಾಲದಲ್ಲಿ ಇಸ್ಲಾಂ ಧರ್ಮ ಸ್ವೀಕಾರ ಮಾಡಿದವರಲ್ಲಿ ಒಬ್ಬರಾಗಿದ್ದರು. ಹಝ್ರತ್ ಅಬೂಬಕರ್(ರ)ರ ನಂತರ ಅವರು ಇಸ್ಲಾಂ ಧರ್ಮವನ್ನು ಸ್ವೀಕಾರ ಮಾಡಿದ್ದರು ಮತ್ತು ಮೂರನೇ, ನಾಲ್ಕನೇ ಅಥವಾ ಐದನೇ ಮುಸ್ಲಿಮ್ ಆಗಿದ್ದರು ಎಂದು ಕೆಲವರು ಹೇಳುತ್ತಾರೆ. ಅವರಿಗಿಂತ ಮುಂಚೆ ಅಲ್ಲಿಯ ವರೆಗೂ ಹಝ್ರತ್ ಅಲಿ ಬಿನ್ ಅಬೀ ತಾಲಿಬ್(ರ), ಹಝ್ರತ್ ಅಬೂಬಕರ್(ರ), ಹಝ್ರತ್ ಝೈದ್ ಬಿನ್ ಹಾರಿಸ(ರ) ಮತ್ತು ಹಝ್ರತ್ ಸಅದ್ ಬಿನ್ ಅಬೀ ವಖಾಸ್(ರ) ಇಸ್ಲಾಂ ಸ್ವೀಕಾರ ಮಾಡಿದ್ದರು.

ಹಝ್ರತ್ ಖಾಲಿದ್(ರ) ಇಸ್ಲಾಂ ಸ್ವೀಕಾರ ಮಾಡಿದ ಬಗ್ಗೆಗಿನ ಘಟನೆಯ ಪ್ರಸ್ತಾಪವಿದೆ. ಅವರು ಕನಸಿನಲ್ಲಿ ಹೀಗೆ ಕಂಡರು: ಬೆಂಕಿಯ ಅಂಚಿನಲ್ಲಿ ಅವರು ನಿಂತುಕೊಂಡಿದ್ದರು. ಅವರ ತಂದೆ ಅವರನ್ನು ಅದರೊಳಗೆ ಬೀಳಿಸಲು ಪ್ರಯತ್ನಿಸುತ್ತಿದ್ದರು. ಆದರೆ ಅವರು ಬೆಂಕಿಯಲ್ಲಿ ಬೀಳದಿರುವಂತೆ ಹಝ್ರತ್ ಪೈಗಂಬರ್(ಸ) ಅವರ ಸೊಂಟವನ್ನು ಹಿಡಿದಿದ್ದರು. ಹಝ್ರತ್ ಖಾಲಿದ್(ರ) ಭಯಗೊಂಡು ನಿದ್ದೆಯಿಂದ ಎಚ್ಚರಗೊಂಡರು ಮತ್ತು ಇದು ಸತ್ಯವಾದ ಕನಸಾಗಿದೆ ಎಂದು ಅಲ್ಲಾಹನ ಹೆಸರಲ್ಲಿ ಪ್ರಮಾಣ ಮಾಡಿ ಹೇಳಿದರು. ಅನಂತರ ಅವರು ಹಝ್ರತ್ ಅಬೂಬಕರ್(ರ)ರನ್ನು ಭೇಟಿಯಾದಾಗ ಅವರು ತಾನು ಕಂಡ ಕನಸನ್ನು ಹಝ್ರತ್ ಅಬೂಬಕರ್(ರ)ರಿಗೆ ತಿಳಿಸಿದರು. ಹಝ್ರತ್ ಅಬೂಬಕರ್(ರ) ಹೇಳಿದರು: ಅಲ್ಲಾಹನು ನಿನಗೆ ಒಳಿತನ್ನು ನೀಡಲು ಬಯಸಿರುವನು. ನಿನ್ನನ್ನು ರಕ್ಷಿಸಲು ಅಲ್ಲಾಹನು ಇಚ್ಛಿಸುತ್ತಿದ್ದಾನೆ. ಹಝ್ರತ್ ಮುಹಮ್ಮದ್(ಸ) ಪ್ರವಾದಿಯಾಗಿರುವರು. ಅವರನ್ನು ಅನುಸರಿಸಿರಿ. ಏಕೆಂದರೆ, ನೀನು ಇಸ್ಲಾಂ ಸ್ವೀಕಾರ ಮಾಡುತ್ತಾ ಅವರನ್ನು ಅನುಸರಿಸಿದರೆ ಅವರು ನಿನ್ನನ್ನು ಬೆಂಕಿಯಲ್ಲಿ ಬೀಳುವುದರಿಂದ ರಕ್ಷಿಸುವರು. ನಿನ್ನ ತಂದೆ ಆ ಬೆಂಕಿಯಲ್ಲಿ ಬೀಳುವರು. ಹೀಗೆ ಹಝ್ರತ್ ಖಾಲಿದ್(ರ) ಹಝ್ರತ್ ಪೈಗಂಬರ್(ಸ)ರ ಸನ್ನಿಧಿಯಲ್ಲಿ ಹಾಜರಾದರು. ಹಝ್ರತ್ ಪೈಗಂಬರ್(ಸ) ಮಕ್ಕದಲ್ಲಿ ಅಜ್‌ಯಾದ್ ಎಂಬ ಪ್ರದೇಶದಲ್ಲಿ ಇದ್ದರು. ಅಜ್‌ಯಾದ್ ಎಂಬುದು ಮಕ್ಕದಲ್ಲೇ ಪರ್ವತಗಳಿಂದ ಸುತ್ತುವರೆದ ಒಂದು ಪ್ರದೇಶವಾಗಿದೆ. ಅಲ್ಲಿ ಹಝ್ರತ್ ಪೈಗಂಬರ್(ಸ) ಆಡುಗಳನ್ನು ಮೇಯಿಸುತ್ತಿದ್ದರು. ಹಝ್ರತ್ ಪೈಗಂಬರ್(ಸ)ರೊಡನೆ ಹಝ್ರತ್ ಖಾಲಿದ್(ರ) ಕೇಳಿದರು: ಹೇ ಮುಹಮ್ಮದ್(ಸ) ನೀವು ಯಾರ ಕಡೆಗೆ ಕರೆಯುತ್ತಿದ್ದೀರಿ? ಹಝ್ರತ್ ಪೈಗಂಬರ್(ಸ) ಹೇಳಿದರು: ಏಕನೂ ಸಹಭಾಗಿ ಇಲ್ಲದವನೂ ಆದ ಅಲ್ಲಾಹನ ಕಡೆಗೆ ಕರೆಯುತ್ತಿದ್ದೇನೆ, ನಾನು ಅವನ ದಾಸ ಮತ್ತು ಪ್ರವಾದಿಯಾಗಿರುವೆನು. ಏನನ್ನೂ ಆಲಿಸದ, ಕಾಣದ ಮತ್ತು ಯಾರಿಗೂ ಏನೂ ಪ್ರಯೋಜನ ಅಥವಾ ನಷ್ಟವನ್ನು ಉಂಟು ಮಾಡಲು ಸಾಧ್ಯವಿಲ್ಲದ ಕಲ್ಲುಗಳನ್ನು ಪೂಜಿಸುವುದನ್ನು ನೀನು ಉಪೇಕ್ಷಿಸು. ಯಾರು ಅದನ್ನು ಪೂಜಿಸುತ್ತಿದ್ದಾರೆ ಮತ್ತು ಯಾರು ಅದನ್ನು ಪೂಜಿಸುತ್ತಿಲ್ಲವೆಂದು ಕೂಡ ಅದಕ್ಕೆ ಗೊತ್ತಿಲ್ಲ. ಆಗ ಹಝ್ರತ್ ಖಾಲಿದ್(ರ) ಹೇಳಿದರು: ಅಲ್ಲಾಹನಲ್ಲದೇ ಆರಾಧನೆಗೆ ಅರ್ಹನು ಯಾರೂ ಇಲ್ಲವೆಂದೂ ನೀವು ಅಲ್ಲಾಹನ ಪ್ರವಾದಿಯಾಗಿರುವಿರಿ ಎಂದೂ ನಾನು ಸಾಕ್ಷ್ಯವಹಿಸುತ್ತೇನೆ. ಹಝ್ರತ್ ಖಾಲಿದ್(ರ) ಇಸ್ಲಾಂ ಧರ್ಮವನ್ನು ಸ್ವೀಕಾರ ಮಾಡಿದ ಕಾರಣದಿಂದ ಹಝ್ರತ್ ಪೈಗಂಬರ್(ಸ) ಬಹಳ ಸಂತುಷ್ಟಗೊಂಡರು. ಇಸ್ಲಾಂ ಸ್ವೀಕಾರ ಮಾಡಿದ ನಂತರ ಖಾಲಿದ್(ರ) ಅಡಗಿಕೊಂಡರು. ಹಝ್ರತ್ ಖಾಲಿದ್(ರ) ಇಸ್ಲಾಂ ಸ್ವೀಕಾರ ಮಾಡಿದ ಬಗ್ಗೆ ಅವರ ತಂದೆಗೆ ಗೊತ್ತಾದಾಗ, ಹಝ್ರತ್ ಖಾಲಿದ್‌ರನ್ನು ಹುಡುಕಲಿಕ್ಕಾಗಿ, ಅವರು ಇಸ್ಲಾಮ್ ಸ್ವೀಕಾರ ಮಾಡಿರದ ತನ್ನ ಇತರ ಮಕ್ಕಳನ್ನು ಕಳುಹಿಸಿದರು. ಹೀಗೆ ಅವರು ಹಝ್ರತ್ ಖಾಲಿದ್‌ರನ್ನು ಕಂಡುಹಿಡಿದು ತಂದೆಯ ಬಳಿಗೆ ಕೊಂಡುಬಂದರು. ಅವರ ತಂದೆ ಖಾಲಿದ್‌ರನ್ನು ಬೈದರು ಮತ್ತು ತನ್ನ ಕೈಯಲ್ಲಿದ್ದ ಬಡಿಗೆಯಿಂದ ಹೊಡೆಯಲು ಶುರುಮಾಡಿದರು. ಹೊಡೆದ ಕಾರಣದಿಂದ ಅವರ ತಲೆಗೆ ತೀವ್ರವಾದ ಗಾಯವಾಯಿತು. ಹಝ್ರತ್ ಖಾಲಿದ್(ರ) ಹೇಳಿದರು: ಅಲ್ಲಾಹನಾಣೆ ನಾನು ಹಝ್ರತ್ ಪೈಗಂಬರ್(ಸ)ರ ಅನುಸರಣೆ ಮಾಡಿದ್ದೇನೆ. ಆಗ ಅವರ ತಂದೆಗೆ ತುಂಬ ಕೋಪಬಂತು ಮತ್ತು ಹೀಗೆ ಹೇಳಿದರು: ಎಲೈ ಮೂರ್ಖಾ, ನನ್ನ ಮುಂದಿನಿಂದ ದೂರ ಹೋಗು. ಎಲ್ಲಿಗೆ ಬೇಕಾದರೂ ಹೋಗು. ನಾನು ನಿನಗೆ ಆಹಾರ ನೀಡುವುದನ್ನು ನಿಲ್ಲಿಸುವೆನು. ಆಗ ಹಝ್ರತ್ ಖಾಲಿದ್(ರ) ಹೇಳಿದರು: ನೀವು ನನಗೆ ಆಹಾರ ನೀಡುವುದನ್ನು ನಿಲ್ಲಿಸಿದರೆ, ನನ್ನನ್ನು ಜೀವಂತವಾಗಿ ಉಳಿಸಲು ಅಲ್ಲಾಹನು ಜೀವಾನಾಧಾರವನ್ನು ಕೊಡುವೆನು. ಹೀಗೆ ಅವರ ತಂದೆ ಅವರನ್ನು ಮನೆಯಿಂದ ಹೊರಗೆ ಹಾಕಿದರು ಮತ್ತು ತನ್ನ ಮಕ್ಕಳೊಡನೆ ಹೀಗೆ ಹೇಳಿದರು: ನಿಮ್ಮಲ್ಲಿ ಯಾರೂ ಅವನೊಡನೆ ಮಾತನಾಡಬಾರದು. ಹೀಗೆ ಖಾಲಿದ್(ರ) ಅಲ್ಲಿಂದ ಹೊರಟರು ಮತ್ತು ಹಝ್ರತ್ ಪೈಗಂಬರ್(ಸ)ರ ಜೊತೆಗೆ ಇರಲು ಶುರುಮಾಡಿದರು. ಪುನಃ ಹಿಡಿದು ಕಠಿಣವಾಗಿ ವರ್ತಿಸದೇ ಇರಲಿಕ್ಕಾಗಿ ಸಾಮಾನ್ಯವಾಗಿ ತನ್ನ ತಂದೆಯಿಂದ ಅಡಗಿಕೊಂಡು ಮಕ್ಕದ ಆಸುಪಾಸಿನಲ್ಲಿ ಇರುತ್ತಿದ್ದರು. ಹಝ್ರತ್ ಖಾಲಿದ್(ರ)ರ ತಂದೆಯು ಮುಸ್ಲಿಮರ ಮೇಲೆ ಅತ್ಯಂತ ಹೆಚ್ಚು ದೌರ್ಜನ್ಯ ಮಾಡುವವರೂ ಮತ್ತು ಮಕ್ಕದ ಗೌರವಾನ್ವಿತ ವ್ಯಕ್ತಿಯಾಗಿದ್ದರು. ಒಮ್ಮೆ ಅವರು ತೀವ್ರ ರೋಗಗ್ರಸ್ತರಾದಾಗ ಅವರು ಹೇಳಿದರು: ದೇವನು ನನಗೆ ಈ ರೋಗದಿಂದ ಶಮನ ನೀಡಿದರೆ, ಮಕ್ಕದಲ್ಲಿ ಮುಹಮ್ಮದ್‌ನ ದೇವನ ಆರಾಧನೆ ನಡೆಯದಂತೆ ಮಾಡುವೆನು ಮತ್ತು ಎಲ್ಲ ಮುಸ್ಲಿಮರನ್ನು

ಮಕ್ಕದಿಂದ ಹೊರಗೆ ಹಾಕುವೆನು. ಈ ಮಾತಿನ ಬಗ್ಗೆ ಹಝ್ರತ್ ಖ಼ಾಲಿದ್‌ರಿಗೆ ಗೊತ್ತಾದಾಗ ಅವರು ತನ್ನ ತಂದೆಯ ವಿರುದ್ಧ ಹೀಗೆ ದುಆ ಮಾಡಿದರು: ನನ್ನ ತಂದೆಗೆ ರೋಗಶಮನ ನೀಡಬೇಡ. ಹೀಗೆ ಅವರು ಅದೇ ರೋಗದಲ್ಲಿ ಮೃತರಾದರು.

ಮುಸ್ಲಿಮರು ಅಬೀಸೀನಿಯದ ಕಡೆಗೆ ಎರಡನೇ ಹಿಜ್ರತ್ ಮಾಡಿದಾಗ ಹಝ್ರತ್ ಖ಼ಾಲಿದ್ ಬಿನ್ ಸಈದ್(ರ) ಕೂಡ ಅವರ ಜೊತೆಗೆ ಹೋದರು. ಅವರ ಜೊತೆಗೆ ಅವರ ಪತ್ನಿಯಾದ ಉಮೈಮ ಬಿನ್ತ್ ಖ಼ಾಲಿದ್ ಖ಼ಜ಼ಾಇಯ ಕೂಡ ಇದ್ದಳು. ಖ಼ಾಲಿದ್‌ರ ಮತ್ತೊಬ್ಬ ಸಹೋದರ ಹಝ್ರತ್ ಅಮ್ರ್ ಬಿನ್ ಸಈದ್ ಕೂಡ ಅವರ ಜೊತೆಗೆ ಹಿಜ್ರತ್ ಮಾಡಿದರು. ಖೈಬರ್ ಯುದ್ಧದ ಸಮಯದಲ್ಲಿ ಹಝ್ರತ್ ಖ಼ಾಲಿದ್(ರ) ಅಬೀಸೀನಿಯದಿಂದ ಹಝ್ರತ್ ಜಾಫರ್ ಬಿನ್ ಅಬೀ ತಾಲಿಬ್‌ರ ಜೊತೆಗೆ ಹಝ್ರತ್ ಪೈಗಂಬರ್(ಸ)ರ ಸನ್ನಿಧಿಗೆ ತಲುಪಿದರು. ಅವರು ಖೈಬರ್ ಯುದ್ಧದಲ್ಲಿ ಭಾಗಿಯಾಗಿರಲಿಲ್ಲ. ಆದರೆ ಯುದ್ಧ ಸಂಪತ್ತಿನಿಂದ ಹಝ್ರತ್ ಪೈಗಂಬರ್(ಸ) ಅವರಿಗೂ ಒಂದು ಪಾಲನ್ನು ಕೊಟ್ಟರು. ಅನಂತರ ಮಕ್ಕಾ ವಿಜಯ, ಹುನೈನ್, ತಾಯಿಫ್, ತಬೂಕ್ ಮುಂತಾದ ಎಲ್ಲ ಯುದ್ಧಗಳಲ್ಲೂ ಹಝ್ರತ್ ಪೈಗಂಬರ್(ಸ)ರ ಜೊತೆಗೆ ಇದ್ದರು. (ಅಸದುಲ್‌ಗಾಬ, ಸಂಪುಟ–2, ಪುಟ–124–125, ದರು ಕುತುಬ್ ಇಲ್‌ಮಿಯ ಬೈರೂತ್ 2008) (ಫರ್ಹಂಗ್ ಸೀರತ್, ಪುಟ–30, ಝುವಾರ ಅಕಾಡಮಿ ಕರಾಚಿ)

ಅವರು ಬದ್ರ್ ಯುದ್ಧದಲ್ಲಿ ಭಾಗಿಯಾಗಿರಲಿಲ್ಲ. ಇದರ ಬಗ್ಗೆ ಅವರಿಗೆ ಯಾವಾಗಲೂ ದುಃಖವಿತ್ತು. ಅವರು ಹಝ್ರತ್ ಪೈಗಂಬರ್(ಸ)ರೊಡನೆ ಹೇಳಿದರು: ಯಾ ರಸೂಲಲ್ಲಾಹ್, ನಮಗೆ ಬದ್ರ್ ಯುದ್ಧದಲ್ಲಿ ನಿಮ್ಮ ಜೊತೆಗೆ ಭಾಗಿಯಾಗಲು ಸಾಧ್ಯವಾಗಿರಲಿಲ್ಲ. ಹಝ್ರತ್ ಪೈಗಂಬರ್(ಸ) ಹೇಳಿದರು: ಜನರಿಗೆ ಒಂದು ಹಿಜ್ರತಿನ ಸೌಭಾಗ್ಯ ಸಿಕ್ಕಿತ್ತು. ಆದರೆ ನಿಮಗೆ ಎರಡು ಹಿಜ್ರತ್‌ಗಳನ್ನು ಮಾಡುವ ಸೌಭಾಗ್ಯ ಸಿಕ್ಕಿತ್ತು ಎಂಬುದು ನಿಮಗೆ ಸಂತುಷ್ಟಿಯನ್ನು ನೀಡುವ ಸಂಗತಿಯಲ್ಲವೇ?
(ತಬಖಾತುಲ್ ಕುಬ್ರ ಇಬ್ನೆ ಸಅದ್, ಸಂಪುಟ–4, ಪುಟ–75, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2012)

ದಿವ್ಯವಾಣಿಗಳನ್ನು ಬರೆಯುತ್ತಿದ್ದ ವ್ಯಕ್ತಿಗಳಲ್ಲಿ ಹಝ್ರತ್ ಖ಼ಾಲಿದ್ ಬಿನ್ ಸಈದ್ ಬಿನ್ ಆಸ್(ರ)ರ ಹೆಸರು ಕೂಡ ಉಲ್ಲೇಖಿಸಲಾಗಿದೆ ಎಂದು ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳಿದ್ದಾರೆ.
(ದೀಬಾಚ ತಫ್ಸೀರುಲ್ ಖುರ್‌ಆನ್, ಅನ್ವಾರುಲ್ ಉಲೂಮ್, ಸಂಪುಟ–20, ಪುಟ–425)

ಹಝ್ರತ್ ಖ಼ಾಲಿದ್ ಬಿನ್ ಸಈದ್(ರ)ರನ್ನು ಹಝ್ರತ್ ಪೈಗಂಬರ್(ಸ) ಯುಮನಿನ ಸದಖಗಳನ್ನು ವಸೂಲು ಮಾಡಲು ನಿಶ್ಚಯಿಸಿದ್ದರು. ಹಝ್ರತ್ ಪೈಗಂಬರ್(ಸ)ರ ನಿಧನದ ತನಕ ಅವರು ಇದೇ ಹುದ್ದೆಯಲ್ಲಿ ಇದ್ದರು. ಪೈಗಂಬರ್(ಸ) ಅವರ ಮರಣದ ನಂತರ ಅವರು ಮದೀನಕ್ಕೆ ಬಂದರು, ಆಗ ಹಝ್ರತ್ ಅಬೂಬಕರ್(ರ) ಅವರಿಗೆ ಹೇಳಿದರು: "ನೀವು ಏಕೆ ಹಿಂತಿರುಗಿದ್ದೀರಿ?" ಅದಕ್ಕೆ ಅವರು ನಾನು ಪೈಗಂಬರ್(ಸ) ರವರ ನಂತರ ಯಾರ ಪರವಾಗಿಯೂ ಕಾರ್ಯನಿರ್ವಹಿಸುವುದಿಲ್ಲ ಎಂದು ಹೇಳಿದರು. ಅವರು ಹಝ್ರತ್ ಅಬುಬಕರ್(ರ) ಅವರ ಬೈಅತ್ ಮಾಡುವುದನ್ನು ವಿರಾಮಗೊಳಿಸಿದರು ಎಂದು ಹೇಳಲಾಗುತ್ತದೆ, ಆದರೆ ಬನು ಹಾಶಿಮ್ ಹಝ್ರತ್ ಅಬುಬಕರ್(ರ) ಅವರ ಬೈಅತ್ ಮಾಡಿದಾಗ ಹಝ್ರತ್ ಖಾಲಿದ್(ರ) ಕೂಡ ಹಝ್ರತ್ ಅಬುಬಕರ್(ರ) ಅವರ ಬೈಅತ್ ಮಾಡಿದರು. ನಂತರ, ಹಝ್ರತ್ ಅಬೂಬಕರ್(ರ) ಅವರನ್ನು ವಿವಿಧ ಸಂದರ್ಭಗಳಲ್ಲಿ ಸೇನೆಗಳ ಅಮೀರ್ ಆಗಿ ನೇಮಿಸಿ ಕಳುಹಿಸಿದರು.

ಹಝ್ರತ್ ಅಬುಬಕರ್(ರ) ರವರ ಖಲೀಫರ ಕಾಲದಲ್ಲಿ **"ಮರ್ಜು ಅಸ್ಸುಫರ್"** ಯುದ್ಧದಲ್ಲಿ ಹಝ್ರತ್ ಖಾಲಿದ್(ರ) ಶಹೀದ್ ಆದರು ಮತ್ತು ಕೆಲವರು ಹೇಳುವಂತೆ ಮರ್ಜು ಅಸ್ಸುಫರ್ ಕದನವು ಹಿಜ್ರಿ 14 ರಲ್ಲಿ ಹಝ್ರತ್ ಉಮರ್(ರ) ರವರ ಖಿಲಾಫತ್ ಕಾಲದ ಆರಂಭದಲ್ಲಿ ನಡೆಯಿತು. ಸಿರಿಯಾ ದೇಶದ ಅಜ್ನದೀನ್ ಕದನದಲ್ಲಿ ಹಝ್ರತ್ ಅಬೂಬಕರ್(ರ) ನಿಧನದ ಇಪ್ಪತ್ನಾಲ್ಕು ದಿನಗಳ ಮೊದಲು ಹಝ್ರತ್ ಖಾಲಿದ್ ಶಹೀದ್ ಆದರು ಎಂದು ಹೇಳಲಾಗುತ್ತದೆ. (ಅಸದ್ ಅಲ್–ಗಾಬಾ, ಸಂಪುಟ–2, ಪುಟ–125, ದಾರ್ ಅಲ್–ಕಿತಾಬ್ ಅಲ್–ಉಲಮಿಯಾ ಬೈರುತ್ ಪ್ರಕಟಿಸಿದ, 2008)

ತಾರೀಖ್ ತಬರಿಯಲ್ಲಿ ಹಝ್ರತ್ ಖಾಲಿದ್(ರ) ಧರ್ಮತ್ಯಾಗಿಗಳ ವಿರುದ್ಧ ನಡೆಸಿದ ಯೋಜನೆಯ ಬಗ್ಗೆ ವಿವರಗಳು ಹೀಗೆ ಪ್ರಸ್ತಾಪಿಸಲಾಗಿದೆ: ಹಝ್ರತ್ ಅಬೂಬಕರ್(ರ) ಧರ್ಮತ್ಯಾಗಿಗಳನ್ನು ಸದೆಬಡಿಯಲು ಧ್ವಜಗಳನ್ನು ಕಟ್ಟಿದಾಗ ಒಂದು ಧ್ವಜವನ್ನು ಹಝ್ರತ್ ಖ಼ಾಲಿದ್ ಬಿನ್ ಸಈದ್(ರ)ರಿಗಾಗಿಯೂ ಕಟ್ಟಿದರು ಮತ್ತು ಅವರೊಡನೆ ತೈಮಾಗೆ ಹೋಗಲು ಆದೇಶಿಸಿದರು ಹಾಗೂ ಹೀಗೆ ಹೇಳಿದರು: ತನ್ನ ಜಾಗದಿಂದ ಸರಿಯದಿರು, ಸುತ್ತಮುತ್ತ ಇರುವ ಜನರನ್ನು ಭೇಟಿಯಾಗಲು ಆಮಂತ್ರಿಸು, ಧರ್ಮತ್ಯಾಗಿಗಳಾಗಿರದ ಜನರನ್ನು ಮಾತ್ರ ಸ್ವೀಕಾರ ಮಾಡು. ನನ್ನ ಆದೇಶ ತಲುಪುವ ತನಕ, ನಿಮ್ಮೊಂದಿಗೆ ಯುದ್ಧ ಮಾಡುವವರೊಡನೆ ಹೊರತು ಬೇರೆ ಯಾರೊಡನೆಯೂ ಯುದ್ಧ ಮಾಡಬೇಡ. ಹಝ್ರತ್ ಖ಼ಾಲಿದ್(ರ) ತೈಮಾದಲ್ಲಿ ತಂಗಿದರು. ಸುತ್ತಮುತ್ತಲಿನ ಅನೇಕ ಸಂಘಗಳು ಅವರನ್ನು ಭೇಟಿಯಾಗಲು ಬಂದರು. ಮುಸ್ಲಿಮರ ಈ ಮಹಾ ಸೇನೆಯ ಬಗ್ಗೆ ರೋಮನರಿಗೆ ಮಾಹಿತಿ ಲಭಿಸಿದಾಗ ಅವರು ತಮ್ಮ ಸ್ವಾಧೀನದಲ್ಲಿದ್ದ ಅರೇಬಿಯರಿಂದ ಸೀರಿಯದ ಯುದ್ಧಕ್ಕಾಗಿ ಸೈನಿಕರನ್ನು ಬೇಡಿದರು. ರೋಮನರ ತಯಾರಿ ಮತ್ತು ಅರಬ್ ಗೋತ್ರಗಳ ಬರುವಿಕೆಯ ಕುರಿತು ಹಝ್ರತ್ ಖ಼ಾಲಿದ್(ರ) ಹಝ್ರತ್ ಅಬೂಬಕರ್(ರ)ರಿಗೆ ತಿಳಿಸಿದರು. ಹಝ್ರತ್ ಅಬೂಬಕರ್(ರ) ಹೀಗೆ ಉತ್ತರಿಸಿದರು: ನೀವು ಯುದ್ಧದ ಸಿದ್ಧತೆ ನಡೆಸಿರಿ, ಕಿಂಚಿತ್ತೂ ಗಾಬರಿಗೊಳ್ಳಬೇಡಿರಿ ಮತ್ತು ಅಲ್ಲಾಹನ ಸಹಾಯವನ್ನು ಬೇಡಿರಿ.

ಈ ಉತ್ತರ ಲಭಿಸಿದ ಕೂಡಲೇ ಹಝ್ರತ್ ಖ಼ಾಲಿದ್(ರ) ಶತ್ರುಗಳ ಕಡೆಗೆ ಹೊರಟರು. ಸಮೀಪಕ್ಕೆ ತಲುಪಿದಾಗ, ಶತ್ರುಗಳು ಎಷ್ಟು ಗಾಬರಿಗೊಂಡರು ಎಂದರೆ, ಅವರು ತಮ್ಮ ಜಾಗವನ್ನು ಬಿಟ್ಟು ಪರಾರಿಯಾದರು. ಹಝ್ರತ್ ಖ಼ಾಲಿದ್(ರ) ಶತ್ರುಗಳ ಪ್ರದೇಶವನ್ನು ವಶಪಡಿಸಿಕೊಂಡರು. ಹಝ್ರತ್ ಖ಼ಾಲಿದ್(ರ)ರ ಬಳಿ ಒಟ್ಟು ಸೇರಿದ್ದ ಬಹುತೇಕ ಜನರು ಮುಸ್ಲಿಮರಾದರು. ಈ ವಿಜಯದ ಸುದ್ದಿಯನ್ನು ಹಝ್ರತ್ ಖ಼ಾಲಿದ್(ರ) ಹಝ್ರತ್ ಅಬೂಬಕರ್(ರ)ರಿಗೆ ಮುಟ್ಟಿಸಿದರು. ಹಝ್ರತ್ ಅಬೂಬಕರ್(ರ) ಹೇಳಿದರು: ನೀವು ಮುಂದಕ್ಕೆ ಧಾವಿಸಿರಿ. ಆದರೆ ಶತ್ರುಗಳಿಗೆ ಹಿಂದಿನಿಂದ ದಾಳಿ ನಡೆಸಲು ಅವಕಾಶ ಸಿಗುವಷ್ಟು ಮುಂದಕ್ಕೆ ಹೋಗಬೇಡಿರಿ. (ತಾರೀಖ್ ಅತ್ತಬರಿ, ಸಂಪುಟ–2, ಪುಟ–331–332, ದಾರುಲ್ ಕುತುಬ್ ಇಲ್‌ಮಿಯ ಲೆಬನಾನ್ 2012) (ಫರ್ಹಂಗ್ ಸೀರತ್, ಪುಟ–78, ಝುವಾರ ಅಕಾಡಮಿ ಕರಾಚಿ)

ಹಝ್ರತ್ ಅಬೂಬಕರ್(ರ)ರ ಕಾಲಘಟ್ಟದಲ್ಲಿ ಧರ್ಮತ್ಯಾಗಿಗಳ ವಿರುದ್ಧ ಹಝ್ರತ್ ಖ಼ಾಲಿದ್(ರ) ನಡೆಸಿದ ಕಾರ್ಯಾಚರಣೆಗಳ ಇಷ್ಟು ಮಾತ್ರ ಪ್ರಸ್ತಾಪ ಚರಿತ್ರೆಯ ಗ್ರಂಥಗಳಲ್ಲಿ ಲಭಿಸುತ್ತದೆ. ಇದಲ್ಲದೇ ಹಝ್ರತ್ ಅಬೂಬಕರ್(ರ)ರ ಕಾಲದಲ್ಲಿ ಸಿರಿಯ ವಿಜಯದ ಪ್ರಸ್ತಾಪದಲ್ಲಿ ಅವರ ಪಾತ್ರದ ಬಗ್ಗೆ ಮುಂದಿನ ಬಾರಿ ವಿವರಿಸಲಾಗುವುದು.

ಎಂಟನೇ ಕಾರ್ಯಾಚರಣೆಯು ಧರ್ಮತ್ಯಾಗಿ ದಂಗೆಗಾರರ ವಿರುದ್ಧ ಹಝ್ರತ್ ತುರೈಫ ಬಿನ್ ಹಾಜಿಝ್ ನಡೆಸಿದ್ದಾಗಿದೆ. ಹಝ್ರತ್ ಅಬೂಬಕರ್(ರ) ಒಂದು ಧ್ವಜವನ್ನು ಹಝ್ರತ್ ತುರೈಫ ಬಿನ್ ಹಾಜಿಝ್‌ಗಾಗಿ ಕಟ್ಟಿದರು ಮತ್ತು ಅವರು ಬನೂ ಸುಲೈಂ ಮತ್ತು ಬನೂ ಹವಾಝಿನ್‌ರನ್ನು ಎದುರಿಸಲು ಹೋಗಬೇಕೆಂದು ಆದೇಶಿಸಿದರು.
(ತಾರೀಖ್ ಅತ್ತಬರಿ, ಸಂಪುಟ–2, ಪುಟ–257, ದಾರುಲ್ ಕುತುಬ್ ಇಲ್‌ಮಿಯ ಲೆಬನಾನ್ 2012)

ಹಝ್ರತ್ ಅಬೂಬಕರ್(ರ) ಖ಼ಲೀಫರಾದ ನಂತರ ಹಝ್ರತ್ ತುರೈಫ ಬಿನ್ ಹಾಜಿಝ್‌ರನ್ನು ಇಸ್ಲಾಂ ಧರ್ಮದಲ್ಲಿ ನೆಲೆನಿಂತಿದ್ದ ಸುಲೈಮ್ ಗೋತ್ರದ ಅರೇಬಿಯರ ಅಧಿಕಾರಿಯನ್ನಾಗಿ ಮಾಡಿದರು. ಅವರು ಬಹಳ ನಿಷ್ಠಾವಂತ ಮತ್ತು ಆವೇಶಭರಿತ ಸೇವಕರಾಗಿದ್ದರು. ಅವರು ಎಂತಹ ಪ್ರಭಾವಶಾಲಿ ಭಾಷಣಗಳನ್ನು ಮಾಡಿದರು ಎಂದರೆ, ಬನೂ ಸುಲೈಮಿನ ಅನೇಕ ಅರೇಬಿಯರು ಅವರೊಂದಿಗೆ ಸೇರಿಕೊಂಡರು. (ಹಝ್ರತ್ ಅಬೂಬಕರ್(ರ) ಕೆ ಸರ್ಕಾರಿ ಖತೂತ್, ಪುಟ–33)

ಒಂದು ವರದಿಯಲ್ಲಿ ಹೀಗೆ ಬಂದಿದೆ: ಹಝ್ರತ್ ಪೈಗಂಬರ್(ಸ)ರ ನಿಧನದ ನಂತರ ಅವರಲ್ಲಿ ಕೆಲವರು ಧರ್ಮತ್ಯಾಗಿಗಳಾದರು ಮತ್ತು ಸತ್ಯನಿಷೇಧದ ಕಡೆಗೆ ಮರಳಿದರು. ಕೆಲವು ವ್ಯಕ್ತಿಗಳು ತಮ್ಮ ಗೋತ್ರಗಳ ಸರದಾರರಾದ ಮಅ್‌ನ್ ಬಿನ್ ಹಾಜಿಝ್ ಅಥವಾ ಕೆಲವರ ಪ್ರಕಾರ ಅವರ ಸಹೋದರ ತುರೈಫ ಬಿನ್ ಹಾಜಿಝ್‌ರ ಜೊತೆಗೆ ಇಸ್ಲಾಮಿನಲ್ಲಿ ಸ್ಥಿರವಾಗಿ ನಿಂತರು. (ತಾರೀಖ್ ಅತ್ತಬರಿ, ಸಂಪುಟ–2, ಪುಟ–266, ದಾರುಲ್ ಕುತುಬ್ ಇಲ್‌ಮಿಯ ಲಡಬನಾನ್ 2012)

ಹಝ್ರತ್ ಅಬ್ದುಲ್ಲಾಹ್ ಬಿನ್ ಅಬೂಬಕರ್(ರ)ರಿಂದ ಹೀಗೆ ವರದಿಯಾಗಿದೆ. ಬನೂ ಸುಲೈಮಿನ ಒಬ್ಬ ವ್ಯಕ್ತಿ ಹಝ್ರತ್ ಅಬೂಬಕರ್(ರ)ರ ಬಳಿಗೆ ಬಂದರು. ಅವನನ್ನು ಫುಜಾ ಎಂದು ಕರೆಯಲಾಗುತ್ತಿತ್ತು. ಅವನ ಹೆಸರು ಅಯಾಸ್ ಬಿನ್ ಅಬ್ದುಲ್ಲಾಹ್ ಎಂದಾಗಿತ್ತು. ಅವನು ಹೇಳಿದನು: ನಾನು ಮುಸ್ಲಿಮನಾಗಿರುವೆನು. ಧರ್ಮತ್ಯಾಗವನ್ನು ಮಾಡಿದ ಜನರ ವಿರುದ್ಧ ಧರ್ಮಯುದ್ಧವನ್ನು ಮಾಡಲು ನಾನು ಬಯಸುತ್ತೇನೆ. ನೀವು ನನಗೆ ಸವಾರಿಮೃಗ ಮತ್ತು ಸಹಾಯವನ್ನು

ನೀಡಿರಿ. ಹಝ್ರತ್ ಅಬೂಬಕರ್(ರ) ಅವನಿಗೆ ಸವಾರಿ ಮೃಗವನ್ನು, ಆಯುಧಗಳನ್ನು ಮತ್ತು ಆಯುಧಧಾರಿಗಳಾದ ಹತ್ತು ಮುಸ್ಲಿಮರನ್ನು ನೀಡಿದರು. ಫುಜಾ ತನ್ನ ಗೋತ್ರದ ಕಡೆಗೆ ಹೊರಟನು ಮತ್ತು ಮಾರ್ಗದಲ್ಲಿ ಧರ್ಮತ್ಯಾಗಿಗಳಾದ ಅರೇಬಿಯರನ್ನು ತನ್ನ ಜೊತೆಗೆ ಸೇರಿಸಿದನು.

ಜನಕೂಟ ವರ್ಧಿಸಿದಾಗ ಅವನು ಮೊದಲು ತನ್ನ ಜೊತೆಗೆ ಇದ್ದ ಮುಸ್ಲಿಮರನ್ನು ವಧಿಸಿದನು ಮತ್ತು ಅವರ ಎಲ್ಲ ಸಂಪತ್ತನ್ನು ಲೂಟಿ ಮಾಡಿದನು. ಅನಂತರ ಅವನು ಕೆಲವೊಮ್ಮೆ ಆ ಗೋತ್ರದಲ್ಲಿ ದರೋಡೆ ಮಾಡಲು ಮತ್ತು ಕೆಲವೊಮ್ಮೆ ಆ ಗೋತ್ರದ ಮೇಲೆ ದಾಳಿ ನಡೆಸಲು ಆರಂಭಿಸಿದನು. ಹಝ್ರತ್ ಅಬೂಬಕರ್(ರ)ರಿಗೆ ಇದರ ಮಾಹಿತಿ ಲಭಿಸಿದಾಗ ಅವರು ತುರೈಫ ಬಿನ್ ಹಾಜಿಝ್‌ರಿಗೆ ಹೀಗೆ ಪತ್ರ ಬರೆದರು: ನೀವು ನಿಮ್ಮ ಬಳಿಯಿರುವ ಮುಸ್ಲಿಮರ ಜೊತೆಗೆ ಹೋಗಿ ಅವನನ್ನು ವಧಿಸಿರಿ ಅಥವಾ ಬಂಧಿಸಿ ನನ್ನ ಬಳಿಗೆ ಕಳುಹಿಸಿರಿ. ಹಝ್ರತ್ ತುರೈಫ ಬಿನ್ ಹಾಜಿರ್ಝ್ ಈ ಹೋರಾಟಕ್ಕಾಗಿ ಹೊರಟರು. ಇರುಪಕ್ಷಗಳ ಮುಖಾಮುಖಿಯಾಯಿತು. ಹಝ್ರತ್ ತುರೈಫ(ರ) ಫುಜಾನನ್ನು ಬಂಧಿಸಿ ಹಝ್ರತ್ ಅಬೂಬಕರ್(ರ)ರ ಸನ್ನಿಧಿಗೆ ತಂದರು. ಅವನನ್ನು ಬಖೀಅ್‌ಗೆ ಕೊಂಡುಹೋಗಿ ಬೆಂಕಿಯಲ್ಲಿ ಸುಟ್ಟು ಹಾಕಲು ಹಝ್ರತ್ ಅಬೂಬಕರ್(ರ) ಹಝ್ರತ್ ತುರೈಫರಿಗೆ ಆದೇಶ ನೀಡಿದರು. ಅವನು ಮುಸ್ಲಿಮರ ಜೊತೆಗೆ ಹೀಗೆ ವರ್ತಿಸುತ್ತಿದ್ದ ಕಾರಣದಿಂದ ಅವನ ಜೊತೆಗೂ ಹಾಗೆಯೇ ವರ್ತಿಸಲಾಯಿತು. (ತಾರೀಖ್ ತಬರಿ, ಸಂಪುಟ-2, ಪುಟ-266, ದಾರುಲ್ ಕುತುಬ್ ಇಲ್‌ಮಿಯ ಲೆಬನಾನ್ 2012) (ಹಝ್ರತ್ ಅಬೂಬಕರ್(ರ) ಕೆ ಸರ್ಕಾರಿ ಖುತೂತ್, ಖುರ್ಷಿದ್ ಅಹ್ಮದ್ ಫಾರೂಖ್, ಪುಟ-33-34) (ಫತೂಹ್ ಅಲ್ಬಲದಾನ್ ಲಿಬಲಾಝರಿ ಅನುವಾದ, ಪುಟ-152, ನಫೀಸ್ ಅಕಾಡಮಿ ಕರಾಚಿ)

ಒಂಬತ್ತನೇ ಕಾರ್ಯಾಚರಣೆಯು ಧರ್ಮತ್ಯಾಗಿಗಳಾದ ದಂಗೆಗಾರರ ವಿರುದ್ಧ ಹಝ್ರತ್ ಅಲಾ ಬಿನ್ ಹಝ್ರಮಿ ನಡೆಸಿದ್ದಾಗಿತ್ತು. ಹಝ್ರತ್ ಅಬೂಬಕರ್(ರ) ಒಂದು ಧ್ವಜವನ್ನು ಹಝ್ರತ್ ಅಲಾ ಬಿನ್ ಹಝ್ರಮಿಗೆ ಕೊಟ್ಟು ಅವರೊಡನೆ ಬಹ್ರೈನಿಗೆ ಹೋಗಲು ಆದೇಶ ನೀಡಿದರು. (ತಾರೀಖ್ ತಬರಿ, ಸಂಪುಟ-2, ಪುಟ-257, ದಾರುಲ್ ಕುತುಬ್ ಇಲ್‌ಮಿಯ ಲಡಬನಾನ್ 2012)

ಬಹ್ರೈನ್ ಯುವಾಮಾ ಹಾಗೂ ಪರ್ಶಿಯಾದ ಮಧ್ಯದ ಪ್ರದೇಶವಾಗಿದೆ. ಇದರಲ್ಲಿ ಪ್ರಸ್ತುತ ಕಾಲದ ಖತರ್ ಹಾಗೂ ಬಹ್ರೈನ್‌ನ ಅಮಾರತ್‌ಗಳು ಸಹ ಸೇರಿದ್ದವು. ಇದು ಈಗಿನ ಸಣ್ಣ ಬಹ್ರೈನ್ ಅಲ್ಲ. ಬಹಳ ದೊಡ್ಡ ವಿಸ್ತಾರವಾದ ಪ್ರದೇಶವಾಗಿತ್ತು. ಅದರ ರಾಜಧಾನಿ ದಾರೈನ್ ಆಗಿತ್ತು. (ಅಟ್ಲಸ್ ಸೀರತುನ್ನಬಿ(ಸ) ಪುಟ-68)

ಹಝ್ರತ್ ಅಲಾ ಬಿನ್ ಹಝ್ರಮಿಯ ಪರಿಚಯ ಹೀಗಿದೆ: ಅವರು ಯಮನಿನ ಪ್ರದೇಶವಾದ ಹಿಝ್ರೇ ಮೌತಿನ ನಿವಾಸಿಯಾಗಿದ್ದರು. ಇಸ್ಲಾಮಿನ ಪ್ರಚಾರದ ಆರಂಭದಲ್ಲೇ ಅವರು ಇಸ್ಲಾಂ ಸ್ವೀಕಾರ ಮಾಡಿದ್ದರು. ಹಝ್ರತ್ ಪೈಗಂಬರ್(ಸ) ಅರಸರಿಗೆ ತಬ್ಲೀಗಿನ ಪತ್ರಗಳನ್ನು ಕಳುಹಿಸುತ್ತಿದ್ದ ಸಂದರ್ಭದಲ್ಲಿ ಬಹ್ರೈನಿನ ಅಧಿಕಾರಿಯಾದ ಮುಂಧಿರ್ ಬಿನ್ ಸಾವಾರ ಬಳಿಗೆ ಪತ್ರವನ್ನು ತೆಗೆದುಕೊಂಡು ಹೋಗುವ ಸೇವೆಯನ್ನು ಹಝ್ರತ್ ಅಲಾ ಬಿನ್ ಹಝ್ರಮಿಗೆ ಒಪ್ಪಿಸಿದ್ದರು. ಅದರ ನಂತರ ಹಝ್ರತ್ ಪೈಗಂಬರ್(ಸ) ಅವರನ್ನು ಬಹ್ರೈನಿನ ಅಧಿಕಾರಿಯನ್ನಾಗಿ ಮಾಡಿದರು.

ಮುಂಧಿರ್ ಬಿನ್ ಸಾವಾರಿಗೆ ಹಝ್ರತ್ ಅಲಾ ಬಿನ್ ಹಝ್ರಮಿ(ರ) ಇಸ್ಲಾಮಿನ ಸಂದೇಶವನ್ನು ನೀಡಿದಾಗ ಅವರು ಇಸ್ಲಾಂ ಸ್ವೀಕಾರ ಮಾಡಿದರು. ಹಝ್ರತ್ ಪೈಗಂಬರ್(ಸ)ರ ನಿಧನದ ತನಕ ಹಝ್ರತ್ ಅಲಾ(ರ) ಬಹ್ರೈನಿನ ಅಧಿಕಾರಿಯಾಗಿದ್ದರು. ಅನಂತರ ಹಝ್ರತ್ ಅಬೂಬಕರ್(ರ)ರ ಖಿಲಾಫತ್ ಕಾಲದಲ್ಲೂ ಅವರು ಅದೇ ಹುದ್ದೆಯಲ್ಲಿ ಇದ್ದರು. ಹಝ್ರತ್ ಉಮರ್(ರ) ಸಹ ತನ್ನ ಖಿಲಾಫತ್ ಕಾಲದಲ್ಲಿ ಅವರನ್ನು ಅದೇ ಕೆಲಸದಲ್ಲಿ ನಿಶ್ಚಯಿಸಿದ್ದರು. ಕೊನೆಗೆ ಹಝ್ರತ್ ಉಮರ್(ರ)ರ ಖಿಲಾಫತ್ ಕಾಲದಲ್ಲಿ ಅವರು ನಿಧನಗೊಂಡರು. (ಅಸದುಲ್‌ಗಬ, ಸಂಪುಟ-4, ಪುಟ-71, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2016) (ಸೈರುಸ್ಸಹಾಬ, ಸಂಪುಟ-4, ಪುಟ-397-398) (ಸಯ್ಯದುನಾ ಅಬುಬಕರ್ ಸಿದ್ದೀಖ್(ರ), ದಾ॥ ಅಲಿ ಮುಹ್ಮದ್ ಸಲಾಬಿ, ಉರ್ದು ಅನುವಾದ, ಪುಟ-339)

ತಬ್‌ಖಾತು ಇಬ್ನು ಸಅದ್‌ರ ಪ್ರಕಾರ ಒಂದು ಬಾರಿ ಬಹ್ರೈನಿನ ಜನರು ಹಝ್ರತ್ ಅಲಾ ಬಿನ್ ಹಝ್ರಮಿಯ ಕುರಿತು ದೂರು ನೀಡಿದಾಗ ಹಝ್ರತ್ ಪೈಗಂಬರ್(ಸ) ಅವರನ್ನು ವಜಾಗೊಳಿಸಿದರು ಮತ್ತು ಹಝ್ರತ್ ಅಬಾನ್ ಬಿನ್ ಸಈದ್ ಬಿನ್ ಆಸ್‌ರನ್ನು ಅಧಿಕಾರಿಯನ್ನಾಗಿ ಮಾಡಿದರು. (ತಬಖಾತುಲ್ ಕುಬ್ರ ಇಬ್ನೆ ಸಅದ್, ಸಂಪುಟ-4, ಪುಟ-266, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 1990)

ಹಝ್ರತ್ ಪೈಗಂಬರ್(ಸ)ರ ನಿಧನದ ನಂತರ ಅಲ್ಲಿ ಧರ್ಮತ್ಯಾಗ ಮತ್ತು ದಂಗೆ ಎದ್ದಾಗ ಹಝ್ರತ್ ಅಬಾನ್ ಮದೀನಕ್ಕೆ ಮರಳಿ ಬಂದರು ಮತ್ತು ಆ ಹುದ್ದೆಯನ್ನು ತ್ಯಜಿಸಿದರು. ಹಝ್ರತ್ ಅಬೂಬಕರ್(ರ) ಅವರನ್ನು ಪುನಃ ಬಹ್ರೈನಿಗೆ ಕಳುಹಿಸಲು ಬಯಸಿದಾಗ, ಹಝ್ರತ್ ಪೈಗಂಬರ್(ಸ)ರ ನಂತರ ಈಗ ಅಧಿಕಾರಿಯಾಗುವುದಿಲ್ಲವೆಂದು ಹೇಳಿ ಕ್ಷಮೆ ಕೇಳಿದರು. ಆಗ ಹಝ್ರತ್ ಅಬೂಬಕರ್(ರ) ಹಝ್ರತ್ ಅಲಾ ಬಿನ್ ಹಝ್ರಮಿಯನ್ನು ಬಹ್ರೈನಿನ ಅಧಿಕಾರಿಯನ್ನಾಗಿ ಮಾಡಿಕೊಂಡು ಕಳುಹಿಸಿದರು. ಹೀಗೆ ಅವರು ಮರಣದ ತನಕ ಅದೇ ಹುದ್ದೆಯಲ್ಲಿ ಇದ್ದರು.

ಹಝ್ರತ್ ಅಲಾ(ರ)ರ ದುಆ ಸ್ವೀಕಾರಗಳು ಪ್ರಸಿದ್ಧಿಯನ್ನು ಪಡೆದಿದ್ದುವು. ಅವರ ದುಆ ಸ್ವೀಕಾರದ ಕುರಿತು ಅನೇಕ ವರದಿಗಳಿವೆ. ಹಝ್ರತ್ ಅಬೂಹುರೈರ(ರ) ಹೇಳುತ್ತಾರೆ: ಅವರ ಗುಣವೈಶಿಷ್ಟ್ಯಗಳು ಮತ್ತು ಅವರ ದುಆ ಸ್ವೀಕಾರದ ಬಗ್ಗೆ ನಾನು ಬಹಳ ಪ್ರಭಾವಿತನಾಗಿರುವೆನು. ಅದರ ಕುರಿತು ಅನೇಕ ವರದಿಗಳು ಇವೆ. ಒಂದು ಬಾರಿ ಮದೀನದಿಂದ ಬಹ್ರೈನಿಗೆ ಹೋಗುತ್ತಿದ್ದರು. ಮಾರ್ಗದಲ್ಲಿ ನೀರು ಮುಗಿಯಿತು. ಅವರು ಅಲ್ಲಾಹನಲ್ಲಿ ದುಆ ಮಾಡಿದರು. ಹೀಗೆ ಮರಳಿನ ಅಡಿಯಿಂದ ಒಂದು ಚಿಲುಮೆ ಹೊಮ್ಮಿ ಬಂತು. ಹೀಗೆ ಎಲ್ಲರೂ ಯಥೇಷ್ಟವಾಗಿ ನೀರು ಕುಡಿದರು.

ನಂತರ ಹಝ್ರತ್ ಅಬು ಹುರೈರಾ(ರ) ಹೇಳುತ್ತಾರೆ: ನಾನು ಅಲಾ(ರ) ಅವರೊಂದಿಗೆ ಸೈನ್ಯದೊಂದಿಗೆ ಬಹ್ರೇನ್‌ನಿಂದ ಬಸ್ರಾ ಕಡೆಗೆ ಹೊರಟೆ. ಅವರು ನಿಧನ ಹೊಂದಿದಾಗ ನಾವು ಲಿಯಾಸ್‌ನಲ್ಲಿದ್ದೆವು. ಲಯಾಸ್ ಎಂಬುದು ಬನು ತಮೀಮ್ ಪ್ರದೇಶದ ಒಂದು ಹಳ್ಳಿಯ ಹೆಸರಾಗಿದೆ. ನೀರಿಲ್ಲದ ಜಾಗದಲ್ಲಿ ನಾವಿದ್ದೆವು. ಅಲ್ಲಾಹನು ನಮ್ಮ ಮೇಲೆ ಮಳೆ ಸುರಿದ ಮೋಡದ ತುಂಡನ್ನು ಬಹಿರಂಗಪಡಿಸಿದನು. ಆಗ ನಾವು ಅವರಿಗೆ ಸ್ನಾನ ಮಾಡಿಸಿದ್ದೇವೆ ಮತ್ತು ನಮ್ಮ ಕತ್ತಿಗಳಿಂದ ಅವರಿಗೆ ಖಬರ್ ಅನ್ನು ತೋಡಿದೆವು. ನಾವು ಅವರಿಗೆ ಲಹದ್ ತಯಾರಿಸಲಿಲ್ಲ. ನಂತರ ನಾವು ಹಿಂತಿರುಗಿದೆವು. ಸ್ವಲ್ಪ ಸಮಯದ ನಂತರ ನಾವು ಅವರನ್ನು ಲಹದ್ ತಯಾರಿಸಲು ಹೋದೆವು ಆದರೆ ನಮಗೆ ಅವರ ಖಬರ್ ಸಿಗಲಿಲ್ಲ. (ತಬಕಾತ್ ಇಬ್ನ್ ಸಾದ್ (ಅನುವಾದಕ) ಸಂಪುಟ-4, ಪುಟಗಳು-375, 377, ನಫೀಸ್ ಅಕಾಡೆಮಿ ಕರಾಚಿಯಿಂದ ಪ್ರಕಟಿತ)

ಅವರ ನಿಧನದ ವಿಚಾರದಲ್ಲೂ ಭಿನ್ನಾಭಿಪ್ರಾಯವಿದೆ. ಕೆಲವರ ಪ್ರಕಾರ, ಅವರು 14 ಹಿಜರಿನಲ್ಲಿ ಮತ್ತು ಇತರರ ಪ್ರಕಾರ 21 ಹಿಜರಿನಲ್ಲಿ ನಿಧನರಾದರು ಎಂದಾಗಿದೆ. (ಅಸದುಲ್‌ಗಾಬ, ಸಂಪುಟ-4, ಪುಟ-71, ದಾರುಲ್ ಕುತುಬ್ ಇಲ್‌ಮಿಯ ಬೈರೂತ್)

ಬಹ್ರೇನ್‌ನ ಪರಿಸ್ಥಿತಿಯನ್ನು ಉಲ್ಲೇಖಿಸಲಾಗಿದೆ. ಬಹ್ರೇನ್ ಶಹಾನ್-ಇ-ಹೀರಾ ಆಳ್ವಿಕೆಯಲ್ಲಿತ್ತು ಮತ್ತು ಶಹಾನ್-ಇ-ಹೀರಾ ಕಸ್ರಾ ರಾಜರ ಅಡಿಯಲ್ಲಿತ್ತು. ಇಸ್ಲಾಂಗಿಂತ ಮೊದಲು ಹಿರಾ ಇರಾಕ್ ರಾಜರ ಸ್ಥಾನವಾಗಿತ್ತು. ಬಹ್ರೇನ್‌ನ ಕರಾವಳಿ ಮತ್ತು ವಾಣಿಜ್ಯ ನಗರಗಳು ಮಿಶ್ರ ಜನಸಂಖ್ಯೆಯನ್ನು ಹೊಂದಿದ್ದವು. ಪರ್ಷಿಯನ್ನರು ಇದ್ದರು, ಕ್ರಿಶ್ಚಿಯನ್ನರು ಇದ್ದರು, ಯಹೂದಿಗಳು ಇದ್ದರು, ಜಾಟ್‌ಗಳೂ ಇದ್ದರು ಮತ್ತು ಪರ್ಷಿಯನ್ನರು ಅರಬ್ ವ್ಯಾಪಾರದಲ್ಲಿ ಪ್ರಾಬಲ್ಯ ಹೊಂದಿದ್ದರು. ಈ ಪ್ರದೇಶಗಳಲ್ಲಿ ಭಾರತ ಮತ್ತು ಇರಾನ್‌ನಿಂದ ಬಂದು ಯೂಫ್ರೇಟ್ಸ್ ನದಿಯ ಮುಖಭಾಗದಿಂದ ಏಡನ್‌ನ ಕರಾವಳಿ ಪ್ರದೇಶದವರೆಗೆ ಮಧ್ಯ ಪ್ರದೇಶದಲ್ಲಿ ನೆಲೆಸಿದ ವ್ಯಾಪಾರಿಗಳ ಗುಂಪು ಕೂಡ ವಾಸಿಸುತ್ತಿದ್ದರು. ಈ ವ್ಯಾಪಾರಿಗಳು ಸ್ಥಳೀಯ ನಿವಾಸಿಗಳೊಂದಿಗೆ ವಿವಾಹ ಸಂಬಂಧವನ್ನು ಸಹ ಸ್ಥಾಪಿಸಿದ್ದರು ಮತ್ತು ಅವರಿಂದ ಹುಟ್ಟಿದ ಪೀಳಿಗೆಯನ್ನು ಅಬ್ನಾ ಎಂದು ಕರೆಯಲಾಯಿತು. (ಹಝ್ರತ್ ಅಬೂಬಕರ್ ಸಿದ್ದೀಖ್(ರ), ಮುಹಮ್ಮದ್ ಹುಸೈನ್ ಹೈಕಲ್, ಉರ್ದು ಅನುವಾದ, ಪುಟ-237) (ಫರ್ಹಂಗ್ ಸೀರತ್, ಪುಟ-110, ಝುವಾರ ಅಕಾಡಮಿ ಕರಾಚಿ)

ಮೂರು ಪ್ರಮುಖ ಕುಲಗಳು ಮತ್ತು ಅವರ ಅನೇಕ ಶಾಖೆಗಳು ಕರಾವಳಿ ನಗರಗಳ ಹಿಂಭಾಗದಲ್ಲಿ ನೆಲೆಸಿದವು. ಒಬ್ಬರು ಬಕ್ರ್ ಬಿನ್ ವಾಯಿಲ್, ಇನ್ನೊಬ್ಬರು ಅಬ್ದುಲ್ ಕೈಸ್ ಮತ್ತು ಮೂರನೆಯವರು ರಬಿಅಹ್. ಅವರ ಕುಟುಂಬಗಳಲ್ಲಿ ಹೆಚ್ಚಿನವರು ಕ್ರೈಸ್ತರಾಗಿದ್ದರು. ಕುದುರೆಗಳು, ಒಂಟೆಗಳು ಮತ್ತು ಮೇಕೆಗಳ ಹಿಂಡು ಮತ್ತು ತಾಳೆ ತೋಟಗಳನ್ನು ನೆಡುವುದು ಅವರ ವಿಶೇಷ ಉದ್ಯೋಗವಾಗಿತ್ತು. ಈ ಗೋತ್ರಗಳ ರಾಜ್ಯಪಾಲರು ಹೀರಾ ಸರ್ಕಾರದ ವಿಶ್ವಾಸವನ್ನು ಹೊಂದಿದ್ದ ಸ್ಥಳೀಯ ನಾಯಕರಾಗಿದ್ದರು. ಅವರಲ್ಲಿ ಮುಂಧೀರ್ ಬಿನ್ ಸಾವಾ ಅವರು ಬಹ್ರೇನ್‌ನ ಹಜರ್ ಜಿಲ್ಲೆಯಲ್ಲಿ ವಾಸಿಸುತ್ತಿದ್ದರು ಮತ್ತು ಹಜರ್ ಸುತ್ತಮುತ್ತಲಿನ ಅಬ್ದುಲ್ ಕೈಸ್ ಗೀತ್ರದ ಮೇಲೆ ಆಳ್ವಿಕೆ ನಡೆಸಿದರು. (ಹ'ರ'ಝ'ರ'ತ್

ಅಬುಬಕರ್(ರ) ಕೆ ಸರ್ಕಾರಿ ಖಿತೂತ್, ಪುಟ-48, ನದ್ವತ್ ಅಲ್-ಮುಸನ್ನಫೀನ್ ದೆಹಲಿ)

ಅಬ್ದುಲ್ ಕೈಸ್ ಗೋತ್ರಸ ಎರಡು ನಿಯೋಗಗಳು ಪ್ರವಾದಿ(ಸ)ರವರ ಸೇವೆಗೆ ಬಂದವು. ಹದಿಮೂರು ಅಥವಾ ಹದಿನಾಲ್ಕು ಜನರನ್ನು ಒಳಗೊಂಡಿರುವ ಐದನೇ ಹಿಜ್ರಿಯಲ್ಲಿ ಪ್ರವಾದಿ(ಸ) ಅವರ ಸೇವೆಗೆ ನಿಯೋಗವು ಬಂದಿತು ಮತ್ತು ಅಬ್ದುಲ್ ಕೈಸ್ ಗೋತ್ರದ ಮತ್ತೊಂದು ನಿಯೋಗವು 9ನೇ ಹಿಜರಿಯಲ್ಲಿ ಮತ್ತೊಮ್ಮೆ ಪ್ರವಾದಿ(ಸ) ರವರ ಸೇವೆಗೆ ಬಂದಿತ್ತು. ಇದರಲ್ಲಿ ಜರೂದ್ ಸೇರಿದಂತೆ ನಲವತ್ತು ಜನರನ್ನು ಸೇರಿಸಲಾಯಿತು. ಜರೂದ್ ಒಬ್ಬ ಕ್ರಿಶ್ಚಿಯನ್ ಆಗಿದ್ದು, ಅವನು ಇಲ್ಲಿಗೆ ಬಂದು ಮುಸ್ಲಿಂ ಆದನು. (ಅಟ್ಲಾಸ್, ಸೀರತುನ್ನಬಿ(ಸ), ಪುಟ 438)

ಒಂದು ಅಭಿಪ್ರಾಯದ ಪ್ರಕಾರ, ಈ ನಿಯೋಗವು ಪ್ರವಾದಿಯವರ ಬಳಿಗೆ ಬರುವ ಮೊದಲೇ ಇಸ್ಲಾಂ ಧರ್ಮವನ್ನು ಸ್ವೀಕರಿಸಿತ್ತು. (ಝುರ್ಕಾನಿ, ಸಂಪುಟ-5, ಪುಟ-141, ದಾರುಲ್ ಕುತುಬ್ ಇಲ್ಮಿಯ ಬೈರೂತ್ 1996)

ಹಜಾರ್‌ನ ಪರ್ಷಿಯನ್ನರು, ಕ್ರಿಶ್ಚಿಯನ್ನರು ಮತ್ತು ಯಹೂದಿಗಳು ಜಿಝ್ಯವನ್ನು ಪಾವತಿಸಲು ಬಹಳ ಬೇಸರದಿಂದ ಒಪ್ಪಿಕೊಂಡರು. ಬಹ್ರೇನ್‌ನ ಉಳಿದ ಪಟ್ಟಣಗಳು ಮತ್ತು ನಗರಗಳು ಮುಸ್ಲಿಮೇತರರಾಗಿಯೇ ಉಳಿದಿವೆ, ಆದರೆ ಈ ಜನರು ಅವಕಾಶ ಸಿಕ್ಕಾಗಲೆಲ್ಲಾ ಕಾಲಕಾಲಕ್ಕೆ ದಂಗೆಯನ್ನು ಮುಂದುವರೆಸಿದರು. (ಹಝ್ರತ್ ಅಬುಬಕರ್(ರ) ಕೆ ಸರ್ಕಾರಿ ಖೂತೂತ್, ಪುಟ-48, ನದ್ವತ್ ಅಲ್-ಮುಸ್ನಾಫಿನ್ ದೆಹಲಿ) (ಸೈರುಸ್ಸಹಬ, ಸಂಪುಟ-4, ಪುಟ-398)

ಮುಂಧಿರ್ ಬಿನ್ ಸಾವಾ ಇಸ್ಲಾಂ ಸ್ವೀಕಾರ ಮಾಡಿದಾಗ ಹಝ್ರತ್ ಪೈಗಂಬರ್(ಸ) ಅವರನ್ನು ಬಹ್ರೈನಿನ ಅಧಿಕಾರಿಯನ್ನಾಗಿ ಮಾಡಿದ್ದರು. ಇಸ್ಲಾಂ ಸ್ವೀಕಾರ ಮಾಡಿದ ನಂತರ ಅವರು ತನ್ನ ಸಮುದಾಯವನ್ನು ಸತ್ಯ ದೀನಿನ ಕಡೆಗೆ ಆಹ್ವಾನಿಸಲು ಶುರುಮಾಡಿದರು. ಜಾರೂತ್ ಬಿನ್ ಮುಅಲ್ಲರನ್ನು ದೀನಿನ ತರಬೇತಿ ಪಡೆಯಲಿಕ್ಕಾಗಿ ಹಝ್ರತ್ ಪೈಗಂಬರ್(ಸ)ರ ಸನ್ನಿಧಿಗೆ ಕಳುಹಿಸಿದರು. ಜಾರೂತ್ ಮದೀನಕ್ಕೆ ತಲುಪಿ ಇಸ್ಲಾಮಿನ ಪಾಠಗಳು ಮತ್ತು ಆಜ್ಞೆಗಳನ್ನು ಕಲಿತರು ಮತ್ತು ತನ್ನ ಸಮುದಾಯಕ್ಕೆ ಮರಳಿ ಹೋಗಿ ದೀನಿನ ಪ್ರಚಾರ ಮಾಡಲು ಮತ್ತು ಇಸ್ಲಾಮಿನ ಪಾಠಗಳನ್ನು ಜನರಿಗೆ ಕಲಿಸುವ ಕೆಲಸವನ್ನು ಶುರುಮಾಡಿದರು. ಹಝ್ರತ್ ಪೈಗಂಬರ್(ಸ)ರ ನಿಧನದ ನಂತರ ಕೆಲವೇ ದಿನಗಳಲ್ಲಿ, ಎಂದರೆ ಹಿಜರಿ 11ರಲ್ಲಿ ಮುಂದಿರ್(ರ) ನಿಧನರಾದರು. ಆಗ ಅರಬ್ ಮತ್ತು ಅರೇಬಿಯೇತರರು ದಂಗೆಯೆದ್ದರು. ಅಬ್ದುಲ್‌ಖೈಸ್ ಗೋತ್ರ ಹೀಗೆ ಹೇಳಿತು: ಹಝ್ರತ್ ಪೈಗಂಬರ್(ಸ) ಪ್ರವಾದಿಯಾಗಿದ್ದರೆ ಅವರು ಎಂದಿಗೂ ಮೃತಪಡುತ್ತಿರಲಿಲ್ಲ. ಹೀಗೆ ಹೇಳಿ ಅವರೆಲ್ಲರೂ ಧರ್ಮತ್ಯಾಗಿಗಳಾದರು. ಅದರ ಮಾಹಿತಿ ಹಝ್ರತ್ ಜಾರೂತಿಗೆ ಲಭಿಸಿತು. ಹಝ್ರತ್ ಜಾರೂತ್ ತನ್ನ ಸಮುದಾಯದ ಗಣ್ಯ ವ್ಯಕ್ತಿಯಾಗಿದ್ದರು. ಅವರು ಮದೀನಕ್ಕೆ ಹೋಗಿ ಹಝ್ರತ್ ಪೈಗಂಬರ್(ಸ)ರಿಂದ ತರಬೇತಿ ಪಡೆದುಕೊಂಡಿದ್ದರು. ಅವರು ಉತ್ತಮ ಭಾಷಣಗಾರರಾಗಿದ್ದರು. (ಅಲ್‌ಬಿದಾಯ ವನ್ನಹಾಯ, ಸಂಪುಟ-9, ಪುಟ-475-476, ದಾರೆ ಹಿಜರ್)

ಹಝ್ರತ್ ಜಾರೂದ್(ರ) ಧರ್ಮತ್ಯಾಗಿಗಳಾದ ಎಲ್ಲರನ್ನು ಒಟ್ಟುಗೂಡಿಸಿದರು. ಹಝ್ರತ್ ಪೈಗಂಬರ್(ಸ) ಏಕೆ ಮೃತಪಟ್ಟರು ಎಂಬುದರ ಬಗ್ಗೆ ಭಾಷಣ ಮಾಡಲು ಎದ್ದು ನಿಂತರು ಮತ್ತು ಹೀಗೆ ಹೇಳಿದರು: ಎಲೈ ಅಬ್ದುಲ್‌ಖೈಸಿನ ಸಮೂಹವೇ, ನಾನು ನಿಮ್ಮೊಡನೆ ಒಂದು ಮಾತು ಕೇಳುತ್ತೇನೆ. ನಿಮಗೆ ಅದರ ಬಗ್ಗೆ ಗೊತ್ತಿದ್ದರೆ ನನಗೆ ಹೇಳಿಕೊಡಿರಿ. ಗೊತ್ತಿಲ್ಲದಿದ್ದರೆ ಹೇಳಬೇಡಿರಿ. ಏನು ಬೇಕಾದರೂ ಕೇಳಿರಿ ಎಂದು ಅವರು ಹೇಳಿದರು. ಹಝ್ರತ್ ಜಾರೂತ್ ಹೇಳಿದರು: ಕಳೆದ ಕಾಲಘಟ್ಟಗಳಲ್ಲಿ ಅಲ್ಲಾಹನ ಪ್ರವಾದಿಗಳು ಬಂದಿದ್ದರು ಎಂದು ನಿಮಗೆ ಗೊತ್ತೇ? ಹೌದೆಂದು ಅವರು ಹೇಳಿದರು. ನಿಮಗೆ ಅವರ ಬಗ್ಗೆ ಅರಿವು ಮಾತ್ರವಿರುವುದೋ ಅಥವಾ ನೀವು ಅವರನ್ನು ನೋಡಿರುವಿರಾ? ನಾವು ಅವರನ್ನು ನೋಡಿಲ್ಲ, ಅರಿವು ಮಾತ್ರವಿದೆ ಎಂದು ಅವರು ಹೇಳಿದರು. ಅನಂತರ ಅವರಿಗೆ ಏನಾಯಿತು ಎಂದು ಹಝ್ರತ್ ಜಾರೂತ್ ಕೇಳಿದರು. ಅವರು ಮೃತಪಟ್ಟರು ಎಂದು ಜನರು ಹೇಳಿದರು. ಹಝ್ರತ್ ಜಾರೂತ್ ಹೇಳಿದರು: ಅವರೆಲ್ಲರೂ ಮೃತಪಟ್ಟ ರೀತಿಯಲ್ಲೇ ಹಝ್ರತ್ ಪೈಗಂಬರ್(ಸ) ಕೂಡ ಮೃತಪಟ್ಟಿದ್ದಾರೆ ಮತ್ತು ಅಲ್ಲಾಹನಲ್ಲದೇ ಆರಾಧ್ಯನಿಲ್ಲವೆಂದೂ ಮುಹಮ್ಮದ್(ಸ) ಅವರ ದಾಸರೂ ದೂತರೂ ಎಂದು ನಾನು ಸಾಕ್ಷ್ಯವಹಿಸುತ್ತೇನೆ.

ಈ ಭಾಷಣವನ್ನು ಆಲಿಸಿದ ನಂತರ ಅವರ ಸಮುದಾಯ ಹೀಗೆ ಹೇಳಿತು: ಅಲ್ಲಾಹನಲ್ಲದೇ ಆರಾಧ್ಯನಿಲ್ಲವೆಂದೂ ಮುಹಮ್ಮದ್(ಸ) ಅವರ ದಾಸರೂ ದೂತರೂ ಎಂದು ನಾವು ಸಾಕ್ಷ್ಯವಹಿಸುತ್ತೇವೆ ಹಾಗೂ ನಾವು ನಿಮ್ಮನ್ನು ಗಣ್ಯರೂ ಮತ್ತು ನಮ್ಮ ನೇತಾರರನ್ನಾಗಿ ಒಪ್ಪಿಕೊಳ್ಳುತ್ತೇವೆ. ಈ ರೀತಿಯಾಗಿ ಅವರು ಇಸ್ಲಾಮಿನಲ್ಲಿ ಸ್ಥಿರಚಿತ್ತರಾದರು. ಧರ್ಮತ್ಯಾಗದ ಸೋಂಕು ಅವರನ್ನು ಮುಟ್ಟಲಿಲ್ಲ. (ತಾರೀಖ್ ತಬರಿ, ಸಂಪುಟ-2, ಪುಟ-285, ದಾರುಲ್ ಕುತುಬ್ ಇಲ್ಮಿಯ ಲೆಬನಾನ್ 2012)

ಉಳಿದ ಅರಬ್ ಮತ್ತು ಅರೇಬಿಯೇತರರು ಎಲ್ಲರೂ ಮದೀನದ ಆಡಳಿತವನ್ನು ಕೊನೆಗೊಳಿಸಲು ತಯಾರಾಗಿ ನಿಂತಿದ್ದರು. ಇರಾನಿನ ಆಡಳಿತವು ಅವರನ್ನು ಹುರಿದುಂಬಿಸಿದರು. ದಂಗೆಯ ಕಮಾನನ್ನು ನೇತೃತ್ವವನ್ನು ಅರೇಬಿಯದ ಒಬ್ಬ ದೊಡ್ಡ ನಾಯಕನಿಗೆ ಒಪ್ಪಿಸಿದರು. ಹಝ್ರತ್ ಪೈಗಂಬರ್(ಸ)ರ ಪ್ರತಿನಿಧಿಯಾದ ಆಬಾನ್ ಬಿನ್ ಸಈದ್ ಬಿನ್ ಆಸ್(ರ) ಹಜರಿನಲ್ಲಿ ದಂಗೆಯ ಕಪ್ಪು ಮೋಡಗಳು ಏಳುವುದನ್ನು ಕಂಡಾಗ ಮದೀನಕ್ಕೆ ಮರಳಿ ಬಂದರು.(ಹಝ್ರತ್ ಅಬೂಬಕರ್(ರ) ಕೆ ಸರ್ಕಾರಿ ಖೂತೂತ್, ಪುಟ-49, ನದ್ವತುಲ್ ಮುಸನ್ನಿಫೀನ್ ದೆಹಲಿ)

ಬನು ಅಬ್ದುಲ್ ಕೈಸ್ ಅವರು ತೋರಿಕೆಯಲ್ಲಿ ಅವರಲ್ಲಿ ಕೆಲವರು ಇಸ್ಲಾಂಗೆ ಮತಾಂತರಗೊಂಡರು, ಆದರೆ ಬಹ್ರೇನ್‌ನ ಇತರ ಗೋತ್ರಗಳು ಹುತಮ್ ಬಿನ್ ಜುಬೈಅ ಅವನ ನೇತೃತ್ವದಲ್ಲಿ ಧರ್ಮಭ್ರಷ್ಟರಾಗಿ ಉಳಿದರು ಮತ್ತು ಅವರು ಪುನಃ ರಾಜ್ಯವನ್ನು ಮುಂಧರ್ ಕುಲಕ್ಕೆ ವರ್ಗಾಯಿಸಿದರು ಮತ್ತು ಮುಂಧರ್ ಬಿನ್ ನುಮಾನ್ ಅವರನ್ನು ತಮ್ಮ ರಾಜನನ್ನಾಗಿ ಸ್ವೀಕರಿಸಿದರು. ಇದರ ಬಗ್ಗೆ ಒಂದು ವರದಿ ಹೀಗಿದೆ:

ಅವರು ಮುಂಧಿರ್ ಬಿನ್ ನುಮಾನ್ ನನ್ನು ರಾಜನನ್ನಾಗಿ ಮಾಡಲು ಉದ್ದೇಶಿಸಿದಾಗ, ಅವರ ಗಣ್ಯರು ಮತ್ತು ಮುಖ್ಯಸ್ಥರ ತಂಡವು ಇರಾನ್‌ನ ರಾಜ ಕಸ್ರಾನ ಬಳಿ ತಲುಪಿದರು. ಅವರ ಮುಂದೆ ಹಾಜರಾಗಲು ಅನುಮತಿ ಕೋರಿದರು. ಅವನು ಅವರಿಗೆ ಅನುಮತಿಯನ್ನು ನೀಡಿದನು ಮತ್ತು ಅವರು ಅವನ ಮುಂದೆ ರಾಜರಿಗೆ ಯೋಗ್ಯವಾದ ಉಪಕರವನ್ನು ಪ್ರದರ್ಶಿಸಿದರು. ಕಸ್ರಾ ಹೇಳಿದರು: ಓ ಅರಬ್ಬರ ಗುಂಪು! ನಿಮ್ಮನ್ನು ಇಲ್ಲಿಗೆ ಕರೆತಂದದ್ದು ವಿಷಯ ಯಾವುದು? ಅವರು ಹೇಳಿದರು, ಓ ರಾಜ! ಖುರೈಶ್ ಮತ್ತು ಮುಝರ್‌ನ ಎಲ್ಲಾ ಗೋತ್ರಗಳಿಂದ ಗೌರವಿಸಲ್ಪಟ್ಟ ಅರೇಬಿಯಾದ ಆ ವ್ಯಕ್ತಿ ನಿಧನರಾದರು. ಅಂದರೆ ಅವರು ಪೈಗಂಬರ್(ಸ)ರವರನ್ನು ಉದ್ದೇಶಿಸಿ ಹೇಳಿದರು ತದನಂತರ ಅವರು ಓರ್ವ ದುರ್ಬಲ ದೇಹವನ್ನು ಹೊಂದಿರುವ ದುರ್ಬಲ ಮನಸ್ಸಿನ ವ್ಯಕ್ತಿಯೊಬ್ಬ ಉತ್ತರಾಧಿಕಾರಿಯಾಗಿ ನಿಂತಿದ್ದಾನೆ ಎಂದು ಹೇಳಿದರು. ಅವರು ಹಝ್ರತ್ ಅಬುಬಕರ್(ರ) ಅವರ ಬಗ್ಗೆ ಈ ಅಭಿಪ್ರಾಯವನ್ನು ನೀಡಿದರು ಮತ್ತು ಅವರ ಅನುಯಾಯಿಗಳು ಮಾರ್ಗದರ್ಶನಕ್ಕಾಗಿ ತಮ್ಮ ಸಹಚರರ ಬಳಿಗೆ ಹಿಂತಿರುಗಿದ್ದಾರೆ. ಇಂದು, ಬಹ್ರೇನ್ ಪ್ರದೇಶವು ಅವರ ಕೈಯಿಂದ ಹೊರಬಂದಿದೆ. ಅಬ್ದುಲ್ ಕೈಸ್ ಎಂಬ ಸಣ್ಣ ಗುಂಪನ್ನು ಹೊರತುಪಡಿಸಿ, ಅವರಲ್ಲಿ ಯಾರೂ ಈಗ ಇಸ್ಲಾಂ ಧರ್ಮದಲ್ಲಿ ದೃಢವಾಗಿಲ್ಲ ಮತ್ತು ಅವರು ನಮಗೆ ಯಾವುದೇ ಮೌಲ್ಯವನ್ನು ಹೊಂದಿಲ್ಲ. ಮತ್ತು ಅಶ್ವದಳ ಮತ್ತು ಪದಾತಿ ದಳದ ವಿಷಯದಲ್ಲಿ ನಾವು ಅವರ ಮೇಲೆ ಬಹುಮತವನ್ನು ಹೊಂದಿದ್ದೇವೆ. ನೀವು ಒಬ್ಬ ವ್ಯಕ್ತಿಯನ್ನು ಕಳುಹಿಸಿ, ಅವನು ಬಹ್ರೇನ್ ಅನ್ನು ಆಕ್ರಮಿಸಲು ಬಯಸಿದರೆ, ಯಾರೂ ಅವನನ್ನು ತಡೆಯಲು ಸಾಧ್ಯವಿಲ್ಲ. ಇದರ ಮೇಲೆ ಕಸ್ರಾ ಅವರಿಗೆ ಹೇಳಿದರು: "ನಾನು ನಿಮ್ಮೊಂದಿಗೆ ಬಹ್ರೇನ್‌ಗೆ ಕಳುಹಿಸಬೇಕಾದ ಯಾರನ್ನು ನೀವು ಇಷ್ಟಪಡುತ್ತೀರಿ?" ಶಾಂತಿಯನ್ನು ಇಷ್ಟಪಡುವ ರಾಜ ಎಂದು ಹೇಳಿದರು. ಕಸ್ರಾ ಹೇಳಿದರು, "ಮುಂಧರ್ ಬಿನ್ ನುಮಾನ್ ಬಿನ್ ಮುಂಧರ್‌ನ ಬಗ್ಗೆ ನೀವು ಏನು ಹೇಳುತ್ತೀರಿ?" ಅದಕ್ಕೆ ಅವರಿ ಹೇಳಿದರು: ಓ ರಾಜ! ನಾವು ಅವನನ್ನು ಪ್ರೀತಿಸುತ್ತೇವೆ ಮತ್ತು ನಮಗೆ ಬೇರೆ ಯಾರನ್ನೂ ಬಯಸುವುದಿಲ್ಲ. ಆಗ ಕಸ್ರಾ ಮುಂಧರ್ ಬಿನ್ ನುಮಾನ್ ಅವರನ್ನು ಕರೆದರು ಮತ್ತು ಅವನು ಹೊಸದಾಗಿ ಗಡ್ಡವನ್ನು ಬೆಳೆಸಿದ ಯುವಕನಾಗಿದ್ದ. ಇರಾನಿನ ಅರಸನು ಮುಂಧಿರ್ ಬಿನ್ ನೂಮಾನಿಗೆ ವಸ್ತ್ರವನ್ನು ಕೊಟ್ಟನು, ಕಿರೀಟವನ್ನು ತೊಡಿಸಿದನು, ನೂರು ಕುದುರೆ ಸವಾರರನ್ನು ನೀಡಿದನು. ಅದಲ್ಲದೆಯೂ 7 ಸಾವಿರ ಕಾಲಾಳು ಸೈನಿಕರು ಮತ್ತು ಸವಾರರನ್ನು ನೀಡಿದನು ಹಾಗೂ ಬಕರ್ ಬಿನ್ ವಾಯಿಲ್ ಗೋತ್ರದ ಜೊತೆಗೆ ಬಹ್ರೈನಿಗೆ ಹೋಗಲು ಆದೇಶ ನೀಡಿದನು ಮತ್ತು ಅವನೊಂದಿಗೆ ಅಬು ಜುಬೈಹ್ ಹುತಮ್ ಬಿನ್ ಜೈದ್, ಅವನ ಹೆಸರು ಶುರೈಹ್ ಬಿನ್ ಜುಬಯಾಹ್ ಎಂದಾಗಿತ್ತು, ಅವನು ಬನು ಖೈಸ್ ಬಿನ್ ಥಲಬಾಹ್ ನಿಂದ ಬಂದವನು ಮತ್ತು ಹುತಮ್ ಅವನ ಬಿರುದು. ಇಸ್ಲಾಂ ಧರ್ಮವನ್ನು ಸ್ವೀಕರಿಸಿದ ನಂತರ, ಅವರು ಧರ್ಮಭ್ರಷ್ಟನಾದನು. (ಕಿತಾಬ್ ಅಲ್-ಇರ್ದಾತ್ ಲಾಲ್ವಾಕಿದಿ, ಪುಟಗಳು 147 ರಿಂದ 149, ದಾರ್ ಅಲ್-ಘರ್ಬ್ ಅಲ್-ಇಸ್ಲಾಮಿ, 1990)

ಅವರೆಲ್ಲರೂ ಮೊತ್ತಮೊದಲು ಅಬ್ದುಲ್‌ಖೈಸ್ ಗೋತ್ರವನ್ನು ಇಸ್ಲಾಮಿನಿಂದ ಹಿಂದಿರುಗಿಸಲು ಪ್ರಯತ್ನಿಸಿದರು. ಆದರೆ ಅದರಲ್ಲಿ

ಪರಾಜಿತರಾದರು. ಆದ್ದರಿಂದ ಬಲಪ್ರಯೋಗಿಸಿ ಅವರನ್ನು ಅಧೀನಗೊಳಿಸಲು ಬಯಸಿದರು. ಅವರು ಕತೀಫ್ ಮತ್ತು ಹಜಾರ್‌ನಲ್ಲಿ ವಾಸಿಸುವ ವಿದೇಶಿ ವ್ಯಾಪಾರಿಗಳಿಗೆ ಮತ್ತು ಮೊದಲು ಇಸ್ಲಾಂ ಧರ್ಮವನ್ನು ಸ್ವೀಕರಿಸದವರಿಗೆ ಅವಕಾಶ ನೀಡಿದರು. ಅವನು ಅವರನ್ನು ತನ್ನೊಂದಿಗೆ ಸೇರಿಸಿಕೊಂಡನು. (ಹಝ್ರತ್ ಅಬುಬಕರ್ ಸಿದ್ದೀಕ್(ರ) ಮುಹಮ್ಮದ್ ಹುಸೇನ್ ಹೈಕಲ್ ಅವರಿಂದ, ಪುಟ 238–239, ಇಸ್ಲಾಮಿಕ್ ಲೈಬ್ರರಿ ಲಾಹೋರ್)

ಅಬ್ದುಲ್‌ಖೈಸ್ ಗೋತ್ರದ ಜನರು ತಮ್ಮ ಸರದಾರ ಹಝ್ರತ್ ಜಾರೂತ್ ಬಿನ್ ಮುಅಲ್ಲಾರ ಬಳಿಗೆ 4 ಸಾವಿರದ ಸಂಖ್ಯೆಯಲ್ಲಿ ತಮ್ಮ ಸಹಾಯಕರ ಮತ್ತು ಗುಲಾಮರ ಜೊತೆಗೆ ಒಟ್ಟುಗೂಡಿದರು ಮತ್ತು ಬಕರ್ ಬಿನ್ ವಾಯಿಲ್ ತನ್ನ 9 ಸಾವಿರ ಇರಾನಿಯರ ಮತ್ತು 3 ಸಾವಿರ ಅರೇಬಿಯರ ಜೊತೆಗೆ ಅವರ ಸಮೀಪಕ್ಕೆ ಬಂದರು.

ಅನಂತರ ಇರುಪಕ್ಷಗಳ ನಡುವೆ ಘೋರವಾದ ಯುದ್ಧ ನಡೆಯಿತು. ಬಕರ್ ಬಿನ್ ವಾಯಿಲ್ ಗೋತ್ರಕ್ಕೆ ದೊಡ್ಡದಾದ ನಷ್ಟ ಉಂಟಾಯಿತು. ಅನಂತರ ಅವರು ಪುನಃ ತೀವ್ರವಾದ ಹೋರಾಟ ನಡೆಸಿದರು. ಈ ಬಾರಿ ಅಬ್ದುಲ್ ಖೈಸ್ ಗೋತ್ರಕ್ಕೆ ದೊಡ್ಡ ನಷ್ಟವುಂಟಾಯಿತು. ಈ ರೀತಿಯಾಗಿ ಅವರು ಪರಸ್ಪರ ಪ್ರತೀಕಾರ ಮಾಡುತ್ತಿದ್ದರು. ಅವರ ನಡುವೆ ಅನೇಕ ದಿನಗಳ ತನಕ ಯುದ್ಧ ಮುಂದುವರೆಯಿತು. ಕೊನೆಗೆ ಅನೇಕ ಜನರು ಕೊಲ್ಲಲ್ಪಟ್ಟರು. ಅಬ್ದುಲ್‌ಖೈಸ್ ಗೋತ್ರದ ಜನಸಾಮಾನ್ಯರು ಬಕರ್ ಬಿನ್ ವಾಯಿಲ್ ಗೋತ್ರದೊಡನೆ ಶಾಂತಿ ಸ್ಥಾಪಿಸಲು ವಿನಂತಿಸಿಕೊಂಡರು. ಬಕರ್ ಬಿನ್ ವಾಯಿಲ್‌ರನ್ನು ಎದುರಿಸಲು ಇನ್ನು ಶಕ್ತಿಯಿಲ್ಲವೆಂದು ಅಬ್ದುಲ್‌ಖೈಸ್ ಗೋತ್ರಕ್ಕೆ ಗೊತ್ತಾಯಿತು. ಹೀಗೆ ಅವರು ಪರಾಜಿತಗೊಂಡು ಹಿಜರಿನ ಪ್ರದೇಶದಲ್ಲಿ ತನ್ನ ಜವಾಸ ಎಂಬ ಹೆಸರಿನ ಕೋಟೆಯಲ್ಲಿ ರಕ್ಷಣೆ ಪಡೆದರು. ಜುವಾಸ ಬಹ್ರೇನ್‌ನ ಪಟ್ಟಣವಾಗಿದೆ, ಅಲ್ಲಿ ಪ್ರವಾದಿ(ಸ)ರವರ ಮಸೀದಿಯ ನಂತರ ಮೊತ್ತಮೊದಲು ಜುಮುಅ ನಿರ್ವಹಿಸಲಾಯಿತು. ಬುಖಾರಿಯ ಒಂದು ವರದಿ ಹೀಗಿದೆ: ಹಝ್ರತ್ ಇಬ್ನೆ ಅಬ್ಬಾಸ್(ರ) ವರದಿ ಮಾಡುತ್ತಾರೆ **ಇನ್ನ ಅವ್ವಲ ಜುಮುಅತಿನ್ ಜುಮ್ಮಿಅತ್ ಬಅದ ಜುಮುಅತಿನ್ ಫೀ ಮಸ್ಜಿದಿ ರಸೂಲಿಲ್ಲಾಹಿ ಫೀ ಮಸ್ಜಿದಿ ಅಬ್ದಿಲ್ ಖೈಸಿ ಬಿಜುವಾಸಾ ಮಿನಲ್ ಬಹ್ರೈನ್** ಅಂದರೆ ಪ್ರವಾದಿ(ಸ)ರವರ ಮಸೀದಿಯ ನಂತರ ಮೊತ್ತಮೊದಲು ಜುಮುಅ ಅಬ್ದುಲ್ ಖೈಸ್‌ನ ಗೋತ್ರದ ಮಸೀದಿ ಬಹ್ರೈನ್‌ನ ಜುವಾಸದಲ್ಲಿ ನಿರ್ವಹಿಸಲಾಯಿತು. ಬನೂ ಬಕರ್ ಬಿನ್ ವಾಯಿಲ್ ಗೋತ್ರವು ಇರಾನಿನ ಜನರ ಜೊತೆಗೆ ಮುಂದಕ್ಕೆ ಹೋಗಿ ಅವರ ಕೋಟೆಯ ತನಕ ತಲುಪಿದರು ಮತ್ತು ಮುತ್ತಿಗೆ ಹಾಕಿದರು ಹಾಗೂ ಆಹಾರ ಸಾಮಗ್ರಿಗಳು ತಲುಪುವುದನ್ನು ತಡೆದರು. ಬನುಬಕರ್ ಬಿನ್ ಕಿಲಾಬ್‌ನ ಓರ್ವ ವ್ಯಕ್ತಿ ಅಬ್ದುಲ್ಲಾ ಬಿನ್ ಹಝೀಫ್ ಎಂದು ಕರೆಯಲ್ಪಡುವ ಅಬ್ದುಲ್ಲಾ ಬಿನ್ ಔಫ್ ಅಬದಿ ಈ ಸಂದರ್ಭದಲ್ಲಿ ಹಝ್ರತ್ ಅಬುಬಕರ್(ರ) ಮತ್ತು ಮದೀನಾದ ಜನರನ್ನು ಉದ್ದೇಶಿಸಿ ಮಾತನಾಡುತ್ತಾ ಅವರ ಅಸಹಾಯಕತೆ ಮತ್ತು ನಿರ್ಗತಿಕತೆ ಮತ್ತು ಅವರ ಧೈರ್ಯ ಮತ್ತು ತಾಳ್ಮೆಯ ಬಗ್ಗೆ ಮಾತನಾಡುವ ಕೆಲವು ಕವನಗಳನ್ನು ಹೇಳಿದನು.

أَلَا أَبْلِغْ أَبَا بَكْرٍ رَسُوْلًا — وَفِتْيَانَ الْمَدِيْنَةِ أَجْمَعِيْنَا
فَهَلْ لِيْ فِيْ شَبَابٍ مِنْكَ أَمْسَوْا — جِيَاعًا فِيْ جَوَاثَى مُحْصَرِيْنَا
كَأَنَّ دِمَاءَهُمْ فِيْ كُلِّ فَجٍّ — شُعَاعُ الشَّمْسِ يَغْشَى النَّاظِرِيْنَا
تُحَاصِرُهُمْ بَنُوْ ذُهْلٍ وَعِجْلٍ — وَشَيْبَانُ وَقَيْسٌ ظَالِمِيْنَا
يَقُوْدُهُمُ الْغُرُوْرُ بِغَيْرِ حَقٍّ — لِيَسْتَلِبَ الْعَقَائِلَ وَالْبَنِيْنَا
فَلَمَّا اشْتَدَّ حَصْرُهُمْ وَطَالَتْ — أَكُفُّهُمْ بِمَا فِيْهِ بُلِيْنَا
تَوَكَّلْنَا عَلَى الرَّحْمٰنِ إِنَّا — وَجَدْنَا الْفَضْلَ لِلْمُتَوَكِّلِيْنَا
وَقُلْنَا قَدْ رَضِيْنَا اللهَ رَبًّا — وَبِالْإِسْلَامِ دِيْنًا قَدْ رَضِيْنَا
وَقُلْنَا وَالْأُمُوْرُ لَهَا قَرَارٌ — وَقَدْ سَفِهَتْ حُلُوْمُ بَنِيْ أَبِيْنَا
نُقَاتِلُكُمْ عَلَى الْإِسْلَامِ حَتّٰى — تَكُوْنُوْا أَوْ نَكُوْنَ الذَّاهِبِيْنَا
بِكُلِّ مُهَنَّدٍ عَضْبٍ حُسَامٍ — يَقُدُّ الْبِيْضَ وَالزَّرَدَ الدَّفِيْنَا

ಇದು ಸ್ವಲ್ಪ ದೀರ್ಘವಾದ ಕವಿತೆಯಾಗಿದೆ. ಆದಾಗ್ಯೂ, ಅದರ ಅನುವಾದ ಹೀಗಿದೆ: ಓ ಕೇಳುಗರೇ! ಅಬೂಬಕರ್ ಮತ್ತು ಮದೀನಾದ ಎಲ್ಲಾ ಯುವಕರಿಗೆ ಸಂದೇಶವನ್ನು ಕಳುಹಿಸಿ. ಹಸಿವು ಮತ್ತು ಮುತ್ತಿಗೆಯ ಸ್ಥಿತಿಯಲ್ಲಿ ಜುವಾಸಾದಲ್ಲಿ ರಾತ್ರಿ ಕಳೆದ ಆ ಯುವಕರು, ಅವರ ಬಗ್ಗೆ ನಾನು ನಿಮ್ಮಿಂದ ಸಹಾಯ ಪಡೆಯುತ್ತೇನೆಯೇ? ಮತ್ತು ಪ್ರತಿ ದಾರಿಯಲ್ಲೂ ಅವರ ರಕ್ತವು ಸೂರ್ಯನ ಕಿರಣಗಳಂತೆ ಕಾಣುತ್ತಿದೆ, ಅದು ನೋಡುಗರ ಕಣ್ಣುಗಳನ್ನು ಬೆರಗುಗೊಳಿಸುತ್ತದೆ. ಬನುಝುಹುಲ್, ಇಜ್ಲ್, ಶೈಬಾನ್ ಮತ್ತು ಕೈಸ್ ಗೋತ್ರಗಳು ಹಿಂಸೆ ಮಾಡುವ ಮೂಲಕ ಅವರೆಲ್ಲರನ್ನೂ ಮುತ್ತಿಗೆ ಹಾಕಿದ್ದಾರೆ. ಘರ್ರೂರ್ (ಘೋರೂರ್‌ನ ಮೂಲ ಹೆಸರು ಮುಂಧಿರ್ ಬಿನ್ ನುಮಾನ್ ಬಿನ್ ಮುಂಧಿರ್) ಅವರು ನಮ್ಮ ಹೆಂಡತಿ ಮತ್ತು ಮಕ್ಕಳನ್ನು ಅನ್ಯಾಯವಾಗಿ ತೆಗೆದುಕೊಂಡು ಹೋಗಬಹುದು ಎಂದು ಅವರನ್ನು ಮುನ್ನಡೆಸುತ್ತಿದ್ದಾರೆ. ಅವರ ಮುತ್ತಿಗೆ ತೀವ್ರವಾಗಿ ಮತ್ತು ದೀರ್ಘವಾದಾಗ, ಅವರು ನಮ್ಮನ್ನು ಸೋಲಿಸಿದರು, ಆ ಮೂಲಕ ನಮ್ಮನ್ನು ಪರೀಕ್ಷೆಗೆ ಒಳಪಡಿಸಿದರು. ನಾವು ಕರುಣಾಮಯಿಯಾದ ಅಲ್ಲಾಹನಲ್ಲಿ ನಂಬಿಕೆ ಇಡುತ್ತೇವೆ, ಏಕೆಂದರೆ ನಂಬುವವರಿಗೆ ಆತನ ಕೃಪೆಯನ್ನು ನಾವು ನೋಡಿದ್ದೇವೆ. ಆದ್ದರಿಂದ ನಾವು ಅಲ್ಲಾಹನು ನಮ್ಮ ಪ್ರಭು ಎಂದು ತೃಪ್ತಿ ಹೊಂದಿದ್ದೇವೆ ಮತ್ತು ಇಸ್ಲಾಂ ಧರ್ಮ ನಮ್ಮ ಧರ್ಮ ಎಂದು ನಾವು ಸಂತೃಪ್ತರಾಗಿದ್ದೇವೆ ಮತ್ತು ನಾವು ವಿಷಯಗಳನ್ನು ನಿರ್ವಹಿಸುತ್ತಿದ್ದೇವೆ ಮತ್ತು ನಮ್ಮ ತಂದೆ ಮತ್ತು ಮಕ್ಕಳ ಬುದ್ಧಿಯನ್ನು ಕೊಲ್ಲಲಾಗಿದೆ ಎಂದು ಹೇಳಿದರು. ನೀವು ಸಾಯುವವರೆಗೂ ಅಥವಾ ನಾವು ಸಾಯುವವರೆಗೂ ನಾವು ಇಸ್ಲಾಂ ಧರ್ಮಕ್ಕೆ ಬದ್ಧರಾಗಿ ನಿಮ್ಮೊಂದಿಗೆ ಹೋರಾಡುತ್ತಲೇ ಇರುತ್ತೇವೆ. ಪ್ರತಿಯೊಂದು ತೀಕ್ಷ್ಣವಾದ ಅಂಚನ್ನು ಹೊಂದಿರುವ ಮತ್ತು ದೇಹ ಮತ್ತು ರಕ್ಷಾಕವಚವನ್ನು ಕತ್ತರಿಸುವ ಹರಿತವಾದ ಹಿಂದಿ ಕತ್ತಿಯಿಂದ ಹೋರಾಡುತ್ತೇವೆ.

ಹೀಗೆ ಈ ಸಂದೇಶವನ್ನು "ಅಬ್ದಿ" ಅವರು ಕವಿತೆಯ ರೂಪದಲ್ಲಿ ಕಳುಹಿಸಿದರು.

ಹಝ್ರತ್ ಅಬೂಬಕರ್(ರ)ರಿಗೆ ಅಬ್ದುಲ್‌ಖೈಸ್ ಗೋತ್ರದ ಸ್ಥಿತಿಯ ಬಗ್ಗೆ ಗೊತ್ತಾದಾಗ ಬಹಳ ದುಃಖವಾಯಿತು. ಅವರು ಹಝ್ರತ್ ಅಲಾ ಬಿನ್ ಹಝ್ರಮಿಯನ್ನು ಕರೆದು ಸೇನೆಯ ನೇತೃತ್ವವನ್ನು ಅವರಿಗೆ ಒಪ್ಪಿಸಿದರು. 2 ಸಾವಿರ ಮುಹಾಜಿರರ ಮತ್ತು ಅನ್ಸಾರರ ಜೊತೆಗೆ ಬಹ್ರೈನಿನ ಕಡೆಗೆ ಅಬ್ದುಲ್‌ಖೈಸ್ ಗೋತ್ರದ ಸಹಾಯಕ್ಕಾಗಿ ಹೊರಡಲು ಆದೇಶ ನೀಡಿದರು ಮತ್ತು ಹೀಗೆ ನಿರ್ದೇಶನ ನೀಡಿದರು: ಅರೇಬಿಯದ ಗೋತ್ರಗಳಲ್ಲಿ ಯಾವ ಗೋತ್ರದ ಬಳಿಯಿಂದ ಸಾಗಿ ಹೋಗುವಾಗಲೂ ಅವರನ್ನು ಬನೂ ಬಕರ್ ಬಿನ್ ವಾಯಿಲ್‌ರ ವಿರುದ್ಧ ಯುದ್ಧ ಮಾಡಲು ನೀನು ಹುರಿದುಂಬಿಸಬೇಕು. ಏಕೆಂದರೆ ಬನೂ ಬಕರ್ ಬಿನ್ ವಾಯಿಲ್‌ನ ಗೋತ್ರದವರು ಇರಾನಿನ ಅರಸನು ನೇಮಿಸಿದ ಮುಂಧಿರ್ ಬಿನ್ ನೂಮಾನ್‌ರ ಜೊತೆಗೆ ಬಂದಿರುವರು. ಅರಸನು ಅವನ ತಲೆಯ ಮೇಲೆ ಕಿರೀಟವನ್ನು ಇರಿಸಿದ್ದಾನೆ ಮತ್ತು ಅಲ್ಲಾಹನ ಪ್ರಕಾಶವನ್ನು ನಂದಿಸಲು ಉದ್ದೇಶಿಸಿದ್ದಾನೆ ಹಾಗೂ ಅಲ್ಲಾಹನ ಮಿತ್ರರನ್ನು ವಧಿಸಿದ್ದಾನೆ. ಆದ್ದರಿಂದ ನೀವು **ಲಾ ಹೌಲ ವಲಾ ಖುವ್ವತ ಇಲ್ಲಾ ಬಿಲ್ಲಾಹ್** ಓದುತ್ತಾ ಹೊರಡಿರಿ. (ಕಿತಾಬುರ್‍ರದ ಲಿಲ್‌ವಾಖಿದಿ, ಪುಟ–152–154, ದರುಲ್ ಗರಬ್ ಅಲ್‌ಇಸ್ಲಾಮಿ 1990) (ಸಹೀಹ್ ಬುಖಾರಿ, ಕಿತಾಬುಲ್ ಜುಮುಅ, ಹದೀಸ್–892) (ತಾರೀಖ್ ಅತ್ತಬರಿ, ಸಂಪುಟ–2, ಪುಟ–286, ದಾರುಲ್ ಕುತುಬ್ ಇಲ್ಮಿಯ ಬೈರೂತ್)

ಹಝ್ರತ್ ಅಲಾ ಬಿನ್ ಹಝ್ರಮಿ(ರ) ಹಝ್ರತ್ ಅಬೂಬಕರ್(ರ)ರ ಆದೇಶವನ್ನು ಪಾಲಿಸುತಾ ಹೊರಟರು. ಅವರು ಯಮಾಮದ ಸಮೀಪಕ್ಕೆ ತಲುಪಿದಾಗ ಹಝ್ರತ್ ಸಮಾಮ ಬಿನ್ ಉಸಾಲ್ ಬಿನ್ ಹನೀಫರ ಒಂದು ಸಂಘ ಅವರನ್ನು ಭೇಟಿಯಾದರು. ಅವರಲ್ಲದೇ ಖೈಸ್ ಬಿನ್ ಆಸಿಂ ಕೂಡ ತನ್ನ ಬನೂತಮೀಮ್ ಗೋತ್ರದೊಂದಿಗೆ ಹಝ್ರತ್ ಅಲಾ ಬಿನ್ ಹಝ್ರಮಿಯ ಸೈನ್ಯದಲ್ಲಿ ಬಂದು ಸೇರಿದರು. ಇದಕ್ಕೆ ಮೊದಲು ಖೈಸ್ ಬಿನ್ ಆಸಿಂ ಝಕಾತ್ ನಿರಾಕರಿಸುವವರಲ್ಲಿ ಸೇರಿದ್ದರು. ಅವರು ಗೋತ್ರದ ಝಕಾತನ್ನು ಮದೀನಕ್ಕೆ ಕಳುಹಿಸುವುದನ್ನು ಸಂಪೂರ್ಣವಾಗಿ ನಿಲ್ಲಿಸಿದ್ದರು. ಒಟ್ಟುಗೂಡಿಸಲಾದ ಝಕಾತಿನ ಸಂಪತ್ತನ್ನು ಜನರಿಗೆ ಮರಳಿ ಕೊಟ್ಟಿದ್ದರು. ಆದರೆ ಹಝ್ರತ್ ಖಾಲಿದ್ ಬಿನ್ ವಲೀದ್(ರ) ಯಮಾಮದಲ್ಲಿ ಬನೂ ಹನೀಫ ಗೋತ್ರವನ್ನು ಪರಾಜಿತಗೊಳಿಸಿದಾಗ, ಮುಸ್ಲಿಮರನ್ನು ಅನುಸರಿಸಿ ಇರುವುದೇ ಉತ್ತಮವೆಂದು ಭಾವಿಸಿಕೊಂಡು ಆಸಿಮ್ ಮುಸ್ಲಿಮರ ಜೊತೆಗೆ ಆದರು ಮತ್ತು ತನ್ನ ಬನೂ ತಮೀಮ್ ಗೋತ್ರದಿಂದ ಝಕಾತನ್ನು ಒಟ್ಟುಗೂಡಿಸಿದರು ಹಾಗೂ ಹಝ್ರತ್ ಅಲಾ ಬಿನ್ ಹಝ್ರಮಿಯ ಸೇನೆಯಲ್ಲಿ ಸೇರಿದರು. (ಹಝ್ರತ್ ಅಬೂಬಕರ್ ಸಿದ್ದೀಖ್(ರ) ಮುಹಮ್ಮದ್ ಹುಸೈನ್ ಹೈಕಲ್, ಪುಟ–239, ಇಸ್ಲಾಮಮಿ ಕುತುಬ್ ಖಾನ ಲಾಹೋರ್)

ಹಝ್ರತ್ ಅಲಾ ತನ್ನ ಸೈನ್ಯವನ್ನು ದಹ್‌ನದ ಮಾರ್ಗವಾಗಿ ಬಹ್ರೈನಿನ ಕಡೆಗೆ ಕೊಂಡುಹೋದರು. ಮುಸ್ಲಿಮರು ಅದರ ಮಧ್ಯಭಾಗದಲ್ಲಿ ತಲುಪಿದಾಗ ಹಝ್ರತ್ ಅಲಾ ಅಲ್ಲಿ ತಂಗಲು ನಮಗೆ ಆದೇಶ ನೀಡಿದರು. ವರದಿಗಾರ ಹೇಳುತ್ತಾರೆ: ರಾತ್ರಿಯ ಅಂಧಕಾರದಲ್ಲಿ ಒಂಟೆ ನಿಯಂತ್ರಣ

ಬಿಟ್ಟು ಓಡಿ ಹೋಯಿತು. ಯಾರ ಬಳಿಯಲ್ಲೂ ಒಂಟೆಯೋ, ಆಹಾರವೋ, ಪಾತ್ರೆಗಳೋ, ಡೇರೆಗಳೋ ಇಲ್ಲವಾಯಿತು. ಎಲ್ಲವೂ ಒಂಟೆಯೊಂದಿಗೆ ಕಾಣೆಯಾದುವು. ಎಲ್ಲವೂ ಒಂಟೆಗಳ ಮೇಲಿದ್ದುವು. ಒಂಟೆಗಳು ಓಡಿಹೋದಾಗ ಜನರ ಬಳಿ ಏನೂ ಇಲ್ಲವಾಯಿತು. ಈ ಘಟನೆಯು ಜನರು ಒಂಟೆಗಳ ಮೇಲಿಂದ ಕೆಳಗಿಳಿದು ಒಂಟೆಗಳ ಮೇಲಿದ್ದ ಸಾಮಾನುಗಳನ್ನು ಇಳಿಸುವುದಕ್ಕೆ ಮುಂಚಿತವಾಗಿ ನಡೆದಿತ್ತು. ಹೀಗೆ ಮುಸ್ಲಿಮರು ದುಃಖಿತರಾದರು. ತಮ್ಮ ಜೀವಿತದ ಬಗ್ಗೆ ನಿರಾಶೆ ಹೊಂದಿ ಪರಸ್ಪರ ಉಯಿಲು ಹೇಳಲು ಶುರುಮಾಡಿದರು. ಅಷ್ಟರಲ್ಲಿ ಹಝ್ರತ್ ಅಲಾ(ರ) ಘೋಷಣೆ ಕೂಗುವವನ ಮೂಲಕ ಎಲ್ಲರನ್ನು ಒಟ್ಟುಸೇರಲು ಆಜ್ಞಾಪಿಸಿದರು. ಎಲ್ಲರೂ ಅವರ ಸಮೀಪ ಒಟ್ಟುಗೂಡಿದರು. ಹಝ್ರತ್ ಅಲಾ(ರ) ಹೇಳಿದರು: ನಿಮ್ಮಲ್ಲಿ ನಾನು ಕಾಣುತ್ತಿರುವ ದುಃಖ ಮತ್ತು ಕಳವಳಕ್ಕೆ ಕಾರಣವೇನು? ನೀವು ಇಷ್ಟು ಹೆಚ್ಚು ಏಕೆ ದುಃಖಿತರಾಗಿರುವಿರಿ. ಜನರು ಹೇಳಿದರು: ನಮ್ಮನ್ನು ಆಕ್ಷೇಪಿಸುವಂತಹ ಯಾವುದೇ ಕಾರ್ಯವನ್ನು ನಾವು ಮಾಡಿಲ್ಲ. ನಮ್ಮ ಒಂಟೆಗಳು ಓಡಿಹೋಗಿವೆ. ನಮ್ಮ ಸ್ಥಿತಿ ಏನೆಂದರೆ, ಇದೇ ಸ್ಥಿತಿಯಲ್ಲಿ ಬೆಳಿಗ್ಗೆಯಾದರೆ, ಸೂರ್ಯೋದಯಕ್ಕೆ ಮುಂಚಿತವಾಗಿ ನಾವೆಲ್ಲರೂ ನಾಶವಾಗುವೆವು. ಹಝ್ರತ್ ಅಲಾ(ರ) ಹೇಳಿದರು: ಎಲೈ ಜನರೇ ಹೆದರಬೇಡಿರಿ. ನೀವು ಮುಸ್ಲಿಮರಲ್ಲವೇ? ನೀವು ಅಲ್ಲಾಹನ ಮಾರ್ಗದಲ್ಲಿ ಯುದ್ಧ ಮಾಡಲು ಬಂದಿರುವಿರಿ ಅಲ್ಲವೇ? ನೀವು ಅಲ್ಲಾಹನ ಸಹಾಯಕರಲ್ಲವೇ? ನಿಮಗೆ ಸುವಾರ್ತೆ. ಏಕೆಂದರೆ ಅಲ್ಲಾಹನು ಅಂತಹ ಜನರನ್ನು ಈ ಸ್ಥಿತಿಯಲ್ಲಿ ಬಿಟ್ಟು ಹೋಗಲಾರನು.

ಫಜ್ರಿನ ಸಮಯವಾದಾಗ, ಅಧ್ಹಾನ್ ಕೊಡಲಾಯಿತು. ಹಝ್ರತ್ ಅಲಾ(ರ) ನಮಾಝಿಗೆ ಇಮಾಮತ್ ವಹಿಸಿದರು. ನೀರು ಇಲ್ಲದ ಕಾರಣದಿಂದ ಕೆಲವರು ತಯಮ್ಮುಮ್ ಮಾಡಿ ನಮಾಝ್ ನಿರ್ವಹಿಸಿದರು. ಕೆಲವರ ಹಿಂದಿನ ವುಝೂ ಬಾಕಿಯಿತ್ತು. ನಮಾಝ್ ಮುಗಿಸಿದ ನಂತರ ಹಝ್ರತ್ ಅಲಾ(ರ) ತನ್ನ ಎರಡೂ ಮೊಣಕಾಲುಗಳನ್ನು ಮಡಚಿ ದುಆಗಾಗಿ ಕುಳಿತುಕೊಂಡರು. ಎಲ್ಲರೂ ಇದೇ ರೀತಿಯಲ್ಲಿ ಕಾಲು ಮಡಚಿ ದುಆ ಮಾಡಲು ಕುಳಿತುಕೊಂಡರು. ಅಳುತ್ತಾ ವಿನಮ್ರತೆಯಿಂದ ಕೈಯೆತ್ತಿ ದುಆದಲ್ಲಿ ಅವರು ನಿರತರಾದರು. ಜನರು ಕೂಡ ಹಾಗೆಯೇ ಮಾಡಿದರು. ಸೂರ್ಯೋದಯವಾಯಿತು. ಸೂರ್ಯನ ಕಿರಣಗಳು ಪೂರ್ವದ ದಿಗಂತದಲ್ಲಿ ಪ್ರತ್ಯಕ್ಷಗೊಂಡಾಗ ಹಝ್ರತ್ ಅಲಾ(ರ) ಜನರ ಪಂಕ್ತಿಯ ಕಡೆಗೆ ಮುಖ ಮಾಡಿ ಕುಳಿತರು. ಆ ಹೊಳಪು ಏನೆಂದು ಯಾರಾದರೂ ಹೋಗಿ ನೋಡುತ್ತೀರಾ ಎಂದು ಕೇಳಿದರು. ಒಬ್ಬ ವ್ಯಕ್ತಿ ಆ ಕೆಲಸಕ್ಕಾಗಿ ಹೋದರು. ಆ ಹೊಳಪು ಕೇವಲ ಮರೀಚಿಕೆಯಾಗಿದೆ ಎಂದು ಅವನು ಮರಳಿ ಬಂದು ಹೇಳಿದನು. ಸೂರ್ಯನ ಪ್ರಕಾಶ ಪ್ರತಿಫಲಿಸುತ್ತಿದ್ದ ಸ್ಥಳದಲ್ಲಿ ಒಂದು ಹೊಳಪು ಇತ್ತು. ಅಲ್ಲಿ ನೀರು ಇರಲಿಲ್ಲ. ಬದಲಾಗಿ ಮರೀಚಿಕೆಯಾಗಿತ್ತು. ಹಝ್ರತ್ ಅಲಾ(ರ) ಪುನಃ ದುಆದಲ್ಲಿ ನಿರತರಾದರು. ಪುನಃ ಆ ಹೊಳಪು ಕಂಡುಬಂತು. ಅದು ಕೂಡ ಮರೀಚಿಕೆಯಾಗಿತ್ತು ಎಂದು ಗೊತ್ತಾಯಿತು. ಮೂರನೇ ಬಾರಿ ಪುನಃ ಹೊಳಪು ಕಂಡುಬಂತು. ಈ ಬಾರಿ ಅದು ನೀರಾಗಿದೆ ಎಂದು ಸುದ್ದಿ ತಂದವನು ಹೇಳಿದನು. ಹಝ್ರತ್ ಅಲಾ(ರ) ಎದ್ದುನಿಂತರು ಮತ್ತು ಎಲ್ಲರೂ ಎದ್ದುನಿಂತರು. ಎಲ್ಲರೂ ನೀರಿನ ಬಳಿಗೆ ತಲುಪಿದರು. ಎಲ್ಲರೂ ನೀರು ಕುಡಿದರು. ಸ್ನಾನ ಮಾಡಿದರು. ಅಲ್ಲಿ ಯಾವುದೋ ಚಿಲುಮೆ ಹೊರಹೊಮ್ಮಿತ್ತು. ಬೆಳಿಗ್ಗೆಯಾಗುವುದರೊಳಗೆ ಜನರ ಒಂಟೆಗಳು ಎಲ್ಲ ಕಡೆಯಿಂದಲೂ ಓಡುತ್ತಾ ಜನರ ಬಳಿಗೆ ಬಂದುವು. ಎಲ್ಲರೂ ತಮ್ಮ ತಮ್ಮ ಒಂಟೆಗಳನ್ನು ಹಿಡಿದರು. ಅವರ ಸಾಮಾನುಗಳಲ್ಲಿ ಯಾರ ಸಾಮಾನುಗಳು ಕೂಡ ನಷ್ಟವಾಗಿರಲಿಲ್ಲ.

ದುಆದ ದೃಷ್ಟಾಂತ ಮತ್ತು ಪವಾಡ ಅಲ್ಲಿ ನಡೆಯಿತು. ಅಲ್ಲಾಹನು ನೀರಿನ ಏರ್ಪಾಡು ಕೂಡ ಮಾಡಿದನು ಮತ್ತು ಅವರ ಒಂಟೆಗಳು ಕೂಡ ಮರಳಿ ಬಂದುವು. ಜನರು ಅವುಗಳಿಗೂ ನೀರು ಕುಡಿಸಿದರು. ಮತ್ತೊಮ್ಮೆ ಹೊಟ್ಟೆತುಂಬ ನೀರು ಕುಡಿದರು. ಒಂಟೆಗಳಿಗೂ ಕುಡಿಸಿದರು. ತಮಗಾಗಿ ನೀರನ್ನು ಪಡೆದುಕೊಂಡರು. ಅನಂತರ ಚೆನ್ನಾಗಿ ಆರಾಮ ಮಾಡಿದರು.

ಮಂಜಾಬ್ ಬಿನ್ ರಾಶಿದ್ ಹೇಳುತ್ತಾರೆ: ಆ ಸಮಯದಲ್ಲಿ ಹಝ್ರತ್ ಅಬೂಹುರೈರ ನನ್ನ ಜೊತೆಗೆ ಇದ್ದರು. ನಾವು ಆ ಪ್ರದೇಶದಿಂದ ಸ್ವಲ್ಪ ದೂರ ಹೋದಾಗ, ಆ ನೀರಿನ ಪ್ರದೇಶ ಎಲ್ಲಿಯೆಂದು ನಿಮಗೆ ಗೊತ್ತಿದೆಯೇ ಎಂದು ಅವರು ನನ್ನೊಡನೆ ಕೇಳಿದರು. ನಾನು ಹೇಳಿದೆ: ಅರೇಬಿಯದ ಇತರ ಎಲ್ಲರಿಗಿಂತ ಹೆಚ್ಚಾಗಿ ನಾನು ಈ ಪ್ರದೇಶದ ಮೂಲೆ ಮೂಲೆಯನ್ನು ಬಲ್ಲೆನು. ಹಝ್ರತ್ ಅಬೂಹುರೈರ(ರ) ಹೇಳಿದರು: ಹಾಗಾದರೆ, ನನ್ನನ್ನು ಆ ಪ್ರದೇಶಕ್ಕೆ ಕೊಂಡುಹೋಗಿರಿ. ನಾನು ಒಂಟೆಯನ್ನು ತಿರುಗಿಸಿದೆ ಮತ್ತು ನೀರಿನ ಅದೇ ಸ್ಥಳಕ್ಕೆ ಅವರನ್ನು ಕೊಂಡುಹೋದೆನು. ಅಲ್ಲಿ ಹೋಗಿ ನೋಡಿದಾಗ ಅಲ್ಲಿ ನೀರೋ ನೀರಿನ ಯಾವುದೇ ಗುರುತೋ ಇರಲಿಲ್ಲ. ಆಗ ನಾನು ಹಝ್ರತ್ ಅಬೂಹುರೈರರೊಡನೆ(ರ) ಹೇಳಿದೆ: ನನಗೆ ಇಲ್ಲಿ ಯಾವುದೇ ಹೊಳೆ ಕಾಣುತ್ತಿಲ್ಲ. ಆದರೂ ನಾವು ನೀರು ಪಡೆದುಕೊಂಡ ಸ್ಥಳ ಇದೇ ಆಗಿದೆ ಎಂದು ನಾನು ಖಂಡಿತ ಹೇಳುತ್ತೇನೆ. ಆದರೆ ಇಂದಿಗಿಂತ ಮುಂಚೆ ನಾನು ಈ ಸ್ಥಳದಲ್ಲಿ ಎಂದಿಗೂ ಸ್ವಚ್ಛ ಮತ್ತು ಸಿಹಿನೀರನ್ನು ಕಂಡಿಲ್ಲ. ನಾವು ಮಾತನಾಡುತ್ತಿರುವಾಗಲೂ ನಮ್ಮ ಪಾತ್ರೆಗಳು ಅದರ ನೀರಿನಿಂದ ತುಂಬಿದ್ದುವು. ಹಝ್ರತ್ ಅಬೂಹುರೈರ(ರ) ಹೇಳಿದರು: ಹೇ ಅಬೂ ಸಹಮ್, ಅಲ್ಲಾಹನಾಣೆ, ಇದೇ ಆ ಸ್ಥಳವಾಗಿದೆ. ಅದಕ್ಕಾಗಿಯೇ ನಾನು ಇಲ್ಲಿಗೆ ಬಂದಿದ್ದೇನೆ ಮತ್ತು ನಿಮ್ಮನ್ನು ಕರೆದುಕೊಂಡು ಬಂದಿದ್ದೇನೆ. ನಾನು ನನ್ನ ಪಾತ್ರೆಯಲ್ಲಿ ನೀರನ್ನು ತುಂಬಿಸಿದ್ದೆ ಮತ್ತು ಅದನ್ನು ನಾನು ಈ ಹೊಳೆಯ ಬದಿಯಲ್ಲಿ ಇರಿಸಿದ್ದೆ. ಇದು ಅಲ್ಲಾಹನ ದೃಷ್ಟಾಂತ ಮತ್ತು ಅಲ್ಲಾಹನ ಕಡೆಯಿಂದ ಇಳಿದ ಕಾರುಣ್ಯವಾಗಿದೆ ಎಂದಾದರೆ ನಾನು ಅದನ್ನು ಪತ್ತೆ ಹಚ್ಚುವೆನು. ಇದು ಕೇವಲ ಮಳೆಯ ನೀರಾಗಿದ್ದರೆ ಅದನ್ನು ಕೂಡ ಪತ್ತೆ ಹಚ್ಚುವೆನು. ಅದು ಸತ್ಯವಾಗಿಯೂ ಅಲ್ಲಾಹನು ತೋರಿಸಿದ ದೃಷ್ಟಾಂತವಾಗಿತ್ತು ಎಂದು ನೋಡಿದಾಗ ಗೊತ್ತಾಯಿತು. ಅದನ್ನು ಅಲ್ಲಾಹನು ನಮ್ಮನ್ನು ರಕ್ಷಿಸಲು ಪ್ರಕಟಿಸಿದ್ದನು. ಹೀಗೆ ಹಝ್ರತ್ ಅಬೂಹುರೈರ(ರ) ಅಲ್ಲಾಹನ ಸ್ತುತಿಗಾನ ಮಾಡಿದರು. ಅನಂತರ ಅಲ್ಲಿಂದ ತಿರುಗಿ ನಾವು ನಮ್ಮ ಮಾರ್ಗದಲ್ಲಿ ನಡೆದುವು ಹಾಗೂ ಹಜರಿಗೆ ಬಂದು ತಂಗಿದೆವು. (ತಾರೀಖ್ ಅತ್ತಬರಿ, ಸಂಪುಟ-2, ಪುಟ-286-288, ದಾರುಲ್ ಕುತುಬ್ ಅಲ್ ಇಲ್ಮಿಯಾ ಲೆಬನಾನ್ 2012) (ಫರ್ಹಂಗ್ ಸೀರತ್ ಪುಟ-123, ಝುವಾರ ಅಕಾಡಮಿ ಕರಾಚಿ)

ಈ ಘಟನೆಯ ನಂತರ ಹಝ್ರತ್ ಅಬೂಬಕರ್(ರ)ರಿಗೆ ಇದರ ಮಾಹಿತಿ ಲಭಿಸಿದಾಗ ಹಝ್ರತ್ ಅಲಾ(ರ) ಹಝ್ರತ್ ಅಬೂಬಕರ್(ರ)ರಿಗೆ ಒಂದು ಪತ್ರವನ್ನು ಬರೆದಿದ್ದರು. ಅದು ಹೀಗೆ ಆಗಿತ್ತು: ಅಲ್ಲಾಹನು ನಮಗಾಗಿ ದಹ್ನ ಕಣಿವೆಯಲ್ಲಿ ನೀರಿನ ಒಂದು ಚಿಲುಮೆಯನ್ನು ಹೊರಡಿಸಿದ್ದನು. ಅಲ್ಲಿ ಚಿಲುಮೆಯ ಯಾವುದೇ ಕುರುಹುಗಳು ಇರಲಿಲ್ಲ. ಕಠಿಣವಾದ ಕಷ್ಟತೆ ಮತ್ತು ಕಳವಳದ ನಂತರ ನಮಗಾಗಿ ಅಲ್ಲಾಹನು ಒಂದು ದೃಷ್ಟಾಂತವನ್ನು ತೋರಿಸಿದನು. ಅದು ನಮಗೆಲ್ಲರಿಗೂ ಒಂದು ಪಾಠವಾಗಿದೆ. ನಾವು ಅವನು ಸ್ತುತಿಗಾನ ಮಾಡಲಿಕ್ಕೆ ಹೀಗೆ ಮಾಡಿದ್ದಾನೆ. ಆದ್ದರಿಂದ ಅಲ್ಲಾಹನಲ್ಲಿ ನಮಗಾಗಿ ದುಆ ಮಾಡಿರಿ. ಧರ್ಮದ ಸಹಾಯಕರಿಗಾಗಿ ನೆರವನ್ನು ಬೇಡಿರಿ. ಹಝ್ರತ್ ಅಬೂಬಕರ್(ರ) ಅಲ್ಲಾಹನನ್ನು ಸ್ತುತಿಸಿದರು ಮತ್ತು ಅವನೊಡನೆ ದುಆ ಮಾಡಿದರು.

ಹಝ್ರತ್ ಅಬೂಬಕರ್(ರ) ಹೇಳಿದರು: ದಹ್ನ ಕಣಿವೆಯ ಕುರಿತು ಅರೇಬಿಯರು ಯಾವಾಗಲೂ ಹೇಳುತ್ತಿರುವುದೇನೆಂದರೆ, ಈ ಕಣಿವೆಯಲ್ಲಿ ನೀರಿಗಾಗಿ ಅಗೆಯಬೇಕೇ ಬೇಡವೇ ಎಂದು ಹಝ್ರತ್ ಲುಖ್ಮಾನ್‌ರೊಡನೆ ಕೇಳಲಾದಾಗ, ಅವರು ಅಗೆಯುವುದನ್ನು ನಿರಾಕರಿಸಿದ್ದರು. ಇಲ್ಲಿ ಅಗೆದರೆ ಎಂದಿಗೂ ನೀರು ಸಿಗಲಾರದು ಎಂದು ಅವರು ಹೇಳಿದ್ದರು. ಆದ್ದರಿಂದ ಈ ಕಣಿವೆಯಿಂದ ಈಗ ಚಿಲುಮೆ ಹೊರಹೊಮ್ಮಿದ್ದು ಅಲ್ಲಾಹನ ಶಕ್ತಿಯ ಒಂದು ಬಹಳ ದೊಡ್ಡ ಗುರುತಾಗಿದೆ. ಇಂತಹ ಸ್ಥಿತಿ ನಾವು ಎಂದಿಗೂ ಹಿಂದಿನ ಸಮುದಾಯಗಳ ಬಗ್ಗೆ ಆಲಿಸಿಲ್ಲ. (ತಾರೀಖ್ ಅತ್ತಬರಿ, ಸಂಪುಟ-2, ಪುಟ-290, ದಾರುಲ್ ಕುತುಬ್ ಇಲ್‌ಮಿಯ ಲೆಬನಾನ್ 2012)

ಅಲ್ಲಾಹನಿಗಾಗಿ ಪ್ರಧಾನ ಕಾರ್ಯಾಚರಣೆಗಳಿಗಾಗಿ ಹೋಗುತ್ತಿದ್ದ ಸಹಾಬಿಯರ ಜೊತೆಗೆ ಇಂತಹ ದೃಷ್ಟಾಂತಗಳು ಕೂಡ ಆಗುತ್ತಿದ್ದುವು. ಉಳಿದ ಭಾಗ ಮುಂದಿನ ಬಾರಿ ಪ್ರಸ್ತಾಪಿಸಲಾಗುವುದು.

********

**ಪವಿತ್ರ ಖುರ್‌ಆನ್**

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ಪವಿತ್ರ ಖುರ್‌ಆನ್ ವಜ್ರವೈಢೂರ್ಯಗಳ ಒಂದು ನಿಧಿಯಾಗಿದೆ.ಆದರೆ ಜನರು ಅದನ್ನು ಅರಿತಿಲ್ಲ. ***(ಮಲ್‌ಫೂಝಾತ್ ಸಂಪುಟ-2, ಪುಟ-344)***

ಪವಿತ್ರ ಖುರ್‌ಆನಿನ ಮಹಿಮೆ ಎಷ್ಟು ಉನ್ನತವಾಗಿದೆಯೆಂದರೆ ಅದು ಎಲ್ಲ ಮಹಿಮೆಗಳಿಗಿಂತ ಶ್ರೇಷ್ಠವಾಗಿದೆ. ಅದು **"ಹಕಮ್"** ಆಗಿದೆ ಎಂದರೆ ಅಂತಿಮವಾಗಿ ತೀರ್ಮಾನ ಮಾಡುವುದು; ಅದು **"ಮುಹೈಮಿನ್"** ಎಂದರೆ ಅದು ಎಲ್ಲ ಮಾರ್ಗದರ್ಶನಗಳ ಸಂಗ್ರಹವಾಗಿದೆ. ಅದು ಎಲ್ಲ ಸಾಕ್ಷ್ಯಾಧಾರಗಳನ್ನು ತನ್ನಲ್ಲಿ ಜಮಾಯಿಸಿದೆ ಮತ್ತು ಶತ್ರು ಸಮೂಹವನ್ನು ಚೆಲ್ಲಾಪಿಲ್ಲಿಯಾಗಿ ಮಾಡಿದೆ. ಅದರಲ್ಲಿ ಎಲ್ಲ ಸಂಗತಿಗಳ ವಿವರಣೆಗಳಿವೆ. ಅದರಲ್ಲಿ ನಡೆಯಲಿರುವ ಮತ್ತು ನಡೆದ ಸಂಭವಗಳ ಸಮಾಚಾರಗಳಿವೆ. ಅಸತ್ಯವು ಅದರ ಹಿಂದಿನಿಂದಾಗಲೀ ಮುಂದಿನಿಂದಾಗಲೀ ನುಸುಳಲಾರದು. ಅದು ಸರ್ವ ಶಕ್ತನಾದ ದೇವನ ಪ್ರಕಾಶವಾಗಿದೆ. **(ಖುತ್‌ಬ ಇಲ್‌ಹಾಮಿಯಾ; ರೂಹಾನೀ ಖಝಾಇನ್ ಸಂಪುಟ-16, ಪುಟ-103)**

*(ಪುಟ ಸಂಖ್ಯೆ 02ರ ಉಳಿದ ಭಾಗ)*

ವಿಧಾನವನ್ನು ಮುಂದಿಟ್ಟಿದ್ದೆ. ಅದನ್ನು ಹೀಗೆ ತಳ್ಳಿ ಹಾಕಲಾಯಿತು.

**ಪೀರ್ ಸಾಹಿಬರಲ್ಲಿ ತಫ್ಸೀರ್ ಬರೆಯುವ ಸಾಮರ್ಥ್ಯವಿಲ್ಲ. ಅಲ್ಲಾಹನ ನೆರವು ಸಹ ಅವರ ಜೊತೆಯಲ್ಲಿ ಇಲ್ಲ. ಲಾಹೋರಿನಲ್ಲಿ ಪೀರ್ ಸಾಹಿಬರ ಚೇಲಾಗಳ ಸುಳ್ಳು ಪ್ರಚಾರ ಮತ್ತು ಅತ್ಯಂತ ಕೀಳುಮಟ್ಟದ ನಿಕೃಷ್ಟ ಮುಖವು ಬಯಲಾಯಿತು.**

ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ:

ಅಂತೂ ಈಗ ನನಗೆ ತಿಳಿದಿದೆ. ಲಾಹೋರಿನ ಬೀದಿ ಬೀದಿಯಲ್ಲಿ ಪೀರ್ ಸಾಹಿಬರ ಚೇಲಾಗಳು ಮತ್ತು ಅವರ ಸಹವೃತ್ತಿಗಳು ಪ್ರಚಾರ ಮಾಡುತ್ತಿದ್ದಾರೆ, ಪೀರ್ ಸಾಹೇಬರಂತೂ ಅವರ ಎದುರಿನಲ್ಲಿ ತಫ್ಸೀರ್ ಬರೆಯಲು ಲಾಹೋರ್ ತಲುಪಿದ್ದರು. ಆದರೆ ಮಿರ್ಝಾ ಓಡಿ ಹೋದನು ಮತ್ತು ಬರಲಿಲ್ಲ. ಆದುದರಿಂದ ಎಲ್ಲಾ ಸಾಮಾನ್ಯ ಜನರಿಗೆ ತಿಳಿಸಲಾಗುತ್ತದೆ. ಇವೆಲ್ಲಾ ಮಾತುಗಳು ವಾಸ್ತವಕ್ಕೆ ದೂರವಾಗಿವೆ. ಅಲ್ಲದೇ ಪೀರ್ ಸಾಹಿಬ್ ಸ್ವಯಂ ಓಡಿ ಹೋಗಿದ್ದಾರೆ ಮತ್ತು ನನ್ನ ಎದುರಿನಲ್ಲಿ ತಫ್ಸೀರ್ ಬರೆಯಲು ಒಪ್ಪಲಿಲ್ಲ. ಅವರಲ್ಲಿ ಆ ಸಾಮರ್ಥ್ಯವು ಇಲ್ಲ. ಅಲ್ಲಾಹನ ಸಹಾಯವು ಅವರ ಜೊತೆಯಲ್ಲಿಲ್ಲ. ನಾನು ಯಾವ ಕಾರಣಕ್ಕೂ ಲಾಹೋರ್‌ಗೆ ಬರುತ್ತಿದ್ದೆ. ಆದೆ ಕೇಳಿಬಂತು. ಪೇಶಾವರಿನ ಹೆಚ್ಚಿನ ಅಜ್ಞಾನಿ ದುಷ್ಕರ್ಮಿಗಳು ಪೀರ್ ಸಾಹಿಬರ ಜೊತೆಯಲ್ಲಿದ್ದಾರೆ. ಅಂತೆಯೇ ಲಾಹೋರಿನ ಹಲವು ನಿಕೃಷ್ಟರು ಮತ್ತು ಕೀಳುಮಟ್ಟದ ಜನರು ಬೀದಿ ಬೀದಿಯಲ್ಲಿ ಬೈಗುಳನ್ನು ಹಾಕುತ್ತ ತಿರುಗಾಡುತ್ತಿದ್ದಾರೆ ಮತ್ತು ವಿರೋಧಿ ಮೌಲ್ವಿಗಳು ತುಂಬಾ ಉತ್ಸಾಹದಿಂದ ಉತ್ತೇಜಕ ಭಾಷಣಗಳನ್ನು ಮಾಡುತ್ತಿದ್ದಾರೆ. ಈ ವ್ಯಕ್ತಿ ಹತ್ಯೆಗೆ ಅರ್ಹನು. ಅಂತಹ ಸ್ಥಿತಿಯಲ್ಲಿ ಲಾಹೋರಿನಲ್ಲಿ ಹೋಗುವುದು, ಯಾವ ಸುರಕ್ಷತೆಯ ವ್ಯವಸ್ಥೆಯೂ ಇಲ್ಲ. ಇಂತಹ ಸ್ಥಿತಿಯಲ್ಲಿ ಹೇಗೆ ಹೋಗಲು ಸಾಧ್ಯ. ಅವರ ಉತ್ತೇಜನ ಎಷ್ಟೊಂದು ಉಲ್ಬಣಿಸಿದ್ದವೆಂದರೆ ಕೆಲ ಪತ್ರಗಳು ಅವು ಬೈಗಳಿಂದ ತುಂಬಿ ಹೋಗಿದ್ದವು. ನನಗೆ ತಲುಪಿದ್ದವು. ಅವು ನನ್ನ ಬಳಿ ಸುರಕ್ಷಿತವಾಗಿ ಇಡಲಾಗಿದೆ. ಅವರು ಬಳಸಿದಂತಹ ಅವಾಚ್ಯ ಶಬ್ಧಗಳು ನನಗೆ ಅನಿಸುವುದಿಲ್ಲ. ಅಂತಹ ಹೊಲಸು ಭಾಷೆ ಅಬುಜಹಲ್ ಸಹ ಹಝುರತ್ ರಸೂಲುಲ್ಲಾಹ್(ಸ) ರವರ ವಿರುದ್ಧ ಅಥವಾ ಫಿರ್‌ಔನ್ ಹಝ್ರತ್ ಮೂಸಾ(ಅ) ರವರ ವಿರುದ್ಧ ಬಳಸಿರಬಹುದೆಂದು.

**ಪೀರ್ ಸಾಹೇಬರ ಹೃದಯ ಶುದ್ಧವಾಗಿದ್ದರೆ, ಅವರು ನಿಜವಾಗಿಯೂ ನನ್ನ ಎದುರು ಸ್ಪರ್ಧೆಗೆ ತಯಾರಾಗಿದ್ದಾರೆ. ನಾನು ಅಲ್ಲಾಹನ ಮೇಲೆ ಆಣೆ ಮಾಡಿ ಹೇಳುತ್ತೇನೆ ನಾನು ಯಾವ ತಕರಾರು ಇಲ್ಲದೇ ಲಾಹೋರ್ ತಲುಪುವೆನು.**

ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ:

ಅಂತೂ ಪೀರ್ ಸಾಹಿಬ್ ತನ್ನ ನಿಯತ್ತು ಶುದ್ಧಿಕರಿಸಿಕೊಂಡರೆ ಮತ್ತು ನೇರವಾಗಿ ಯಾವ ಹೆಚ್ಚಿನ ಶರತ್ತುಗಳಿಲ್ಲದೇ ಅವರು ನನ್ನ ಎದುರಾಗಿ ಅರಬಿಯಲ್ಲಿ ತಫ್ಸೀರ್ ಬರೆಯಲು ಸಿದ್ಧರಾದೆ, ನಾನು ಅಲ್ಲಾಹನ ಮೇಲೆ ಆಣೆ ಮಾಡಿ ಹೇಳುತ್ತೇನೆ. ನಾವು ಯಾವ ಸ್ಥಿತಿಯಲ್ಲಿದ್ದರೂ (ಈ ಸ್ಪರ್ಧೆಯಲ್ಲಿ ಅದು ಎದುರಿನಲ್ಲಿ ಕೇವಲ ಅರಬಿ ತಫ್ಸೀರ್ ಬರೆಯಲು ಮಾತ್ರವಾಗಿರುವುದು) ಲಾಹೋರ್ ಬರುವೆನು. ಕೇವಲ ಎರಡು ಕಾರ್ಯಗಳ ಅಬಿಲಾಷೆ ಹೊಂದಿದ್ದೇನೆ. ಅದರ ಮೇಲೆ ನಾನು ಲಾಹೋರಿಗೆ ಬರುವುದು ನಿರ್ಭರವಾಗಿರುತ್ತದೆ.

**ಲಾಹೋರ್ ತಲುಪಲು ಮೊದಲ ಶರತ್ತು**

(1) ಪ್ರಥಮವಾಗಿ ಪೀರ್ ಸಾಹಿಬ್ ನೇರ ಮತ್ತು ಶುದ್ಧ ಬರಹದಲ್ಲಿ ಯಾವ ಆತಂಕವಿಲ್ಲದೇ ಅಥವಾ ಹೆಚ್ಚಿನ ಶರತ್ತು ಬರೆಯದೇ ಈ ವಿಷಯದ ಜಾಹೀರಾತು ತನ್ನ ಹೆಸರಿನಲ್ಲಿ ಪ್ರಕಟಪಡಿಸಲಿ, ಅದರ ಮೇಲೆ ಲಾಹೋರಿನ ಐದು ಗಣ್ಯ ಆದರಣೀಯ ಸದಸ್ಯರ ಹಸ್ತಾಕ್ಷರವಿರಲಿ. ನಾನು ಮಿರ್ಝಾ ಗುಲಾಂ ಅಹ್ಮದ್ ಖಾದಿಯಾನಿ ಎದುರಿನಲ್ಲಿ ಸ್ಪರ್ಧಿಸಿ ಅರಬಿಯಲ್ಲಿ ಸಾಹಿತ್ಯದಿಂದ ಕೂಡಿದ ಪವಿತ್ರ ಖುರ್‌ಆನ್‌ನ ತಫ್ಸೀರ್ ಬರೆಯಲು ಒಪ್ಪಿಕೊಳ್ಳುತ್ತೇನೆ.

ಅದಾದ ನಂತರ ಸ್ಪರ್ಧೆಯ ನಡುವೆ ಯಾವ ಯಾವ ಶಿಸ್ತು ಕ್ರಮಗಳನ್ನು ಪಾಲಿಸಬೇಕು. ಅದು ಉಭಯತ್ರರಿಗೂ ಪಾಲಿಸುವುದು ಅನಿವಾರ್ಯವಿರುತ್ತದೆ. ಆ ಬಗ್ಗೆ ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ಹನ್ನೆರಡು ಕಾರ್ಯಗಳನ್ನು ವಿವರಿಸಿದರು ಮತ್ತು ಹೇಳಿದರು. ಯಾವ ಜಾಹೀರಾತು ಪೀರ್ ಸಾಹಿಬ್ ಪ್ರಕಟಪಡಿಸುವರು ಅದರಲ್ಲಿ ಇವೆಲ್ಲಾ ಮಾತುಗಳು ಹೆಚ್ಚು ಕಡಿಮೆಗೊಳಿಸದೆ ನಮೂದಿಸಬೇಕು ಮತ್ತು ಅದರ ಮೇಲೆ ಐದು ಗಣ್ಯರನ್ನು ಲಾಹೋರಿನ ಸಾಕ್ಷ್ಯಗಳನ್ನು ಮುದ್ರಿಸಬೇಕು. ಅದಾದ ನಂತರ ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ಹೇಳಿದರು.

**ಲಾಹೋರ್ ತಲುಪಲು ಎರಡನೆಯ ಶರತ್ತು**

(2) ಲಾಹೋರ್ ತಲುಪಲು ಇರುವ ನನ್ನ ಎರಡನೇ ಶರತ್ತೇನೆಂದರೆ ಲಾಹೋರ್ ನಗರದ ಮೂವರು ಶ್ರೀಂತರಾದ ಅಂದರೆ ನವಾಬರಾದ ಶೇಖ್ ಗುಲಾಂ ಮೆಹಬೂಬ್ ಸುಬ್ಹಾನಿ, ನವಾಬ್ ಫತಹ ಅಲಿ ಶಾ ಸಾಹಿಬ್, ಸಯ್ಯದ್ ಬರಕತ್ ಅಲಿ ಖಾನ್ ಸಾಹಿಬ್ ಮಾಜಿ ಎಕ್ಸ್‌ಟ್ರ ಅಸಿಸ್ಟೆಂಟ್ ಒಂದು ಒಪ್ಪಂದ ಸಹಮತದೊಂದಿಗೆ ಪ್ರಕಟಪಡಿಸಲಿ. ಪೀರ್ ಮೆಹರ್ ಅಲಿ ಶಾ ಸಾಹಿಬರ ಚೇಲಾಗಳಿಂದ ಮತ್ತು ಅವರ ವಿಶ್ವಾಸಿಗರಿಂದ ಮತ್ತು ಅವರ ಸಹಪಾಠಿ ಮೌಲ್ವಿಗಳ ವತಿಯಿಂದ ಯಾವ ಬೈಗಳು, ಅಥವಾ ಪಾಶವಿ ಕೃತ್ಯ ಆಗಲಾರದು ಎಂದು ನಾವು ಹೊಣೆ ಹೊರುವೆವು. ನೆನಪಿರಲಿ. ಲಾಹೋರಿನಲ್ಲಿ ನನ್ನ ಸಂಬಂಧಿಸಿದವರು ಹೆಚ್ಚೆಂದರೆ ಹದಿನೈದು ಅಥವಾ ಇಪ್ಪತ್ತು ಜನರಿರಬಹುದು. ನಾನು ಅವರಿಗೆ ಈ ವ್ಯವಸ್ಥೆ ಮಾಡಬಲ್ಲೆನು. ಎರಡು ಸಾವಿರ ರೂಪಾಯಿಗಳು ಆ ಮೂವರು ನವಾಬರಲ್ಲಿ ಜಮಾ ಮಾಡುವೆನು. ನನ್ನ ಜನರಲ್ಲಿ ಯಾರೊಬ್ಬರಾದರೂ ಬೈದರೆ ಅಥವಾ ಬಲಾತ್ಕಾರಕ್ಕೆ ಇಳಿದರೆ ಆ ಎಲ್ಲಾ ಹಣ ಜಪ್ತಿ ಮಾಡಿಕೊಳ್ಳಬಹುದು. ನಾನು ವಾಗ್ಧಾನ ನೀಡುತ್ತೇನೆ. ಯಾರು ಲಾಹೋರಿನ ಕೆಲ ನವಾಬರಿಂದ ಹೆಚ್ಚಿನ ಸಂಬಂಧ ಹೊಂದಿದವರಾಗಿದ್ದಾರೆ. ಮತ್ತು ಬಹುಶಃ ಶಿಷ್ಯಂದಿರು ಇರಬಹುದು. ಅವರಿಗೆ ಹಣ ಜಮಾ ಮಾಡುವ ಯಾವ ಅವಶ್ಯಕತೆ ಇಲ್ಲ. ಕೇವಲ ಆ ಆದರಣೀಯ ಮಹನಿಯರು ಅವರ ನಡೆ ನುಡಿಗಳಿಗೆ ಬದ್ಧರಾಗಿರುವಂತೆ ನೋಡಿಕೊಂಡರೆ ಸಾಕು. ಯಾರು ಪೀರ್ ಸಾಹಿಬರ ಜೊತೆಯಲ್ಲಿದ್ದಾರೆ ಮತ್ತು ಲಾಹೋರಿನಲ್ಲಿರುವ ಅವರ ಚೇಲಾಗಳು, ಸಹವಿಶ್ವಾಸಿಗಳ ಮತುಗಾರಿಕೆ ಪುಂಡಾಟಿಕೆ ಮೇಲೆ ನಿಗಾವಹಿಸಿದರೆ ಸಾಕು. ಅವರುಗಳು ಸ್ಪಷ್ಟ ರೀತಿಯಲ್ಲಿ ನನ್ನ ಬಗ್ಗೆ ಲಾಹೋರಿನಲ್ಲಿ ಫತ್ವಾ ಹೊರಡಿಸುತ್ತಿದ್ದಾರೆ. ಈ ವ್ಯಕ್ತಿಯ ಹತ್ಯೆ ಮಾಡುವುದು ಜಾಯಝ್ ಆಗಿದೆ. ಈ ಕೆಲ ಸಾಲುಗಳ ಬರವಣಿಗೆಯ ನಂತರ ಎಲ್ಲಾ ಮೂವರು ನವಾಬರುಗಳ ಮೇಲೆ ವಿವರಿಸಿದ ತನ್ನ ಹೊಣೆಗಾರಿಕೆಯನ್ನು ತನ್ನ ಹಸ್ತಾಕ್ಷರಗಳೊಂದಿಗೆ ಪ್ರಕಟಪಡಿಸಲಿ. ಪೀರ್ ಸಾಹೇಬರ ಮೇಲೆ ವಿವರಿಸಿದ ಜಾಹೀರಾತಿನ ನಂತರ ನಾನು ತಡಮಾಡದೇ ಲಾಹೋರ್ ತಲುಪಲಿಲ್ಲ ಎಂದರೆ ನಾನು ಸುಳ್ಳುಗಾರನಾಗುವೆನು. ಪ್ರತಿಯೊಬ್ಬ ಸಜ್ಜನ ಸ್ವಭಾವದ ಮತ್ತು ನ್ಯಾಯಯುತವಾದವನು ಲಾಹೋರಿನಲ್ಲಿ ಪೀರ್ ಮೆಹರ್ ಅಲಿ ಶಾ ಜಮಾಅತಿನವರ ಗೊಂದಲ ಬೊಬ್ಬೆ ಕೇಳಿರಬಹುದು. ಅವರ ಬೈಗಳು ಮತ್ತು ಅಶ್ಲೀಲ ಭಾಷೆಗಳಿಂದ ಉತ್ತೇಜಿತರಾದ ಸ್ಥಿತಿ ಕಂಡಿರಬಹುದು. ಅವರುಗಳು ನನ್ನ ಈ ಮಾತಿನೊಂದಿಗೆ ಸಹಮತ ಹೊಂದುವರು, ಅಂತಹ ಗೊಂದಲದ ಸಮಯ ನಗರದ ನವಾಬರ ಹೊರತು ಪೂರ್ಣ ರೀತಿಯಿಂದ ಲಾಹೋರಿನಲ್ಲಿ ಹೆಜ್ಜೆ ಇಡುವುದೆಂದರೆ ಅಗ್ನಿಯ ಮೇಲೆ ಹೆಜ್ಜೆ ಇಟ್ಟಂತೆ, ಯಾವ ಜನರು ಸರಕಾರದ ನಿಯಮಗಳಿಗೆ ಸಹ ಲೆಕ್ಕಿಸುವುದಿಲ್ಲ. ಖಡಾಖಂಡಿತ ಫತ್ವಾಗಳ ಮೇಲೆ ಫತ್ವಾ ನನ್ನ ಪೈಕಿ ಹೊರಡಿಸುತ್ತಿದ್ದಾರೆ. ಈ ವ್ಯಕ್ತಿ ಹತ್ಯೆಗೆ ಅರ್ಹನೆಂದು ಅಂದಮೇಲೆ ಅವರ ಅಸ್ತಿತ್ವ ಅಮಾಯಕವಾಗುವುದಿಲ್ಲವೇ ಮತ್ತು ಶರೀಅತ್ ಹಾಗೂ ಬುದ್ಧಿವಂತಿಕೆ ಫತ್ವಾ ನೀಡಬಹುದೆ, ಆ ಉತ್ಸಾಹಿ ಮತ್ತು ಉತ್ತೇಜಿತ ಜನರು ಜನನಿಬಿಡದಲ್ಲಿ ಯಾವುದೇ ಕಾನೂನಿನ ಬಂದೋಬಸ್ತ್ ಇಲ್ಲದೇ ಆಗಬಹುದೇ?

**ಪೀರ್ ಮೆಹರ್ ಅಲಿ ಶಾ ಗೊಲ್ಡಾವಿಗೆ ಮತ್ತೊಂದು ದೊಡ್ಡ ಸವಾಲು,**

ಅದೇನೆಂದರೆ ನಾನು ಸಾರ್ವಜನಿಕವಾಗಿ ಮೂರು ಗಂಟೆಗಳ ಕಾಲ ನನ್ನ ಹಕ್ಕು ಮತ್ತು ವಾದಿಗಳನ್ನು ಮಂಡಿಸುತ್ತೇನೆ. ನಂತರ ಪೀರ್ ಮೆಹರ್ ಅಲಿ ಶಾ ಸಾಹಿಬ್ ಮಸೀಹ್(ಅ) ಆಕಾಶದಿಂದ ಇಳಿದು ಬರಲಿದ್ದಾರೆ ಎಂದು ಮೂರು ಗಂಟೆಗಳ ಕಾಲ ಪುರಾವೆ ನೀಡಬೇಕು. ಅದರ ನಂತರ ಜನರೇ ಈ ಎರಡು ಭಾಷಣಗಳನ್ನು ಹೋಲಿಸಿ ತೀರ್ಮಾನಿಸಿಕೊಳ್ಳಲಿ.

ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ:

ನಿಸ್ಸಂಶಯವಾಗಿಯೂ ದಿನೇ ದಿನೇ ಆಗುತ್ತಿರುವ ಈ ಗೊಂದಲಗಳನ್ನು ದೂರ ಮಾಡುವುದು ಲಾಹೋರಿನ ಆದರಣೀಯ ನವಾಬರ ಕರ್ತವ್ಯವಾಗಿದೆ. ಅವರು ಈ ಹೊಣೆಯನ್ನು ಹೊತ್ತುಕೊಳ್ಳಬೇಕು. ತನ್ನ ವಿಶೇಷ ಬರಹಗಳ ಮೂಲಕ ನನಗೆ ಲಾಹೋರ್ ಕರೆಯಿಸಿಕೊಳ್ಳಬೇಕು. ಒಂದು ವೇಳೆ ಪೀರ್ ಮೆಹರ್ ಅಲಿ ಶಾ ಸಾಹಿಬ್ ನನ್ನ ಎದುರಾಗಿ ಅರಬ್ಬಿಯಲ್ಲಿ ತಫ್ಸೀರ್ ಬರೆಯಲು ಅಸಮರ್ಥರಾಗಿದ್ದರೆ, ಇನ್ನೊಂದು ಸರಳ ಉಪಾಯ ಅದು ಚರ್ಚೆಯ ರೂಪದಲ್ಲಲ್ಲ. ಆ ಉಪಾಯವೇನೆಂದರೆ ಮೇಲೆ ಹೇಳಿದ ಜವಾಬ್ಧಾರಿಯ ನಂತರ ನಾನು ಲಾಹೋರಿಗೆ ಬಂದು ಸಾರ್ವಜನಿಕರ ಮುಂದೆ ಅವರಲ್ಲಿ ಈ ಮೂವರು ನವಾಬರು ಸಹ ಇರಬೇಕು ಅವರ ಮುಂದೆ ಮೂರು ಗಂಟೆಯವರೆಗೆ ನಾನು ನನ್ನ ದಾವೆ ಹಾಗೂ ಸಾಕ್ಷ್ಯಗಳನ್ನು ವಿವರಿಸಲು ನನಗೆ ಅನುಮತಿ ನೀಡಬೇಕು. ಪೀರ್

ಮೆಹರ್ ಅಲಿ ಶಾ ಅವರಿಂದ ಯಾವ ಸಂಬೋಧನೆಯು ಇರಲಿಕ್ಕಿಲ್ಲ. ನನ್ನ ಭಾಷಣ ಮುಗಿದ ನಂತರ ಮತ್ತೆ ಪೀರ್ ಮೆಹರ್ ಅಲಿ ಶಾ ಸಾಹಿಬ್ ಅವರಿಗೆ ಸಹ ಮೂರು ಗಂಟೆಯವರೆಗೆ ಸಾರ್ವಜನಿಕರ ಮುಂದೆ ಖುರ್‌ಆನ್ ಮತ್ತು ಹದೀಸಿನ ಪ್ರಕಾರ ಮಸೀಹ್(ಅ) ಆಕಾಶದಿಂದ ಇಳಿದು ಬರುವರು ಎಂದು ಸಾಕ್ಷ್ಯಗಳನ್ನು ನೀಡಲಿ. ಅದಾದ ನಂತರ ಜನರೇ ಆ ಎರಡೂ ಭಾಷಣಗಳನ್ನು ಹೋಲಿಸಿಕೊಂಡು ತೀರ್ಮಾನಿಸಿಕೊಳ್ಳಲಿ. ಈ ಎರಡು ವಿಷಯಗಳಲ್ಲಿ ಯಾವುದೇ ಒಂದು ಮಾತನ್ನು ಪೀರ್ ಸಾಹಿಬ್ ಒಪ್ಪಿಕೊಂಡು ಶರತ್ತನ್ನು ಒಳಗೊಂಡ ಒಪ್ಪಂದದೊಂದಿಗೆ ನವಾಬರು ಜವಾಬ್ದಾರಿ ವಹಿಸಿಕೊಂಡರೆ ನಾನು ಲಾಹೋರ್‌ಗೆ ಬರುವೆನು. **ವಲ್ಲಾಹು ಅಲಾ ಮಾ ತಖೂಲು ಶಹೀದುನ್– ವಸ್ಸಲಾಮ್ ಅಲಾ ಮನಿತ್ತಬ ಅಲ್‌ಹುದಾ**

**ಜಾಹೀರಾತುದಾರ: ಮಿರ್ಝಾ ಗುಲಾಂ ಅಹ್ಮದ್ ಖಾದಿಯಾನಿ 28 ಆಗಸ್ಟ್ 1900**

**(ಮಜ್ಮೂಅ ಇಶ್ತಹಾರಾತ್, ಸಂಪುಟ–3, ಪುಟ–129 ರಿಂದ 135, ಇಶ್ತಿಹಾರ್ ಸಂಖ್ಯೆ–233, ಜುಲೈ 2019 ಆವೃತಿ ಖಾದಿಯಾನ್)**

ಮುಂದಿನ ಸಂಚಿಕೆಯಲ್ಲಿ ನಾವು ಇನ್‌ಶಾಅಲ್ಲಾಹ್ ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ರವರ ಆ ಸವಾಲು ಪ್ರಸ್ತುತಪಡಿಸುವೆವು. ಅದರಲ್ಲಿ ಅವರು ಪೀರ್ ಮೆಹರ್ ಅಲಿ ಶಾ ಅವರಿಗೆ ಸೂರ: ಫಾತಿಹಾ ತಫ್ಸೀರ್ ಬರೆಯಲು ಆಹ್ವಾನಿಸಿದರು. ಅವರಿಗಿಂತ ಉತ್ತಮ ತಫ್ಸೀರ್ ಬರೆದ ಪಕ್ಷದಲ್ಲಿ ಅವರಿಗೆ ಐದು ನೂರು ರೂಪಾಯಿಗಳ ಬಹುಮಾನ ಸಹ ಇಟ್ಟಿದ್ದರು. **(ಮನ್ಸೂರ್ ಅಹ್ಮದ್ ಮಸ್ರೂರ್)**

**********

**ಇರುವೆಗಳಲ್ಲಿ ಬಹಳ ಉತ್ತಮ ವ್ಯವಸ್ಥೆ ಇರುತ್ತದೆ, ಅದೇ ರೀತಿ ಜೇನು ಹುಳಗಳು ಬಹಳ ಉತ್ತಮ ವ್ಯವಸ್ಥೆಯನ್ನು ಹೊಂದಿರುತ್ತದೆ, ಆದ್ದರಿಂದ ಅಲ್ಲಾಹನು ಪವಿತ್ರ ಖುರ್‌ಆನಿನಲ್ಲಿ ಜೇನು ಹುಳುಗಳನ್ನು ಪ್ರಸ್ತಾಪಿಸಲು ಕಾರಣವೇನೆಂದರೆ ಆ ಇರುವೆ ಹಾಗೂ ಜೇನಿಗೆ ನೀಡಿದ ಜ್ಞಾನ ಮತ್ತು ತನ್ನ ಸ್ವಂತ ಆಲೋಚನೆಯಿಲ್ಲದ ವ್ಯವಸ್ಥೆಯನ್ನು ನೀಡಿದ ಉನ್ನತ ಜೀವಿಯೂ ಇದೆ ಎಂದು ತಿಳಿಯಲಿಕ್ಕಾಗಿದೆ.**

ಸಯ್ಯದ್‌ನಾ ಹಝ್ರತ್ ಮುಸ್ಲಿಹ್ ಮೌಊದ್(ರ) ಸೂರ ನಹಲ್‌ನ ಆಯತ್ 69 **"ವ ಅವ್‌ಹಾ ಇಲನ್ನಹ್ಲಿ ಅನಿತ್ತಖಿಝೀ ಮಿನಲ್ ಜಿಬಾಲಿ ಬುಯೂತ ವ್ವ ಮಿನಶ್ಶಜರಿ ವಮಿಮ್ಮಾ ತಅ್‌ರಿಶೂನ"** ದ ವ್ಯಾಖ್ಯಾನ ಮಾಡುತ್ತ ಹೇಳುತ್ತಾರೆ:

ಜೇನುನೊಣಗಳು ಮತ್ತು ಇರುವೆಗಳ ಸಂಶೋಧನೆಯು ಪ್ರಾಣಿಗಳ ಸಂಶೋಧನೆಗಿಂತ ಹೆಚ್ಚು ವಿಸ್ತಾರವಾಗಿದೆ. ಇರುವೆಗಳು ತುಂಬಾ ಭಾರವನ್ನು ಹೊರುವ ವ್ಯವಸ್ಥೆಯನ್ನು ಹೊಂದಿವೆ ಎಂದು ಈ ಸಂಶೋಧನೆಯು ತೋರಿಸಿದೆ. ಇವು ತನ್ನ ಕೈಗಳಿಂದ ಮಾತನಾಡುತ್ತದೆ. ತನ್ನ ಮೃತ ದೇಹವನ್ನು ಮನುಷ್ಯನಂತೆ ರಕ್ಷಿಸುತ್ತದೆ. ಇದು ಬಹಳಷ್ಟು ಧಾನ್ಯವನ್ನು ಹೊಂದಿಸಿಡುತ್ತದೆ. ಶೀತ ಮತ್ತು ಶಾಖದ ಮನೆಗಳನ್ನು ಪ್ರತ್ಯೇಕವಾಗಿ ನಿರ್ಮಿಸುತ್ತದೆ. ಇರುವೆಗಳು ಹಾಲಿನಂತಿರುವ ಒಂದು ರೀತಿಯ ಹುಳುಗಳನ್ನು ತಮ್ಮ ಮನೆಗಳಲ್ಲಿ ಸಂಗ್ರಹಿಸಿ ತಮ್ಮ ಆಹಾರವನ್ನಾಗಿ ಉಪಯೋಗಿಸಿಕೊಳ್ಳುತ್ತದೆ. ಅದು ಮೊದಲು ಈ ಕೀಟಗಳಿಗೆ ಆಹಾರವನ್ನು ನೀಡುತ್ತದೆ. ಅನುಭವದಿಂದ ಗೋತ್ತಾದ ವಿಷಯವೇನೆಂದರೆ ಧಾನ್ಯಗಳಲ್ಲಿ ಕೊರತೆವುಂಟಾದಾಗ ಅವು ಆ ಹುಳುಗಳಿಗೆ ಮೊದಲು ಆಹಾರ ನೀಡುತ್ತದೆ, ತದನಂತರ ಆ ಆಹಾರದಲ್ಲಿ ಏನಾದರು ಉಳಿದಿದ್ದರೆ ಅದನ್ನು ಅವು ಸಹ ತಿನ್ನುತ್ತವೆ. ಅವರ ನಡುವೆ ಜಗಳಗಳು ಸಹ ಆಗುತ್ತವೆ. ಸಂಧಾನವೂ ಆಗುತ್ತದೆ. ಹೀಗೆ ಅವರಲ್ಲಿ ಅಗಾಧವಾದ ವ್ಯವಸ್ಥೆ ಕಂಡುಬರುತ್ತದೆ. ಇದೆಲ್ಲವೂ ಒಂದು ರೀತಿಯ ವಹಿ ಖಫಿ (ರಹಸ್ಯವಾದ ದೇವವಾಣಿ) ಯ ಪರಿಣಾಮವಾಗಿದೆ.

ಅಂತೆಯೇ, ಜೇನು ಹುಳಗಳು ಸಹ ಉತ್ತಮ ವ್ಯವಸ್ಥೆಯನ್ನು ಹೊಂದಿದೆ. ಮಾನವ ವ್ಯವಸ್ಥೆಗಳಿಗಿಂತ ಅವರ ವ್ಯವಸ್ಥೆಯು ಉತ್ತಮವೆಂದು ಕೆಲವು ತಜ್ಞರು ನಂಬುತ್ತಾರೆ. ಕೆಲವು ವಿಷಯಗಳಲ್ಲಿ ಅವರು ಮನುಷ್ಯರಿಗಿಂತ ಹೆಚ್ಚು ಸೂಕ್ಷ್ಮಭಾವನೆ ಉಳ್ಳವರಾಗಿರುತ್ತಾರೆ. ಅದರ ಪ್ರತಿಯೊಂದು ಗೂಡುಗಳಲ್ಲಿ ಓರ್ವ ರಾಣಿ ಇರುತ್ತಾಳೆ. ಎಲ್ಲಾ ಜೇನುನೊಣಗಳು ಅವಳನ್ನು ಅನುಸರಿಸುತ್ತವೆ. ಅವರ ಜನಾಂಗಗಳು ವಿಭಿನ್ನವಾಗಿವೆ. ಎಲ್ಲರೂ ಮನುಷ್ಯರಂತೆ ಒಟ್ಟಿಗೆ ಬದುಕುವುದಿಲ್ಲ. ಹೊಸ ರಾಣಿ ಜನಿಸಿದಾಗ, ಹಳೆಯ ಜೇನುನೊಣಗಳು ಅದನ್ನು ಕೊಲ್ಲಲು ಬಯಸುತ್ತವೆ, ಆದ್ದರಿಂದ ಎಲ್ಲಾ ಹೊಸ ಯುವ ಜೇನುನೊಣಗಳು ರಾಣಿಯನ್ನು ಕಾಪಾಡುತ್ತವೆ ಮತ್ತು ಒಟ್ಟಿಗೆ ರಕ್ಷಿಸುತ್ತವೆ. ಆ ರಾಣಿ ದೊಡ್ಡವಳಾಗಿ ತನ್ನ ಸಂಗಡಿಗರೊಂದಿಗೆ ಹೊಸ ಗೂಡನ್ನು ಸಿದ್ಧಗೊಳಿಸುತ್ತದೆ. ನಂತರ ರಾಣಿಯು ಹೋರಾಡಿ ಹಳೆಯ ಜೇನುಗಳನ್ನು ಆ ಗೂಡಿನಿಂದ ಓಡಿಸುತ್ತದೆ. ಇಲ್ಲದಿದ್ದರೆ ಯುದ್ಧದಲ್ಲಿ ಸೋತು ಬೇರೆಯ ಕಡೆ ಹೋಗುತ್ತಾಳೆ. ಅದ್ಭುತವಾದ ಅವರ ವ್ಯವಸ್ಥೆಯ ಇತರ ವಿವರಗಳಿವೆ. ಸರ್ವಶಕ್ತನಾದ ಅಲ್ಲಾಹನು ನಹಲ್ ಅನ್ನು ಪ್ರಸ್ತಾಪಿಸಲು ಕಾರಣವೇನೆಂದರೆ ಆ ಜೇನಿಗೆ ಈ ಜ್ಞಾನವನ್ನು ನೀಡಿದ ಮತ್ತು ಅವನ ಸ್ವಂತ ಆಲೋಚನೆಯಿಲ್ಲದ ವ್ಯವಸ್ಥೆಯನ್ನು ಅವನಿಗೆ ನೀಡಿದ ಉನ್ನತ ಜೀವಿಯು ಇದೆ ಎಂದು ತಿಳಿಯಲು. ಅದೇ ರೀತಿ ಜೇನುಹುಳದ ಉದಾಹರಣೆಯನ್ನು ಆಯ್ಕೆಮಾಡಲಾಗಿದೆ ಏಕೆಂದರೆ ಜೇನುನೊಣದ ವ್ಯವಸ್ಥೆಯು ಸ್ವಲ್ಪ ಗಮನದಿಂದ ಗೋಚರಿಸುತ್ತದೆ ಮತ್ತು ಅದು ಮಾನವರಿಂದ ಅತ್ಯುತ್ತಮವೆಂದು ಪರಿಗಣಿಸಲ್ಪಟ್ಟ ಆಹಾರವನ್ನು ಉತ್ಪಾದಿಸುತ್ತದೆ. ಅದರಲ್ಲಿ ಈ ವ್ಯವಸ್ಥೆ ಇರುವುದು ಬುದ್ಧಿಶಕ್ತಿಯನ್ನು ಹೊಂದಿದೆ ಎಂಬುದನ್ನು ತೋರಿಸುತ್ತದೆ. ಆದರೆ ಅದರ ಅಭಿವೃದ್ಧಿ ಮತ್ತು ಅದೇ ಸ್ಥಿತಿಯಲ್ಲಿ ಉಳಿಯಲು ಅಸಮರ್ಥತೆಯು ಈ ವ್ಯವಸ್ಥೆಯನ್ನು ಬೇರೆ ಯಾವುದೋ ಶಕ್ತಿಯಿಂದ ನೀಡಲಾಗಿದೆ ಮತ್ತು ಹೊರಗಿನಿಂದ ಬಂದಿದೆ ಎಂದು ಸೂಚಿಸುತ್ತದೆ. ಆ ವ್ಯವಸ್ಥೆಯನ್ನು ಅದು ಸ್ವತಃ ಅಭಿವೃದ್ಧಿಪಡಿಸಲಿಲ್ಲ.

ಈ ಆಯತ್‌ನಲ್ಲಿ ವಿವಿಧ ರೀತಿಯ ಜೇನುನೊಣಗಳನ್ನು ಸಹ ಸೂಚಿಸುತ್ತದೆ. ಕೆಲವರು ಪರ್ವತಗಳಲ್ಲಿ ಜೇನುಗೂಡುಗಳನ್ನು ಮಾಡುತ್ತಾರೆ, ಕೆಲವರು ಹೊಲದಲ್ಲಿನ ಮರಗಳ ಮೇಲೆ ಮತ್ತು ಕೆಲವರು ಮನೆಗಳ ಮೇಲೆ ಅಥವಾ ದ್ರಾಕ್ಷಿಗಳಿಗಾಗಿ ಮಾಡಿದ ಛಾವಣಿಗಳ ಮೇಲೆ ಜೇನುಗೂಡುಗಳನ್ನು ಮಾಡುತ್ತಾರೆ. ಮಾನವರಲ್ಲಿ ದೈವವಾಣಿಯು ಒಂದೇ ರೀತಿಯದ್ದಾಗಿರುವುದಿಲ್ಲ ಎಂದು ಇದು ಸೂಚಿಸುತ್ತದೆ. ಕೆಲವರು ಪರ್ವತದ ಹಾಗಿರುತ್ತಾರೆ, ಕೆಲವರು ಮರದ ಹಾಗಿರುತ್ತಾರೆ ಮತ್ತು ಕೆಲವರು ಛಾವಣಿಯ ಸ್ಥಾನ ಹೊಂದಿರುತ್ತವೆ. ಅಂದರೆ, ಕೆಲವರು ಬಹಳ ಉನ್ನತ ಸ್ಥಾನದಲ್ಲಿರುವವರು, ಕೆಲವರು ಅವರಿಗಿಂತ ಕೀಳಗಿರುವವರು ಮತ್ತು ಕೆಲವರು ಅವರಿಗಿಂತ ಕೆಲವರು. **ತಿಲ್‌ಕರ್ರುಸುಲು ಫಝ್ಝಲ್‌ನಾ ಬಅ್‌ಝುಹುಮ್ ಅಲಾ ಬಅ್‌ಝ್** (ಬಖರಾ, ರುಕು–33) ಆಯತ್‌ನಲ್ಲಿ ಉಲ್ಲೇಖಿಸಲಾದ ಅದೇ ವಿಷಯವನ್ನು ಇಲ್ಲೂ ಸಹ ಉಲ್ಲೇಖಿಸುತ್ತದೆ.

**(ತಫ್ಸೀರ್ ಕಬೀರ್, ಸಂಪುಟ–4, ಪುಟ–194, ಖಾದಿಯಾನ್ 2010)**

**ವಿವಾಹ ಪ್ರಚಾರಪಡಿಸಲು ದಫ್ ಉಪಯೋಗಿಸಬಹುದು ಹೊರತು ಡೋಲು ಬಾರಿಸುತ್ತಾ ಕುಣಿಯುವುದು ನಿಷಿದ್ಧವಾಗಿದೆ**

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ಕೆಟ್ಟ ವಸ್ತುಗಳು ಹರಾಮ್ ಆಗಿದೆ ಮತ್ತು ಶುದ್ಧ ವಸ್ತುಗಳು ಹಲಾಲ್ ಆಗಿದೆ. ಅಲ್ಲಾಹನು ಯಾವುದೇ ಶುದ್ಧ ವಸ್ತುಗಳನ್ನು ನಿಷಿದ್ಧ (ಹರಾಮ್) ಗೊಳಿಸುವುದಿಲ್ಲ. ಬದಲು ಎಲ್ಲ ಶುದ್ಧ ವಸ್ತುಗಳು ಹಲಾಲ್ (ಧರ್ಮಬದ್ಧ) ಎನ್ನುತ್ತದೆ. ಆದರೆ ಶುದ್ಧ ವಸ್ತುಗಳೊಂದಿಗೆ ಅಶುದ್ಧ ವಸ್ತುಗಳನ್ನು ಬೆರಕೆ ಮಾಡಿದರೆ ಅದು ನಿಷಿದ್ಧವಾಗುತ್ತದೆ, ಈಗ ನೋಡಿ ವಿವಾಹವನ್ನು ಪ್ರಚಾರಪಡಿಸಲು ದಫ್ ಬಾರಿಸುವುದನ್ನು ಧರ್ಮಸಮ್ಮತವೆಂದಿದೆ. ಆದರೆ ಅದರಲ್ಲಿ ಡೋಲು ಬಾರಿಸುತ್ತಾ ಕುಣಿಯುವುದು ಇತ್ಯಾದಿ ಸೇರಿಸುವುದನ್ನು ನಿಷಿದ್ಧಗೊಳಿಸಲಾಗಿದೆ. ಆದರೆ ನಬಿ ಕರೀಂ ಸಲ್ಲಲ್ಲಾಹು ಅಲೈಹಿವಸಲ್ಲಮರ ರೀತಿಯನ್ನು ಅನುಸರಿಸಿದರೆ ಯಾವುದೂ ನಿಷಿದ್ಧವಲ್ಲ.

**(ಮಲ್‌ಫೂಝಾತ್, ಸಂಪುಟ–5, ಪುಟ–354, ಮುದ್ರಣ ಖಾದಿಯಾನ್ 2003)**

**ವಿವಾಹ ಸಂದರ್ಭದಲ್ಲಿ ನಿಷ್ಪ್ರಯೋಜಕ ಸಂಗೀತ, ಕುಣಿತ ಹಾಗೂ ಹಾಡುಗಳನ್ನು ಹಾಡಲು ಅನುಮತಿ ಇಲ್ಲ.**

ಹಝ್ರತ್ ಖಲೀಫತುಲ್ ಮಸೀಹ್ ಅಲ್ ಖಾಮಿಸ್ (ಅತಬಿಅ) ಹೇಳುತ್ತಾರೆ: "ಸಂತೋಷದ ಸಂದರ್ಭಗಳಲ್ಲಿ ಅಲ್ಲಾಹನ ಅನುಗ್ರಹಗಳನ್ನು ಬೇಡುವ ವಿವಾಹವನ್ನು ಅಲ್ಲಾಹನು ಎಲ್ಲಾ ರೀತಿಯಿಂದ ಯಶಸ್ವಿಗೊಳಿಸಲಿ. ಬರುವ ಪೀಳಿಗೆ ಇಸ್ಲಾಮ್ ಧರ್ಮದ ಸೇವಕರಾಗಿರಲಿ, ಅಲ್ಲಾಹನ ವಿಧೇಯ ದಾಸರಾಗಿರಲಿ ಎನ್ನುವ ಬದಲು ಅಜಾಗ್ರತಗೊಂಡು ಹಾಡುಗಳನ್ನು ಹಾಡುತ್ತ ಶಿರ್ಕ್ (ಬಹು ದೇವಾರಾಧನೆ) ಮಾಡುವವರಾಗಿರುತ್ತಾರೆ. ದೂರುಗಳು ಬರುತ್ತಿರುತ್ತವೆ ಆದುದರಿಂದ ಇಂತಹ ಮನೆಯವರಿಗೆ ನಾನು ಎಚ್ಚರಿಕೆ ನೀಡುತ್ತೇನೆ, ಈ ರೀತಿಯ ನಿಷ್ಪ್ರಯೋಜಕ ಹಾಗೂ ನಿರರ್ಥಕತೆಯಿಂದ ದೂರವಿರಬೇಕು, ಹೀಗೆಯೇ ಡ್ಯಾನ್ಸ್ ಕುಣಿತಗಳಿಂದ, ವಧುವಿನ ಮನೆಯಲ್ಲಿ ನಾನಾ ರೀತಿಯ ಶೃಂಗಾರಗಳು ಅಥವಾ ವಿವಾಹ ನಂತರ ವಧು ವಿವಾಹವಾಗಿ ವರನ ಮನೆಗೆ ಹೋದಾಗ ಅಲ್ಲಿ ಕೆಲವು ಸಂದರ್ಭಗಳಲ್ಲಿ ನಿಷ್ಪ್ರಯೋಜಕ ರೀತಿಯ ಸಂಗೀತ ಅಥವಾ ಹಾಡುಗಳಿಗೆ ಕುಣಿಯುತ್ತಾರೆ, ಇದಕ್ಕೆ ಯಾವ ಕಾರಣಕ್ಕೂ ಅನುಮತಿ ನೀಡಲಾಗುವುದಿಲ್ಲ."

**(ಖುತ್‌ಬಾತೆ ಮಸ್‌ರೂರ್, ಸಂಪುಟ–3, ಪುಟ–687)**

ಮಾಡಲು ಹೋಗಿದ್ದೆ. ಆದರೆ ಇಂದಿನ ದಿನ ನನ್ನ ಜೀವನದಲ್ಲಿ ಬಹಳ ಪ್ರಮುಖವಾದ ದಿನವಾಗಿದೆ. ನಾನು ಖಲೀಫರನ್ನು ದರ್ಶಿಸಿದ್ದೇನೆ. ಖಲೀಫರು ನನ್ನ ಮನಸ್ಸನ್ನು ಗೆದ್ದುಕೊಂಡಿದ್ದಾರೆ.

ಹುಝೂರ್ ಮಹಿಳೆಯರ ಮಾರ್ಕಿಗೆ ತೆರಳುತ್ತಿದ್ದಾಗ ನಾನು ಸಹ ಅವರನ್ನು ಕಾಣಲು ಹೋದೆನು. ಆ ಸಂದರ್ಭದಲ್ಲಿ ಅಹ್ಮದಿಯೇತರ ಜರ್ಮನ್ ಮಹಿಳೆಯರು ಸಹ ಅವರನ್ನು ಕಾಣಲು ಬಂದಿದ್ದರು, ಅವರಲ್ಲಿ ಕೆಲ ಮಹಿಳೆಯರ ಕಣ್ಣುಗಳು ಸಂತಸದಿಂದ ಕೂಡಿದ ಭಾವಪೂರ್ಣ ಆಶ್ರುಗಳು ಕಂಡುಬಂದವು.

* Vechta ನಗರದಲ್ಲಿ ಕಟ್ಟಡಗಳಿಗೆ ಮಂಜೂರಿ ನೀಡುವ ವಿಭಾಗದ ಪರಭಾರಿ ಅವರು ನಮ್ಮ ಮಸೀದಿಯ ನಿರ್ಮಾಣಕ್ಕೂ ಮಂಜೂರಿ ನೀಡಿದ್ದರು. ಅವರೂ ಸಹ ಆ ಸಮಾರಂಭದಲ್ಲಿ ಸೇರಿದ್ದರು. ಅವರು ತಮ್ಮ ಭಾವನೆಗಳನ್ನು ಹೀಗೆ ವಿವರಿಸುತ್ತಾರೆ. ನಿಮ್ಮ ಖಲೀಫರ ಭಾಷಣ ಅದ್ಭುತವಾಗಿತ್ತು. ಶಾಂತಿಯ ಸಂದೇಶ ಮತ್ತು ವಿಶೇಷವಾಗಿ ಹುಝೂರರು ಹೇಳಿದ ದೇಶದೊಂದಿಗೆ ನಿಷ್ಠೆ ಹೊಂದಬೇಕು, ದೇಶದ ಪ್ರಗತಿಯಲ್ಲಿ ಹೆಚ್ಚೆಚ್ಚು ಭಾಗವಹಿಸಬೇಕು ಮತ್ತು ಯಾವ ರೀತಿಯ ವರ್ಣಭೇದವಿಲ್ಲದೆ ತಾರತಮ್ಯವಿಲ್ಲದೆ ಮಾನವೀಯತೆಯ ಸೇವೆ ಮಾಡಬೇಕೆಂಬ ಉದಾತ್ತವಾದ ಈ ಸಂಗತಿ ನನ್ನ ಸಂತಸಕ್ಕೆ ಕಾರಣವಾಯಿತು. ಅಲ್ಲದೇ ವ್ಯಕ್ತಿಯೊಬ್ಬನು ಬೇರೆ ದೇಶದ ಬಗ್ಗೆ ಇಂತಹ ಉದಾತ್ತ ಭಾವನೆಗಳನ್ನು ಹೊಂದಬಹುದೇ ಎಂಬ ವಿಚಾರ ತಿಳಿದು ಆಶ್ಚರ್ಯವಾಯಿತು.

* Vechta ಜಮಾಅತಿನ ಅಧ್ಯಕ್ಷರು ಹೇಳುತ್ತಾರೆ. ನಮ್ಮ ಜಮಾಅತಿನ ಮಿತ್ರರೊಬ್ಬರು ಈ ಸಮಾರಂಭದಲ್ಲಿ ಪಾಲ್ಗೊಂಡ ಅತಿಥಿಗಳಿಗೆ ಮರು ದಿನ ಸಿಹಿ (sweet) ಕೊಡಲು ಹೋದಾಗ, ದಂಪತಿಯೊಬ್ಬರು ಹೇಳಿದರು. ನಾವಿಬ್ಬರು ಮನೆಗೆ ಮರಳಿ ಬಂದ ಮೇಲೆ ರಾತ್ರಿ ಎಷ್ಟೋ ಹೊತ್ತಿನವರೆಗೆ ನಿಮ್ಮ ಖಲೀಫರ ಮುಖ ನಮ್ಮ ಮುಂದೆ ಬಂದು ನಿಲ್ಲುತ್ತಿತ್ತು.

* ಅದೇ ರೀತಿ ಮಸ್ಜಿದ್ ಬೈತುಲ್ ಖಾದಿರ್‌ನ ನಕ್ಷೆ ಸಿದ್ಧಪಡಿಸಿದ Architector ಹೇಳಿದರು. ನಾನು ಈ ಸಮಾರಂಭದಲ್ಲಿ ಯಾವ ರೀತಿ ಮೋಹಿತನಾಗಿದದೇನೆಂದರೆ ಸಮಯ ಹೇಗೆ ಕಳೆಯಿತು ಎಂದು ಗೊತ್ತೇ ಆಗಲಿಲ್ಲ. ನಾನು ಯಾವುದೇ ಒಂದು ಅತ್ಯಂತ ರೋಚಕ ಚಿತ್ರ ಕಾಣುತ್ತಿದ್ದೆನು ಎಂಬಂತೆ ಭಾಸವಾಗುತ್ತಿತ್ತು. ಹುಝೂರೆ ಅನ್ವರ್ ಅವರ ಭಾಷಣ ತುಂಬ ಆಳವಾದ ಪ್ರಭಾವ ನನ್ನ ಮೇಲೆ ಬೀರಿದೆ. ಮತ್ತು ಹೇಳಿದರು. vechta ದಲ್ಲಿ ಯಾರಾದರೂ ನಿಮಗೆ ಪೀಡಿಸಿದರೆ ತಿಳಿಸಿ ನಾನು ನಿಮಗೆ ಸಹಾಯ ನೀಡುವೆನು.

* ಅದೇ ರೀತಿ ತತ್ವಶಾಸ್ತ್ರದ ಗುರುಗಳೊಬ್ಬರೂ ಸಹ ಈ ಸಮಾರಂಭದಲ್ಲಿ ಶಾಮೀಲಾಗಿದ್ದರು. ಅವರು ಹೇಳಿದರು. ಹುಝುರೆ ಅನ್ವರ್ ಮಸೀದಿ ಸಮಾರಂಭದಲ್ಲಿ ಉಪಯೋಗವಾಗಿದ್ದ ಕಲ್ಲಿನ ಉದಾಹರಣೆ ಹೇಳುತ್ತ ಉಪದೇಶ ನೀಡಿದರು. ನಿಮ್ಮ ಹೃದಯಗಳು ಕಲ್ಲಾಗಬಾರದು, ಬದಲು ನೀರು ಚಿಮ್ಮುವ ಚಿಲುಮೆ ಆಗಬೇಕಾಗಿದೆ. ಈ ಮಾತು ನನಗೆ ತುಮಬಾ ಇಷ್ಟವಾಯಿತು.

* ನಮ್ಮ ಕೆಲ ಅಹ್ಮದಿ ವಿದ್ಯಾರ್ಥಿಗಳು ತಿಳಿಸಿದರು. ಮರು ದಿನ ತರಗತಿಯಲ್ಲಿ ಆ ಶಿಕ್ಷಕರು ಸುಮಾರು ಐದು ನಿಮಿಷದವರೆಗೆ ಎಲ್ಲ ವಿದ್ಯಾರ್ಥಿಗಳಿಗೆ ಮಸೀದಿಯ ಉದ್ಘಾಟನಾ ಸಮಾರಂಭ ಕುರಿತು ಹೇಳಿದರು ಮತ್ತು ಜಮಾಅತಿನ ಪ್ರಶಂಸೆ ಮಾಡಿದರು.

ಸಮಾರಂಭ ಮುಗಿದ ನಂತರ ಜಮಾಅತಿನ ಬಾಂಧವರೆಲ್ಲರೂ ಹುಝೂರೆ ಅನ್ವರ್ ಅವರೊಂದಿಗೆ ಚಿತ್ರ ತೆಗೆಯಿಸಿಕೊಳ್ಳಲು ಕೇಳಿಕೊಂಡರು. ಆ ಜರ್ಮನ್ ಬಾಂಧವರ ಮುಖದಿಂದ ಪ್ರೀತಿ ಮತ್ತು ಶ್ರದ್ಧೆ ಎದ್ದು ಕಾಣುತಿತ್ತು. ಏಳು, ಎಂಟು ಜರ್ಮನ್ ಅತಿಥಿಗಳ ಈ ಗುಂಪಿನಲ್ಲಿ ಉಪ ಮೇಯರ್ ಒಬ್ಬರು, ಡಾಕ್ಟರ್‌ರೊಬ್ಬರು ಮತ್ತು ಕೆಲ ಇತರ ಉನ್ನತ ಅಧಿಕಾರಿಗಳು ಸಹ ಶಾಮೀಲಾಗಿದದರು.

* ಅದೇ ರೀತಿ ಈ ಸಮಾರಂಭದಲ್ಲಿ ಪಾಲ್ಗೊಂಡ ಹಲವು ಅತಿಥಿಗಳು ಹೇಳುತ್ತಿದ್ದರು. ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದು ತಮ್ಮ ಭಾಗ್ಯವಾಗಿದೆ. ಹುಝೂರೆ ಅನ್ವರ್ ಶಾಂತಿಪ್ರಿಯ ರಾಯಭಾರಿಯಾಗಿದ್ದಾರೆ ಎಂಬುದರಲ್ಲಿ ಯಾವ ಸಂಶಯವು ಇಲ್ಲ. ಅವರೊಬ್ಬರು ತೇಜಸ್ವಿ ಪುರುಷರಾಗಿದ್ದಾರೆ. ಮಾನವೀಯತೆಯ ಬಗ್ಗೆ ತುಂಬಾ ಕಾಳಜಿ ವಹಿಸಿದವರಾಗಿದ್ದಾರೆ. ಹುಝೂರರ ಭಾಷಣದಿಂದ ಅತ್ಯಂತ ಧೈರ್ಯ ಲಭಿಸಿದಂತಾಗಿದೆ. ಹುಝೂರ್ ಲೋಕದಲ್ಲಿರುವ ಸಮಸ್ಯೆಗಳನ್ನು ತುಂಬಾ ಆಳವಾದ ರೀತಿಯಲ್ಲಿ ತಿಳಿದವರಾಗಿದ್ದಾರೆ ಮತ್ತು ಅದರ ಪರಿಹಾರವನ್ನು ಹೇಳಿಕೊಡುವವರಾಗಿದ್ದಾರೆ.

* ಸ್ಥಳೀಯ ಜಮಾಅತಿನ ಅಧ್ಯಕ್ಷರು ಹೇಳುತ್ತಾರೆ. ನಾವು ಈ ಸಮಾರಂಭಕ್ಕಿಂತ ಮುಂಚೆ ಸ್ಥಳೀಯ ಮಾಧ್ಯಮದವರೊಂದಿಗೆ ಸಂಪರ್ಕಿಸಿದೆವು. ಆದರೆ ಅಷ್ಟೊಂದು ಉತ್ತಮ ರೀತಿಯ ಫಲ ದೊರೆಯಬಹುದೆಂದು ನಿರೀಕ್ಷಿಸಿರಲಿಲ್ಲ. ಆದರೆ ಅಲ್ಲಾಹನು ಖಲೀಫರ ಪರವಾಗಿ ಅನುಗ್ರಹದ ಒಂದು ಗಾಳಿ ಬೀಸಿದಂತಾಯಿತು. ಈ ಸಮಾರಂಭದಲ್ಲಿ ನಾವು ನಿರೀಕ್ಷಿಸಿದಕ್ಕಿಂತ ಹೆಚ್ಚು ಪ್ರಿಂಟ್ ಮತ್ತು ಎಲೆಕ್ಟ್ರಾನಿಕ್ ಮಾಧ್ಯಮದ ಜನರು ಬಂದು ತಲುಪಿದ್ದರು. ಜರ್ಮನಿಯ ಒಂದು ಬಹು ದೊಡ್ಡ ಚಾನಲ್ ಸ್ಯಾಟಲೈಟ್–1, ಅವರು ಬರಬಹುದೆಂಬ ಗುಮಾನಿಯೂ ಇರಲಿಲ್ಲ. ಆದರೆ ಅದರ ಪ್ರತಿನಿಧಿ ಬಂದಿದ್ದರು ಮತ್ತು ಉದ್ಘಾಟನೆ ಸಂಬಂಧ ದೂರದರ್ಶನದಲ್ಲಿ ಸುದ್ದಿ ಬಿತ್ತರಿಸಿದರು. ಅದೇ ರೀತಿ ರಾಜ್ಯದ ರೇಡಿಯೋ ಚಾನಲ್ NDR ಸಹ ಈ ಕಾರ್ಯಕ್ರಮದ ಸುದ್ದಿ ಬಿತ್ತರಿಸಿತ್ತು. ರೇಡಿಯೋದಲ್ಲಿಯೂ ಸಹ ಈ ಸಮಾರಂಭ ಕುರಿತು ಪದೇ ಪದೇ ಬಿತ್ತರಿಸಲಾಯಿತು. ವಿವಿಧ ಸಮಾಚಾರ ಪತ್ರಿಕೆಗಳು ಈ ಮಸೀದಿ ನಿರ್ಮಾಣದ ಕುರಿತು ಉನ್ನತ ಮಟ್ಟದ ಸಮಾಚಾರಗಳು, ಬರಹಗಳು ಬಿತ್ತರಿಸಿದರು. ಹುಝೂರೆ ಅನ್ವರ್ ಅವರ ಭಾಷಣದ ಕೆಲ ಭಾಗಗಳನ್ನು ಅತ್ಯಂತ ಸಕಾರಾತ್ಮಕ ರೀತಿಯಲ್ಲಿ ಪ್ರಕಟಪಡಿಸಿದ್ದರು. ಹೀಗೆ ಲಕ್ಷಾಂತರ ಜನರವರೆಗೆ ಅಹ್ಮದಿಯಾ ಜಮಾಅತಿನ ಪರಿಚಯವಾದಾಂತಾಯಿತು.

**ಮಸ್ಜಿದ್ ಬೈತುಲ್ ಖಾದಿರ್ (Vechta) ನ ಉದ್ಘಾಟನೆ ಮತ್ತು ಮಸ್ಜಿದ್ ದಾರುಸ್ಸಲಾಮ್ (Isemohen) ನ ಅಡಿಗಲ್ಲಿನ ಇಡುವ ಸಮಾರಂಭದ ಸಮಾಚಾರಗಳನ್ನು ಮಾಧ್ಯಮದವರು ಸೆರೆ ಹಿಡಿದರು.**

* Oldenburgllche volkszeifung ನಲ್ಲಿ ಮಸ್ಜಿದ್ ಬೈತುಲ್ ಖಾದಿರ್ ಉದ್ಘಾಟನೆ ಕುರಿತು ಕೆಳಗೆ ನಮೂದಿಸಿದಂತೆ ಸುದ್ದಿಗಳು ಪ್ರಸಾರವಾದವು.

"ಖಲೀಫ'ರು Vechta ನಲ್ಲಿ ಹೊಸ ಮಸೀದಿಯನ್ನು ಉದ್ಘಾಟಿಸುತ್ತಿದ್ದಾರೆ. ಇಂದು ಅಹ್ಮದಿಯಾ ಜಮಾಅತ್ ಸಂಭ್ರಮಿಸುತ್ತಿದೆ. ಅವರ ನೇತಾರರ ಭಾಷಣ ಲೋಕದಾದ್ಯಂತ ಪ್ರಸಾರಗೊಳ್ಳುತ್ತಿದೆ. ಈ ಇಸ್ಲಾಮಿ ಸಂಸ್ಥೆಯು ತನ್ನದೇ ಆದ ಒಂದು ದೂರದರ್ಶನ ಚಾನಲ್ ಹೊಂದಿದೆ. ಹೊಸ ಕಟ್ಟಡದ ಖರ್ಚು ಚಂದಾ ಮೂಲಕವೇ ನಿಭಾಯಿಸಲಾಯಿತು.

Vechta ಹೊಸ ಕಟ್ಟಡದ ಕಚೇರಿಯಲ್ಲಿ ಒಂದೇ ಹಲಗೆ ಇದೆ ಅದರ ಮೇಲಿರುವ ಬರಹ ಹೀಗಿದೆ. "ಮಸ್ಜಿದ್ ಬೈತುಲ್ ಖಾದಿರ್" ಅದರ ಅರ್ಥ "ಸಮರ್ಥ ದೇವನ ಗೃಹ" ಅಹ್ಮದಿಯ ಮುಸ್ಲಿಂ ಜಮಾಅತ್ ಅದನ್ನು ಗೋಡೆಯಲ್ಲಿ ಸ್ಥಾಪಿಸುವರು. **(ಮುಂದುವರಿಯುವುದು)**

## *127 ನೇ ಜಲ್ಸಾ ಸಾಲಾನ ಖಾದಿಯಾನ್*

ಸಯ್ಯದನಾ ಹುಝೂರ್ ಅನ್ವರ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್‌ರವರು 127ನೇ (ವಾರ್ಷಿಕ ಸಮ್ಮೇಳನ) ಜಲ್ಸಾ ಸಾಲನ ಖಾದಿಯಾನಿಗೆ 23, 24 ಮತ್ತು 25ನೇ ಡಿಸೆಂಬರ್ 2022 (ಶುಕ್ರವಾರ, ಶನಿವಾರ ಮತ್ತು ಭಾನುವಾರ) ದ ದಿನಾಂಕಗಳ ಅನುಮತಿ ನೀಡಿದ್ದಾರೆ. ಎಲ್ಲಾ ಸದಸ್ಯರು ಇಂದಿನಿಂದಲೇ ದುಆ ಮಾಡಬೇಕಾಗಿ ಹಾಗೂ ಈ ಸಮ್ಮೇಳನದಲ್ಲಿ ಭಾಗವಹಿಸಲು ವಿನಂತಿ. ಅಲ್ಲಾಹನು ನಮಗೆಲ್ಲ ಈ ಸಮ್ಮೇಳನದಲ್ಲ ಭಾಗಿಯಾಗಲು ತೌಫೀಕ್ ನೀಡಲೀ. ಜಲ್ಸಾ ಸಾಲಾನ ಪ್ರತಿಯೊಂದು ವಿಷಯದಲ್ಲೂ ಅನುಗ್ರಹದಾಯಕವಾಗಲಿ ಅದೇ ರೀತಿ ಶುದ್ಧ ಆತ್ಮಗಳ ಮಾರ್ಗದರ್ಶನಕ್ಕೆ ಕಾರಣವಾಗಲಿ ಎಂದು ದುಆ ಮಾಡುತ್ತಾಯಿರಿ. **ಜಝಾಕುಮಲ್ಲಾಹ್.**

**(ನಾಝಿರ್ ಇಸ್ಲಾಹ್–ವ–ಇರ್‌ಶಾದ್ ಖಾದಿಯಾನ್)**

## **ಖಾದಿಯಾನ್ ದಾರುಲ್ ಅಮಾನ್‌ನಲ್ಲಿ ವಾರ್ಷಿಕ ಇಜ್ತೆಮಾ ನಡೆಯುವ ದಿನಾಂಕಗಳು**

ಸಯ್ಯದನಾ ಹಝ್‌ರತ್ ಅಮೀರುಲ್ ಮೂಮಿನೀನ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಆಝೀಝ್‌ರವರು ಭಾರತದಲ್ಲಿ ಅಂಗ ಸಂಸ್ಥೆಗಳ (ಮಜ್ಲಿಸ್ ಅನ್ಸರುಲ್ಲಾ, ಮಜ್ಲಿಸ್ ಖುದ್ದಾಮುಲ್ ಅಹ್ಮದಿಯಾ, ಲಜ್ನಾ ಇಮಾಇಲ್ಲಾ) ರಾಷ್ಟ್ರೀಯ ವಾರ್ಷಿಕ ಕೂಟಗಳನ್ನು (ಇಜ್ತೆಮಾ) 21, 22 ಮತ್ತು 23ನೇ ಅಕ್ಟೋಬರ್ 2022 ರಂದು (ಶುಕ್ರವಾರ, ಶನಿವಾರ, ಭಾನುವಾರ) ಆಯೋಜಿಸಲು ಅನುಮತಿ ನೀಡಿದ್ದಾರೆ.

ಎಲ್ಲಾ ಉಪ ಸಂಸ್ಥೆಗಳ ಸದಸ್ಯರು ಖಾದಿಯಾನಿನಲ್ಲಿ ಈ ಆಧ್ಯಾತ್ಮಿಕ ಪರಿಸರದಲ್ಲಿ ಆಯೋಜಿಸಲಾಗುವಂತಹ ಇಜ್ತೆಮಾಗಳಲ್ಲಿ ಪಾಲ್ಗೊಳ್ಳಲು ಇಂದಿನಿಂದಲೆ ತಯಾರಿ ಪ್ರಾರಂಭಿಸಿರಿ. ಈ ಇಜ್ತೆಮಾಗಳು ತರಬೇತಿಯ ಮುಖ್ಯ ಮೂಲವಾಗಿದೆ.

**(ಸದರ್ ಮಜ್ಲಿಸ್ ಖುದ್ದಾಮುಲ್ ಅಹ್ಮದಿಯಾ ಭಾರತ)**

REGISTERED WITH THE REGISTRAR OF THE NEWSPAPER FOR INDIA AT NO RN PUNKAN/2020/78613

Weekly **BADAR** Qadian

Distt: Gurdaspur (Pb.) INDIA Qadian - 143516

Postal Reg. No: 3000039689/2020-22 Vol No.03, Thursday, 28 July 2022, Issue No. 30

EDITOR
TARIQ AHMED IDRIS.
Mobile : +91 9902678609
e-mail: kannadabadar@gmail.com
website:www.akhbarbadarqadian.in

MANAGER
SHAIKH MUJAHID AHMAD.
Mobile : +91 99153 79255
e-mail:managerbadrqnd@gmail.com
www.alislam.org/badr

ANNUAL SUBSCRIPTION:Rs.600/- (Per Issue: 10/- ) (WEIGHT: 20-50, grms / issue)

## *ಸಯ್ಯದನಾ ಹಝ್ರತ್ ಅಮೀರುಲ್ ಮೂಮಿನೀನ್ ಖಲೀಫತುಲ್ ಮಸೀಹ್ ಖಾಮಿಸ್‌ರವರ ಜರ್ಮನಿಯ ಪ್ರವಾಸ (ಮೇ, ಜೂನ್ 2015)*

**(ಬದರ್ ಸಂಚಿಕೆ 26ರ ಉಳಿದ ಭಾಗ)**

### 9 ಜೂನ್ 2015 ಮಂಗಳವಾರ (ಶೇಷ ಭಾಗ)

### ಓಶಾಬ್ರುಕ್ (Osnabruk) ನತ್ತ ಪ್ರಯಾಣ

* ಇದೀಗ ಕಾರ್ಯಕ್ರಮದನ್ವಯ ಇಲ್ಲಿಂದ (Osnabruk) ಪ್ರಯಾಣಿಸ ಬೇಕಾಗಿತ್ತು. 8.45 ಗಂಟೆಗೆ ಹುಝೂರ್ ಸಾಮೂಹಿಕ ಪ್ರಾರ್ಥನೆ (ದುಆ) ಮಾಡಿಸಿದರು ಮತ್ತು ಪ್ರವಾಸ ತಂಡವು ಓಸ್ನಾಬುರುಕ್‌ಗೆ ಪ್ರಯಾಣ ಬೆಳೆಸಿತು.

VECHTA ದಿಂದ ಓಸ್ನಾಬುರುಕ್‌ಗೆ ಇರುವ ದೂರವು 60 ಕಿ.ಮೀ ಆಗಿದೆ. ಸುಮಾರು 40 ನಿಮಿಷದ ಪ್ರಯಾಣದ ನಂತರ ಒಂಬತ್ತೂವರೆ ಗಂಟೆಗೆ ಹುಝೂರ್ ಅನ್ವರ್(ಅಬಿಅ) ಓಸ್ನಾಬುರುಕ್ ಮಸೀದಿ ಬಶಾರತ್‌ಗೆ ತಲುಪಿದರು. ಸ್ಥಳೀಯ ಜಮಾಅತ್‌ನ, ಮಹಿಳೆಯರು, ಪುರುಷರು, ಯುವಕರು, ವೃದ್ಧರು ಮತ್ತು ಬಾಲಕ ಬಾಲಕಿಯರು ಅತ್ಯುತ್ಸಾಹದಿಂದ ತಮ್ಮ ಪ್ರಿಯ ನಾಯಕರಿಗೆ ಸ್ವಾಗತ ಕೋರಿ ಘೋಷಣೆಗಳನ್ನು ಕೂಗಿದರು. ಬಾಲಕ ಬಾಲಕಿಯರು ಸ್ವಾಗತ ಹಾಗೂ ಪ್ರಾರ್ಥನಾ ಗೀತೆಗಳನ್ನು ಹಾಡಿದರು. ಹುಝೂರ್ ಅನ್ವರ್(ಅಬಿಅ) ವಾಹನದಿಂದ ಇಳಿಯುತ್ತಲೇ ಸ್ಥಳೀಯ ಅಮೀರ್ ಮುಕರ್ರಮ್ ಇಶ್ತಿಯಾಕ್ ಅಹ್ಮದ್ ಸಾಹಿಬ್, ಸ್ಥಳೀಯ ಅಧ್ಯಕ್ಷರು ಮುಕರ್ರಮ್ ರಾನಾ ಹಫೀಝ್ ಅಹ್ಮದ್ ಸಾಹಿಬ್ ಮತ್ತು ಸ್ಥಳೀಯ ಮುರಬ್ಬಿ ಮುಕರ್ರಮ್ ಮುಸ್ತನ್ಸರ್ ಅಹ್ಮದ್ ಸಾಹಿಬ್, ಹುಝೂರ್ ಅನ್ವರ್ ಅವರಿಗೆ ಶುಭಾಗಮನ ಕೋರುತ್ತ ಹಸ್ತಲಾಘವದ ಭಾಗ್ಯ ಪಡೆದರು. ನಂತರ ಹುಝೂರ್ ತಮ್ಮ ಕೈಗಳನ್ನು ಬೀಸುತ್ತಾ ಎಲ್ಲರಿಗೂ ಅಸ್ಸಲಾಮು ಅಲೈಕುಂ ಹೇಳಿ ಮಿಶನ್ ಹೌಸಿನ ವಸತಿ ನಿಲಯಕ್ಕೆ ತೆರಳಿದರು. ನಂತರ ಹತ್ತು ಗಂಟೆಗೆ ಮಗ್ರಿಬ್ ಇಶಾಅ ನಮಾಝ್ ಜಮಾ ಮಾಡಿ ನಿರ್ವಹಿಸಿಕೊಟ್ಟರು. ನಮಾಝ್ ನಿರ್ವಹಣೆಯ ನಂತರ ಹುಝೂರ್ ತಮ್ಮ ವಸತಿ ನಿಲಯಕ್ಕೆ ತೆರಳಿದರು.

* ಮಸ್ಜಿದ್ ಬಶಾರತ್ ಓಸ್ನಾಬುರುಕ್ ಜರ್ಮನಿಯಲ್ಲಿ ನಿರ್ಮಾಣವಾಗುತ್ತಿರುವ ಪ್ರಾಥಮಿಕ ಮಸೀದಿಗಳಲ್ಲಿ ಒಂದಾಗಿದೆ. ಅದರ ಉದ್ಘಾಟನೆ 2001 ರಲ್ಲಿ ಆಗಿತ್ತು. ಎರಡು ಗೋಪುರಗಳುಳ್ಳ ಮಸ್ಜಿದ್ ಬಶಾರತ್ ತುಂಬಾ ಸುಂದರವಾಗಿ ಕಾಣುತ್ತದೆ. ಅದರಲ್ಲಿ ವಸತಿ ಭಾಗಗಳಲ್ಲದೆ ಸ್ಥಳೀಯ ಜಮಾಅತಿನ ಕಛೇರಿಯು ಇದೆ. ಗ್ರಂಥಾಲಯವು ಇದೆ ಮತ್ತು ಜಮಾಆತಿನ ಅಡುಗೆ ಕೋಣೆ ಇತ್ಯಾದಿಗಳ ಸವಲತ್ತುಗಳು ಇವೆ.

* 26 ಸೆಪ್ಟೆಂಬರ್ 2005 ಸೋಮವಾರ KIEL ಜರ್ಮನಿಯಿಂದ ನನ್‌ಸ್ಪೇಟ್ (ಹಾಲೆಂಡ್) ಹೋಗುವಾಗ ಹಾಗೂ 11 ಅಕ್ಟೋಬರ್ 2011 ಮಂಗಳವಾರ ಹೆಂಬರ್ಗ್ (ಜರ್ಮನಿ) ಯಿಂದ ನನ್‌ಸ್ಪೇಟ್ ಹೋಗುವಾಗ, ಹುಝೂರ್ ಸ್ವಲ್ಪ ಸಮಯ ಇಲ್ಲಿ ತಂಗಿ ಝುಹರ್ ಅಸರ್ ನಮಾಝುಗಳನ್ನು ಜಮಾ ಮಾಡಿ ನಿರ್ವಹಿಸಿಕೊಟ್ಟಿದ್ದರು.

* 4 ಡಿಸೆಂಬರ್ 2012 ಮಂಗಳವಾರ ದಿನ ಹುಝೂರ್ ಅನ್ವರ್ ಬ್ರಿಸಲ್ಸ್ (ಬೆಲ್ಜಿಯಂ) ನಿಂದ ಹೆಂಬರ್ಗ್ (ಜರ್ಮನಿ) ಹೋಗುತ್ತಿರುವಾಗ ರಾತ್ರಿ ಮಸ್ಜಿದ್ ಬಶಾರತ್ ಓಸ್ನಾಬುರುಕ್‌ನಲ್ಲಿ ತಂಗಿದ್ದರು. ಅಲ್ಲಿ ನಮಾಝ್ ಮಗ್ರಿಬ್, ಇಶಾಅ ಜಮಾ ಮಾಡಿ ಮತ್ತು ಮರುದಿನ ಫಜರ್ ನಮಾಝ್ ಇಲ್ಲಿಯೇ ನಿರ್ವಹಿಸಿಕೊಟ್ಟಿದ್ದರು.

* ಈಗ 9 ಜೂನ್ 2015 ಮಂಗಳವಾರ ದಿನ ಹುಝೂರ್ ಅನ್ವರ್ (ಅಬಿಅ) ಫ್ರೆಂಕ್‌ಫರ್ಟ್ (ಜರ್ಮನಿ) ಯಿಂದ ವಾಪಾಸ್ಸು ಲಂಡನ್ ಹೋಗುವಾಗ ನಾಲ್ಕನೇ ಸಲ ಮಸ್ಜಿದ್ ಬಶಾರತ್‌ನಲ್ಲಿ ತಂಗಿದ್ದರು. ಈ ಸಲವು ಒಂದು ರಾತ್ರಿ ಇಲ್ಲಿ ತಂಗಿದ್ದರು.

### ಹುಝೂರೆ ಅನ್ವರ್(ಅತಬಿಅ) ಅವರ ಭಾಷಣ ಕೇಳಿ ಅತಿಥಿಗಳ ಅನಿಸಿಕೆಗಳು

* ಮಸ್ಜಿದ್ ಬೈತುಲ್ ಖಾದಿರ್ ಉದ್ಘಾಟನಾ ಸಮಾರಂಭದ ಸಂದರ್ಭದಲ್ಲಿ ಹುಝೂರ್ ಮಾಡಿದ ಭಾಷಣವು ಅತಿಥಿಗಳ ಮೇಲೆ ತುಂಬಾ ಆಳವಾದ ಪ್ರಭಾವ ಬೀರಿತ್ತು. ಕೆಲ ಅತಿಥಿಗಳು ಮನಪೂರ್ವಕವಾಗಿ ತಮ್ಮ ಅನಿಸಿಕೆಗಳನ್ನು ವ್ಯಕ್ತಪಡಿಸಿದರು.

* ಅತಿಥಿಯೋರ್ವರು ತಮ್ಮ ಅನಿಸಿಕೆಗಳನ್ನು ವ್ಯಕ್ತಪಡಿಸುತ್ತ ಹೇಳಿದರು. ಖಲಿಫತುಲ್ ಮಸೀಹ್‌ರಂತಹ ಮಹಾತ್ಮರು ಕ್ಷಮೆ ಕೋರುವ ಮೂಲಕ ನಮ್ಮ ಹೃದಯವನ್ನು ಗೆದ್ದಿದ್ದಾರೆ. ಇವರುಗಳು ಕೇವಲ ಅಹ್ಮದಿಯರ ಖಲೀಫರಲ್ಲ ಬದಲು ನಮ್ಮೆಲ್ಲರ ಖಲೀಫರಾಗಿದ್ದಾರೆ.

* ಇನ್ನೋರ್ವ ಅತಿಥಿ ಹೇಳಿದರು. ಖಲೀಫತುಲ್ ಮಸೀಹ್ ಇತರ ಭಾಷಣಗಾರರ ಮಾತುಗಳನ್ನು ಉಲ್ಲೇಖಿಸುತ್ತ ಇಸ್ಲಾಮಿ ಶಿಕ್ಷಣವನ್ನು ವಿವರಿಸಿದ್ದು, ತಲೆಯ ಮೇಲೆ ಒಂದು ಕಿರೀಟ ತೊಡಿಸಿದಂತಾಗಿದೆ.

* ಪಕ್ಕದ ಬೀದಿಯಲ್ಲಿ ವಾಸಿಸುವ ಓರ್ವ ಮಹಿಳೆ ಹೇಳಿದರು. ಮಸೀದಿ ನಿರ್ಮಾಣಕ್ಕಿಂತ ಮುಂಚೆ ನಾನು ಜಮಾಅತನ್ನು ತಿಳಿದಿರಲಿಲ್ಲ. ಇದು ನನ್ನ ಮೊದಲ ಅನುಭವವಾಗಿದೆ. ಇಂದು ನನಗೆ ಇಸ್ಲಾಮಿನ ಕುರಿತು ಒಂದು ಹೊಸ ಅನುಭವ ದೊರೆತಂತಾಗಿದೆ. ಈ ಹಿಂದೆ ನನಗೆ ಗೊತ್ತೇ ಇರಲಿಲ್ಲ. ಏಕೆಂದರೆ ನನಗೆ ನಿಮ್ಮ ಬಗ್ಗೆ ತಿಳಿದಿರಲಿಲ್ಲ, ನಿಮ್ಮ ಖಲೀಫರನ್ನು ಕಂಡು ತೀರ ನಮ್ಮ ಹತ್ತಿರದವರನ್ನು ಕಾಣುವಂತಾಯಿತು. ಅವರು ತುಂಬಾ ಮನಮೋಹಕ ವ್ಯಕ್ತಿಯಾಗಿದ್ದಾರೆ. ಅವರೊಳಗೆ ನನಗೆ ಮಾನವೀಯತೆಯ ಕಾಳಜಿ ಕಂಡುಬಂತು. ಅವರು ಅಪರಿಚಿತರಂತೆ ಕಾಣಲಿಲ್ಲ, ಬದಲು ನಮ್ಮವರಾಗಿ ಕಂಡರು.

* ಈ ಸಮಾರಂಭದಲ್ಲಿ ಪಾಲ್ಗೊಂಡಿದ್ದ ಇನ್ನೋರ್ವ ವೃದ್ಧ ವ್ಯಕ್ತಿ ಹೇಳಿದರು, ಹೌದು ನಮಗೆಷ್ಟು ಕಾಯಬೇಕಾಯಿತು. ಆದರೆ ಯಾವ ರೀತಿ ನಿಮ್ಮ ಖಲೀಫರು ನಮಗೆ ಅಭಿನಂದನೆಗಳನ್ನು ಸಲ್ಲಿಸಿದ್ದಾರೆ. ಮತ್ತು ತಡವಾದುದ್ದಕ್ಕೆ ಕ್ಷಮೆ ಕೊರಿದ್ದಾರೆ. ಅದು ತುಂಬಾ ಪ್ರಿಯವಾದುದಾಗಿತ್ತು ನಾವು ಕಾದುದನ್ನೆಲ್ಲ ಮರೆತುಬಿಟ್ಟೆವು.

ಮತ್ತು ಅವರು ಹೇಳಿದರು. ಅದೇ ರೀತಿ ಪೋಪ್ ಸಮಾರಂಬದಲ್ಲಿ ತಡವಾಗಿ ಬಂದಿದ್ದರೆ, ಅವರು ಎಂದೂ ಕ್ಷಮೆ ಕೋರುತ್ತಿರಲಿಲ್ಲ. ಅವರು ಅದು ಅಗತ್ಯವೆಂದು ಸಹ ಭಾವಿಸುತ್ತಿರಲಿಲ್ಲ. ಆದರೆ ಅದರ ಬದಲಿಗೆ ಖಲೀಫರು ಓರ್ವ ಪವಿತ್ರ ವ್ಯಕ್ತಿಯಾಗಿದ್ದರು. ಕ್ಷಮೆ ಕೋರಿದರು ಅದು ಖಂಡಿತವಾಗಿಯೂ ಅವರ ಘನತೆಗೆ ಹಿಡಿದ ಕನ್ನಡಿಯಾಗಿದೆ. ಹುಝೂರ್ ಕ್ಷಮೆಯ ಪದಗಳನ್ನು ಹೇಳುತ್ತಲೇ ನಮ್ಮ ಮುಖಗಳು ಸಂತೋಷದಿಂದ ಅರಳಿದವು.

* ಈ ಸಮಾರಂಭದಲ್ಲಿ ಭಾಗವಹಿಸಿದ್ದ ಓರ್ವ ರೇಡಿಯೋ ಪ್ರತಿನಿದಿ ಹೇಳಿದರು; ನಿಮ್ಮ ಖಲೀಫರು ಆಗಮಿಸುತ್ತಿದ್ದಂತೆ ನನ್ನ ಶರೀರವೆಲ್ಲ ಕಂಪಿಸುತಿತ್ತು. ಹುಝೂರರಿಂದ ಒಂದು ಅದ್ಭುತ ರೀತಿಯ ಪ್ರಕಾಶ ಚಿಮ್ಮುತಿತ್ತು. ಅವರಲ್ಲಿ ಒಂದು ವಿಶೇಷ ರೀತಿಯ ಪ್ರಕಾಶ ಕಂಡುಬಂದಿತು.

* ಈ ಸಮಾರಂಭದಲ್ಲಿ ಉಪಸ್ಥಿತರಿದ್ದ ಓರ್ವ ಜರ್ಮನ್ ಮಹಿಳೆ ತಮ್ಮ ಭಾವನೆಗಳನ್ನು ಹೀಗೆ ಹಂಚಿಕೊಂಡರು. ಹುಝೂರ್ ತನ್ನ ಭಾಷಣದಲ್ಲಿ ಆಫ್ರಿಕಾ ಕುರಿತು ಆಡಿದಂತಹ ಮಾತುಗಳು ಸಂಪೂರ್ಣ ಸತ್ಯವಾಗಿವೆ. ಅವರು ಆಫ್ರಿಕಾದಲ್ಲಿರುವ ನೀರಿನ ಸಂಕಷ್ಟ ಕುರಿತು ವಿವರಿಸುವಾಗ ನನ್ನಲ್ಲಿ ಕಂಪನ ಉಂಟಾಯಿತು. ಅದೇ ಸಮಾರಂಭದಲ್ಲಿ ನನಗೆ ನೀರು ಕೊಡುತ್ತಿರುವಾಗ ಆಫ್ರಿಕಾದಲ್ಲಿರುವ ಬಡವರ ಸ್ಥಿತಿ ಊಹಿಸಿ ನನಗೆ ನೀರು ಕುಡಿಯಲು ದುಸ್ತರ ಎನಿಸಿತು.

* ಈ ಸಮಾರಂಭದಲ್ಲಿ ಭಾಗವಹಿಸಿದ್ದ ಓರ್ವ ಶಾಳೆಯ ಮುಖ್ಯೋಪಾಧ್ಯಾಯಿನಿ ನುಡಿದರು. ನಾನು ಪೋಪರನ್ನು ಸಹ ಭೇಟಿ

*(ಪುಟ ಸಂಖ್ಯೆ-11ರಲ್ಲಿ ಮುಂದುವರಿಸಲಾಗಿದೆ)*

**ಪ್ರೀತಿ ಎಲ್ಲರಲ್ಲೂ, ದ್ವೇಶವಿಲ್ಲ ಯಾರಲ್ಲೂ**

**ಇನ್ಸಾನಿಯತ್ ಝಿಂದಾಬಾದ್, ಮಾನವೀಯತೆ ಚಿರಕಾಲ ಬಾಳಲಿ**

**ಇಸ್ಲಾಮ್ ಮತ್ತು ಅಹ್ಮದಿಯ್ಯತ್‌ನ ಮಾಹಿತಿಗಾಗಿ ನಮ್ಮನ್ನು ಸಂಪರ್ಕಿಸಿ:**

**NATIONAL TOLL FREE : 1800–103–2131**

**ಸಮಯ: ಬೆಳಿಗ್ಗೆ 08:30 ಯಿಂದ ರಾತ್ರಿ 10:30ಯವರೆಗೆ**

**(ಶುಕ್ರವಾರ ರಜೆ)**

Printed & Published by: Jameel Ahmed Nasir on behalf of Nigran Board of Badar. Name of Owner: Nigran Board of Badar. And printed at Fazle-Umar Printing Press. Harchowal Road, Qadian, Distt. Gurdaspur-143516, Punjab. And published at office of the Weekly Badar Mohallah - Ahmadiyya, Qadian Distt. Gsp-143516, Punjab. India. Editor: Tariq Ahmed Idris.